## ನೀನಾಸಮ್ ರಂಗಶಿಕ್ಷಣ ಕೇಂದ್ರ

ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

### ಡಿಪ್ಲೋಮಾ ಇನ್ ಥಿಯೇಟರ್ ಆರ್ಟ್ಸ್

ಪ್ರಕಟಣೆ

ಕರ್ನಾಟಕ ರಾಜ್ಯ ಸರ್ಕಾರದ ಮಾನ್ಯತೆ ಪಡೆದಿರುವ ನೀನಾಸಮ್ ರಂಗಶಿಕ್ಷಣ ಕೇಂದ್ರ ೨೦೦೬ -೨೦೦೭ನೇ ಸಾಲಿನ ಪ್ರಶಿಕ್ಷಣಕ್ಕೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ. ಪ್ರವೇಶಕ್ಕೆ ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಇರಬೇಕು. ಪದವೀಧರರಿಗೆ ಆದ್ಯತೆ ಇರುತ್ತದೆ. ರಂಗಭೂಮಿಯಲ್ಲಿ ಆಸಕ್ತಿಯಿದ್ದು, ಸ್ವಲ್ಪಮಟ್ಟಿನ ಅನುಭವ ಇರಬೇಕಾದ್ದು ಅಗತ್ಯ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಊಟ, ವಸತಿ ವ್ಯವಸ್ಥೆಯಿದೆ. ಎಲ್ಲರಿಗೂ ವಿದ್ಯಾರ್ಥಿವೇತನ ದೊರೆಯುತ್ತದೆ.

ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ರಂಗಕಲ್ಪನೆ, ರಂಗ ಇತಿಹಾಸ, ನಾಟಕ ಇತಿಹಾಸ, ರಂಗನಟನೆ, ರಂಗಸಿದ್ಧತೆ, ರಂಗವ್ಯವಸ್ಥೆ ಮುಂತಾಗಿ ವಿಸ್ತಾರವಾದ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಶಿಕ್ಷಣ ನೀಡಲಾಗುತ್ತದೆ. ಕೇಂದ್ರದ ನುರಿತ ಅಧ್ಯಾಪಕರುಗಳಲ್ಲದೆ ಹೊರಗಿನ ತಜ್ಞರನ್ನು ಕರೆಸಿ ಸಾಕಷ್ಟು ಪ್ರಬುದ್ಧ ಶಿಕ್ಷಣ ಕೊಡಲಾಗುತ್ತದೆ. ಒಳ್ಳೆಯ ಗ್ರಂಥಭಂಡಾರ ಹಾಗೂ ದೃಶ್ಯಶ್ರವ್ಯ ಪರಿಕರಗಳ ಅನುಕೂಲತೆಯಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರತಿದಿನ ಸುಮಾರು ೧೨ ಗಂಟೆಗಳಷ್ಟು ಅಭ್ಯಾಸದಲ್ಲಿ ತೊಡಗಿರಬೇಕಾಗುತ್ತದೆ.

ಪ್ರಾಸ್ಪೆಕ್ಟಸ್ ಮತ್ತು ಪ್ರವೇಶ ಪತ್ರಕ್ಕೆ ರೂ. ೧೦೦-೦೦ ಕಳಿಸಿ ಬರೆದುಕೊಳ್ಳಬಹುದು. ಪ್ರವೇಶ ಪತ್ರವನ್ನು ಭರ್ತಿಮಾಡಿ ೨೪-೬-೨೦೦೬ ಶನಿವಾರದ ಒಳಗೆ ನೀನಾಸಮ್ ರಂಗಶಿಕ್ಷಣ ಕೇಂದ್ರ, ಹೆಗ್ಗೋಡು, ಸಾಗರ, ಶಿವಮೊಗ್ಗ ೫೭೭ ೪೧೭ ಈ ವಿಳಾಸಕ್ಕೆ ತಲುಪುವಂತೆ ಕಳಿಸಬೇಕು. ದಿನಾಂಕ ೧ ಜುಲೈ ೨೦೦೬ ಶನಿವಾರ ಮತ್ತು ೨ ಜುಲೈ ೨೦೦೬ ಭಾನುವಾರ ಬೆಳಿಗ್ಗೆ ನಡೆಯುವ ಆಯ್ಕೆಯ ಸಂದರ್ಶನಕ್ಕೆ ಅಭ್ಯರ್ಥಿಗಳು ತಮ್ಮ ವೆಚ್ಚದಲ್ಲೇ ಹೆಗ್ಗೋಡಿಗೆ ಬಂದು ಹಾಜರಿರಬೇಕು.

ಹೆಗ್ಗೋಡು ಪ್ರಾಂಶುಪಾಲರು<br>
೧೦-೦೪-೨೦೦೬ ನೀನಾಸಮ್ ರಂಗಶಿಕ್ಷಣ ಕೇಂದ್ರ

# ಹೆಣ್ಣು ಮತ್ತು ಹಿಂಸೆ

ಎಂ. ಎಸ್. ಆಶಾದೇವಿ

ಕಳೆದ ನಾಲ್ಕು ದಿನಗಳಿಂದ ಹಿಂಸೆಯ ಬದಲಾಗುತ್ತಿರುವ ರೂಪಗಳ ಬಗ್ಗೆ, ಕಾರ್ಯವಿಧಾನಗಳ ಬಗ್ಗೆ, ಅದು ನಮ್ಮ ಬದುಕನ್ನು ತಲ್ಲಣಗೊಳಿಸುತ್ತಿರುವ ಬಗ್ಗೆ ಸುಧೀರ್ಘವಾದ ಚರ್ಚೆಗಳು ನಡೆದಿವೆ. ಈ ಚರ್ಚೆಗಳ ಬಹುಮುಖ್ಯವಾದ ಶೋಧನೆ ಎಂದರೆ ನಿರೀಕ್ಷಿತ ವಲಯದಲ್ಲಿ ಮಾತ್ರವಲ್ಲದೇ ಅನಿರೀಕ್ಷಿತ ವಲಯಗಳಲ್ಲೂ ಹಿಂಸೆ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತಿರುವ, ತನ್ನ ಹರಹನ್ನು ವಿಸ್ತರಿಸಿಕೊಳ್ಳುತ್ತಿರುವ ವಿಧಾನ ಮತ್ತು ವೇಗ. ಪ್ರೊ. ಶಿವ ವಿಶ್ವನಾಥನ್ ಹಿಂಸೆಯ ನೆನಪುಗಳ ಬಗ್ಗೆ ಮಾತನಾಡುತ್ತಾ ದೇಶ ವಿಭಜನೆಯ ಹಿಂಸಾತ್ಮಕ ನೆನಪುಗಳು ಕಾಲದ ಅಂತರದಲ್ಲಿ ಪಡೆದುಕೊಳ್ಳುವ ಬದಲಾದ ವಿನ್ಯಾಸಗಳ ಬಗ್ಗೆ ವಿವರಿಸಿದರು. ಆದರೆ ಹೆಣ್ಣಿನ ಮಟ್ಟಿಗೆ ಹಿಂಸೆ ಎನ್ನುವುದು ಎಂಥ ಜೀವ ಕೊರಳ ಸಂಗಾತಿ ಎಂದರೆ ನಾವು ಹೆಣ್ಣು ಮತ್ತು ಹಿಂಸೆಯ ಬಗ್ಗೆ ಚರ್ಚಿಸಬೇಕೆಂದರೆ ನಮ್ಮ ಈ ಘಳಿಗೆಯನ್ನು, ವರ್ತಮಾನವನ್ನು ಬಿಟ್ಟು ಬೇರೆ ಮಾತನಾಡಲಾರದಷ್ಟು ಹಿಂಸೆಯ ಅನುಭವ ಸಾಂದ್ರವಾಗಿರುತ್ತದೆ, ತೀವ್ರವಾಗಿರುತ್ತದೆ.

ಎರಡು ಪ್ರಮೇಯಗಳನ್ನಿಟ್ಟುಕೊಂಡು ಚರ್ಚೆಯನ್ನು ಬೆಳೆಸಲು ಪ್ರಯತ್ನಿಸುತ್ತೇನೆ. ಮೊದಲನೆಯದು, ಹೆಣ್ಣು ಹಿಂಸೆಯ ಗುರಿಯೂ ಹೌದು, ಮಾಧ್ಯಮವೂ ಹೌದು. ಇತರ ವಲಯಗಳ ಹಿಂಸೆಗಿಂತ ಹೆಣ್ಣು ಮತ್ತು ಹಿಂಸೆಯ ಸಂಬಂಧ ನಿರ್ಣಾಯಕವಾಗಿ ಭಿನ್ನವಾಗುವುದು ಈ ಕಾರಣಕ್ಕೆ. ಎರಡನೆಯದು, ಹೆಣ್ಣಿನ ಮೇಲೆ ನಡೆಯುತ್ತಿರುವ ಬಹುತೇಕ ಹಿಂಸೆಗಳಿಗೆ ಸಾಮಾಜಿಕವಾದ ಅಧಿಕೃತತೆ ಇಲ್ಲ. ಅಕ್ಕಮಹಾದೇವಿಯ ವಚನವೊಂದನ್ನು ಬಳಸಿಕೊಂಡು ಹೇಳುವುದಾದರೆ ಈ ಬಗೆಯ ಹಿಂಸೆಗಳು 'ಕಿಚ್ಚಿಲ್ಲದ ಬೇಗೆಯ ಏರಿಲ್ಲದ ಗಾಯ'ದ ಸ್ವರೂಪದವು. ಅದು ಬೇಗೆಯೆಂದು ಗೊತ್ತಿದ್ದೂ, ಗಾಯ ಎಂದು ಗೊತ್ತಿದ್ದೂ ಅದನ್ನು ಕುರುಹುಗಳಿಲ್ಲದ ಹಾಗೆ ನಿಭಾಯಿಸುವ ಕ್ರೌರ್ಯದ ಆತ್ಯಂತಿಕ ಮಾದರಿ.

ಈ ಅಂಶಗಳನ್ನು ಸ್ವಲ್ಪ ವಿವರಿಸಿಕೊಳ್ಳಬಹುದು. ನಾನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿರುವ ಎರಡೂ ಮಾದರಿಗಳ ಹಿಂಸೆಗಳೇನಿವೆ ಅವುಗಳ ಅಂತಿಮ ಗುರಿ

ಹೆಣ್ಣನ್ನು ಎಲ್ಲಾ ಅರ್ಥದಲ್ಲಿ ಅಭದ್ರಗೊಳಿಸುವುದು ಮತ್ತು ಲೈಂಗಿಕತೆಯಾಚೆಗಿನ ಅವಳ ವ್ಯಕ್ತಿತ್ವವನ್ನು ಗುರುತಿಸುವುದನ್ನು ನಿರಾಕರಿಸುವ ಪ್ರಯತ್ನ. ಹೆಣ್ಣನ್ನು ಕುರಿತ ಬಹುಪಾಲು ಹಿಂಸೆಗಳು ಕೊನೆಯಾಗುವುದು, ಕೊನೆಯಾಗಲು ಬಯಸುವುದು, ಉದ್ದೇಶಿಸುವುದು ಅವಳ ಲೈಂಗಿಕತೆಯಲ್ಲಿ.

ಅಪ್ರತಿಮ ದೇಶಭಕ್ತ, ವೀರ ಎಂದೆಲ್ಲಾ ಕರೆಯಲಾಗುವ ಸಾವರ್ಕರ್ ಹೇಳುವ ಈ ಮಾತುಗಳನ್ನು ಗಮನಿಸೋಣ:

> *ಅತ್ಯಾಚಾರ ಅಪರಾಧವಲ್ಲ, ನಿಜ ಹೇಳಬೇಕೆಂದರೆ ಮುಸ್ಲಿಮರ ವಿರುದ್ಧದ ಯುದ್ಧದಲ್ಲಿ ಅದೊಂದು ಆಯುಧ. ಸಮಯ, ಸ್ಥಳ, ವ್ಯಕ್ತಿ, ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡರೆ ಇದನ್ನು ನೈತಿಕವಾಗಿ ಕೆಟ್ಟದ್ದು ಎಂದು ಪರಿಗಣಿಸುವುದು ಉದಾತ್ತಗುಣದ ವಕ್ರೀಕರಣವಾಗುತ್ತದೆ. ಇದೇ ಹಿಂದೂ ರಾಷ್ಟ್ರದ ಅಪಮಾನಕ್ಕೆ ಹಾಗೂ ಸೋಲಿಗೆ ಚಾರಿತ್ರಿಕವಾಗಿ ಕಾರಣವಾಗಿದೆ.*

ವೀರ ದೇಶಭಕ್ತರ ಈ ಮಾತುಗಳನ್ನು ಈಗಲೂ ಅಕ್ಷರಶಃ ನಂಬಲಾಗಿದೆ ಮತ್ತು ಪಾಲಿಸಿಕೊಂಡು ಬರಲಾಗುತ್ತಿದೆ ಎನ್ನುವುದಕ್ಕೆ ಗೋಧ್ರಾದ ಸಂದರ್ಭದಲ್ಲಿ ಮಾತ್ರವಲ್ಲ ಬಹುಪಾಲು ಕೋಮು ಗಲಭೆಗಳಲ್ಲಿ ನಮಗೆ ಸಾಕ್ಷ್ಯಗಳು ಸಿಗುತ್ತವೆ.

ನನ್ನ ಒತ್ತು ಈ ಮಾತನ್ನು ವೀರ ದೇಶಭಕ್ತರು ಹೇಳಿದರು, ಅದರ ಚಾರಿತ್ರಿಕ ಹಿನ್ನಲೆ ಈ ಎಲ್ಲದಕ್ಕಿಂತ ಹೆಚ್ಚಾಗಿ 'ಅತ್ಯಾಚಾರ ಎನ್ನುವುದನ್ನು ಹೇಗೆ ಒಂದು ಶಕ್ತವಾದ, ಪರಿಣಾಮಕಾರಿಯಾದ ಆಯುಧವಾಗಿ ಪರಿವರ್ತಿಸಿಕೊಳ್ಳಲಾಗಿದೆ ಮತ್ತು ಈಗಲೂ ಅದು ಅಷ್ಟೇ ಪರಿಣಾಮಕಾರಿಯಾದ ಒಂದು ಆಯುಧವಾಗಿ ಉಳಿದಿದೆ ಎನ್ನುವುದರ ಬಗ್ಗೆ.

ಗೋಧ್ರಾದ ಸಂದರ್ಭದಲ್ಲಿ ಸೂರತ್‌ನಲ್ಲಿ ಒಂದು ದೊಡ್ಡ ಹಾಲಿನಲ್ಲಿ ಅವರು ಎಳೆದುಕೊಂಡು ಬಂದ ಹೆಣ್ಣುಮಕ್ಕಳನ್ನೆಲ್ಲಾ ಒಟ್ಟಿಗೆ ಸೇರಿಸಿ, ಅವರನ್ನೆಲ್ಲಾ ವಿವಸ್ತ್ರಗೊಳಿಸಿ, ಆ ಹಾಲಿಗೆ ಎಲ್ಲಾ ಕಡೆಗಳಿಂದ ಫ್ಲಡ್ ಲೈಟ್‌ಗಳನ್ನು ಹಾಕಿಸಿ ಅದರ ವೀಡಿಯೋ ಚಿತ್ರೀಕರಣ ಮಾಡಲಾಯಿತು. ಈ ಚಿತ್ರಹಿಂಸೆಯ ನಂತರ ಅವರ ಗುಪ್ತಾಂಗಗಳ ಮೇಲೆ ಓಂ ಎಂದು ಬರೆದರು. ಏಳು ತಿಂಗಳ ಗರ್ಭಿಣಿಗೆ ಹಿಂಸೆಯ ಸಂದರ್ಭದಲ್ಲಿ ಅವಳ ಹೊಟ್ಟೆಯನ್ನು ಸೀಳಿ ಭ್ರೂಣವನ್ನು ಹೊರತೆಗೆದು ಶ್ರೀರಾಮ್ ಎಂದು ಭಜಿಸುತ್ತಾ ಅದನ್ನು ಕೊಂದರು.

ಈ ಎಲ್ಲಾ ಸನ್ನಿವೇಶಗಳಲ್ಲಿ ನಾವು ಗಮನಿಸಬೇಕಾಗಿರುವುದು ಈ ಬಗೆಯ ಕೋಮುವಾದವೂ ಸೇರಿದಂತೆ ಇತರ ಸಾರ್ವಜನಿಕ ಪ್ರಸಂಗಗಳಲ್ಲಿ ಹಿಂಸಾಚಾರಕ್ಕೆ ಒಳಗಾಗುವ ಹೆಣ್ಣಿಗೆ ಇದು ಅವಳ ಆಯ್ಕೆಯಾಗಿರುವುದಿಲ್ಲ. ಗಂಡು ಉದ್ದೇಶ ಪೂರ್ವಕವಾಗಿ ತನ್ನ ವಿವೇಕವನ್ನು ಕಳೆದುಕೊಂಡಿದ್ದಾನೆ, ಅವನ ಮಟ್ಟಿಗೆ ಇದೊಂದು ಪ್ರಜ್ಞಾಪೂರ್ವಕವಾದ ಕ್ರಿಯೆ. ಆದರೆ ಹೆಣ್ಣಿನ ಮಟ್ಟಿಗೆ ಇದೊಂದು ಬಲವಂತದ



ಆಕ್ರಮಣದ ಕ್ರಿಯೆ. ಇಂತಹ ತೀವ್ರ ಹಿಂಸಾತ್ಮಕವಾದ ಘಳಿಗೆಗಳಲ್ಲಿ ಹೆಣ್ಣಿನ ಅಪಾರ ಆತ್ಮವಿಶ್ವಾಸವೋ, ವಿದ್ಯಾಭ್ಯಾಸವೋ ಯಾವುದೂ ಅವಳ ನೆರವಿಗೆ ಬರದೇ ಹೆಣ್ಣಿನ ಮೇಲಿನ ವ್ಯವಸ್ಥೆಯ, ಗಂಡಿನ ಪ್ರಶ್ನಾತೀತವಾದ ಹಿಡಿತ ಎನ್ನುವುದು ಸಾಬೀತಾಗಿ ಬಿಡುತ್ತದೆ. ಹೆಣ್ಣನ್ನು ಭಾವುಕವಾಗಿ, ಬೌದ್ಧಿಕವಾಗಿ ಅಭದ್ರತೆಯ ಮನಃಸ್ಥಿತಿಗೆ ತಳ್ಳುವಲ್ಲಿ ಇವೆಲ್ಲಾ ಯಶಸ್ವಿಯಾಗಿ ಬಿಡುತ್ತವೆ. ರಾಷ್ಟ್ರೀಯ ಮಹಿಳಾ ಆಯೋಗದವರು ಗೋಧ್ರಾಕ್ಕೆ ಬಂದದ್ದು ಗಲಭೆಗಳೆಲ್ಲಾ ನಿಂತು ೨೦ ದಿನಗಳಾದ ಮೇಲೆ. ಅಷ್ಟು ಹೊತ್ತಿಗೆ ಘಟನೆಯ ತೀವ್ರತೆ ಸಾಕಷ್ಟು ಕಡಿಮೆಯಾಗಿತ್ತು, ಸಾಕ್ಷ್ಯಾಧಾರಗಳು ನಾಶವಾಗಿದ್ದವು. ಇಷ್ಟೆಲ್ಲಾ ಆದ ಮೇಲೂ ಅವರು ಕೊಟ್ಟ ವರದಿಯಲ್ಲಿ ಕೇವಲ ೨೦ ಮಹಿಳೆಯರು ಮಾತ್ರ ಅತ್ಯಾಚಾರಕ್ಕೆ ಒಳಗಾಗಿದ್ದಾರೆ ಎಂದು ಹೇಳಿದರು. ಮಾತ್ರವಲ್ಲ ಪರಿಸ್ಥಿತಿ ಗಂಭೀರವಾಗೇನೂ ಇಲ್ಲ, ನಿಯಂತ್ರಣದಲ್ಲಿದೆ ಎಂದೂ ವರದಿ ಹೇಳುತ್ತದೆ.

ಕೆಲವು ದಿನಗಳ ಹಿಂದೆ ಒಂದು ಎನ್.ಜಿ.ಓ.ದವರು ನಡೆಸಿದ ಅಧ್ಯಯನವನ್ನು ಓದುತ್ತಿದ್ದಾಗ ಉತ್ತರ ಭಾರತದಲ್ಲಿ ಈಗಲೂ ಕೆಲವು ಹಳ್ಳಿಗಳಲ್ಲಿ ಚಾಲ್ತಿಯಲ್ಲಿದೆ ಎಂದು ಗುರುತಿಸಲಾಗಿರುವ ಒಂದು ವದಂತಿಯನ್ನು ಅದರಲ್ಲಿ ವಿವರಿಸಿದ್ದರು. ಮುಖ್ಯವಾಗಿ ಜಮೀನುದಾರರು ರೂಢಿಯಲ್ಲಿಟ್ಟುಕೊಂಡಿರುವ ಪದ್ಧತಿ ಅದು. ಅವರು ಮನೆಯಿಂದ ಹೊರಗೆ ಹೊರಡುವಾಗ ಹೆಣ್ಣು ಮಕ್ಕಳಿಗೆ ಅವರ ಸೊಂಟವನ್ನು ಬಳಸುವ ಒಂದು ಉಪಕರಣವನ್ನು ತೊಡಿಸಿ ಅದಕ್ಕೆ ಬೀಗ ಹಾಕಿಕೊಂಡು ಬೀಗದ ಕೈಯನ್ನು ಅವರು ತೆಗೆದುಕೊಂಡು ಹೋಗುತ್ತಾರೆ. ಈ ಉಪಕರಣದ ದೆಸೆಯಿಂದ ಆ ಹೆಣ್ಣುಮಕ್ಕಳು ಮೂತ್ರ ವಿಸರ್ಜನೆ ಮಾಡಲೂ ಆಗುವುದಿಲ್ಲ. ಗಂಡು ಬಂದು ಬೀಗವನ್ನು ತೆಗೆದಾದ ಮೇಲೆಯೇ ಆಕೆ ಮೂತ್ರ ವಿಸರ್ಜನೆ ಮಾಡಬೇಕು. ಇವರು ಜಮೀನುದಾರರು, ಮೂಲತಃ ಊಳಿಗಮಾನ್ಯ ದೃಷ್ಟಿಯವರು. ಇವರಿಗೆ ಹೆಣ್ಣು ಒಂದು ವಸ್ತುವಿಶೇಷ ಮಾತ್ರ. ಸರಿ. ಆದರೆ, ಇಂಫಾಲದಲ್ಲಿ ನಮ್ಮ ಸೈನಿಕರು ಮಾಡಿದ್ದನ್ನು ಹೇಗೆ ಅರ್ಥೈಸಬೇಕು? ದೇಶ ಕಾಯುವ ನಮ್ಮ ಸೈನಿಕರು ೨೬ರ ಹರೆಯದ ಯುವತಿಯೊಬ್ಬಳನ್ನು ಮನೆಯಿಂದ ಅವಳ ಮನೆಯವರ ಎದುರಿಗೇ ಅವರ ವಿರೋಧದ ನಡುವೆಯೇ ಎಳೆದೊಯ್ದು ಅವಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದರು. ಅದರ ಬಗ್ಗೆ ಕಳೆದ ವರ್ಷ ಹೆಗ್ಗೋಡಿನಲ್ಲಿ ನೋಡಿದ್ದು ನನ್ನ ನೆನಪಿನಲ್ಲಿದೆ. ಅವಳ ಎದೆಗೆ ಸೊಂಟಕ್ಕೆ ಹೊಡೆದ ಗುಂಡುಗಳನ್ನು ಅವಳು ತಪ್ಪಿಸಿಕೊಂಡು ಹೋಗುವಾಗ ಅದನ್ನು ತಪ್ಪಿಸಲೆಂದು ಬೆನ್ನಿಗೆ, ಕಾಲಿಗೆ ಹೊಡೆದದ್ದು ಎಂದು ಕೊಡುವ ಪೋಸ್ಟ್ ಮಾರ್ಟಂ ವರದಿಯನ್ನು ನಿಜ ಎಂದು ಒಪ್ಪಿಕೊಳ್ಳಲಾಗುತ್ತದೆ. ಆ ಹುಡುಗಿಯ ಮನೆಯವರು ಕೊಟ್ಟ ದೂರಿಗೆ ಯಾವ ಬೆಲೆಯೂ ಉಳಿಯಲಿಲ್ಲ. ಇದನ್ನು ವಿರೋಧಿಸಿ

ಅಲ್ಲಿ ಮಹಿಳೆಯರು ಬೆತ್ತಲೆಯಾಗಿ ಪ್ರತಿಭಟನೆ ನಡೆಸಿದರೂ ತಪ್ಪಿತಸ್ಥ ಸೈನಿಕರ ವಿರುದ್ಧ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಇಂತಹ ನೂರಾರು ಪ್ರಸಂಗಗಳು ನಡೆಯುತ್ತಲೇ ಇರುತ್ತವೆ. ಬೆಳಕಿಗೆ ಬರುವ ಪ್ರಸಂಗಗಳು ಬೆರಳೆಣಿಕೆಯಷ್ಟು ಮಾತ್ರ.

ಎಂದರೆ, ನಿರ್ದಿಷ್ಟ ಸನ್ನಿವೇಶಗಳಲ್ಲಿ, ಸಾಧಾರಣ ಸನ್ನಿವೇಶಗಳಲ್ಲಿ, ಅಸಾಧಾರಣ ಸನ್ನಿವೇಶಗಳಲ್ಲಿ ಹೀಗೆ ಯಾವ ರೀತಿಯ ಸಂದರ್ಭಗಳಲ್ಲಿ ನೋಡಿದಾಗಲೂ ಹೆಣ್ಣಿನ 'ಲೈಂಗಿಕ' ಅಸ್ತಿತ್ವವೇ ಮೂಲವಾಗಿ, ಅದನ್ನೆ ಅವಳ ಅಸ್ತಿತ್ವದ ಕೇಂದ್ರವಾಗಿ ಮಾಡುವುದರ ಮೂಲಕ ವ್ಯವಸ್ಥೆ ಎರಡು ಆತ್ಯಂತಿಕ ಪ್ರಯೋಜನಗಳನ್ನು ವ್ಯವಸ್ಥೆಯ ಯಥಾಸ್ಥಿತಿಯ ಮುಂದುವರಿಕೆಯನ್ನು ಪಡೆದುಕೊಳ್ಳುತ್ತಿರುತ್ತದೆ. ಒಂದು, ಲೈಂಗಿಕ ವ್ಯಕ್ತಿತ್ವದಾಚೆಗಿನ ಅವಳ ಅಸ್ಮಿತೆಯನ್ನು ನಿರಾಕರಿಸುವ ಪ್ರಯತ್ನ. ಇನ್ನೊಂದು, ಹೆಣ್ಣಿನ ಇಡೀ ಬದುಕನ್ನು ಸಾಮಾಜಿಕ ನಿಯಂತ್ರಣಕ್ಕೆ ಒಳಪಡಿಸುವ ಪ್ರಯತ್ನ. ಈ ಕಾರಣಕ್ಕಾಗಿಯೇ ಹೆಣ್ಣಿನ ಮೇಲಾಗುವ ಹಿಂಸೆಗೆ ಸಾಮಾಜಿಕ ಅಧಿಕೃತತೆ ದೊರೆಯುತ್ತಿಲ್ಲ ಎಂದು ನಾನು ಹೇಳುತ್ತಿರುವುದು. ಹೆಣ್ಣಿನ ಪರವಾಗಿ ಕಾನೂನುಗಳಿರಬಹುದು, ಆದರೆ ಅಧಿಕೃತತೆ ಇಲ್ಲ.

ಇನ್ನೊಂದು ಮುಖ್ಯವಾದ ಅಂಶ ಅಭಿವೃದ್ಧಿ ಮತ್ತು ಹೆಣ್ಣಿನ ಹಿಂಸಾತ್ಮಕವಾದ ಸಂಬಂಧಃ ವಂದನಾಶಿವ ಕೆಲವು ವರ್ಷಗಳ ಹಿಂದೆ ಅಭಿವೃದ್ಧಿಯೆನ್ನುವುದು ಹೆಣ್ಣಿನ ಮಟ್ಟಿಗೆ ಒಂದು ಅಭಿಶಾಪ, ಅದರಿಂದ ಹೆಣ್ಣಿನ ಸ್ಥಿತಿಗತಿಯಲ್ಲಿ ಮೂಲಭೂತವಾದ ಬದಲಾವಣೆಗಳು ಸಾಧ್ಯವಿಲ್ಲ ಎಂದು ಹೇಳಿದಾಗ ಅದರ ಬಗೆಗೆ ಅನೇಕ ಅನುಮಾನಗಳಿದ್ದವು. ಆದರೆ ಇಂದಿನ 'ಸರಕು ಸಂಸ್ಕೃತಿ'ಯಲ್ಲಿ ಹೆಣ್ಣು ಗರಿಷ್ಠ ಲಾಭದ ಮೂಲ ಬಂಡವಾಳವಾಗಿ ಹೂಡಲ್ಪಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ಅಂಶದಲ್ಲಿಯೂ ನಾನು ಪ್ರಸ್ತಾಪಿಸಿದ ಎರಡೂ ಪ್ರಮೇಯಗಳನ್ನು ಗುರುತಿಸಬಹುದು. ಹೆಣ್ಣು ಈಗಲೂ ಅಭಿವೃದ್ಧಿ ಕಾರ್ಯಕ್ರಮಗಳ ಕೇಂದ್ರವಲ್ಲ. ಹೆಣ್ಣು 'ಅಭಿವೃದ್ಧಿಯ ಘಟಕ'ವೂ ಅಲ್ಲ. ಹೆಣ್ಣನ್ನು ಕುರಿತ ಅಭಿವೃದ್ಧಿ ಕಾರ್ಯಕ್ರಮಗಳನ್ನು 'ಸಮಾಜ ಕಲ್ಯಾಣ'ದ ಒಂದು ಅಂಗವಾಗಿ ಮಾತ್ರ ನೋಡಲು ಸಾಧ್ಯ. ಕಲ್ಯಾಣ, ಸುಧಾರಣೆ ಯಾವಾಗಲೂ ಮೂಲಭೂತ ಬದಲಾವಣೆಯನ್ನು ಉದ್ದೇಶಿಸಿದವಲ್ಲ. ಯಥಾಸ್ಥಿತಿಯಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳನ್ನು ಮಾಡುವ ಉದ್ದೇಶದವು. ವಂದನಾಶಿವ ಮೊದಲಾದವರು ಆಧುನೀಕರಣದ ಮತ್ತು ಅಭಿವೃದ್ಧಿಯ ಪ್ರಕ್ರಿಯೆಯು ಹೆಣ್ಣುಮಕ್ಕಳಿಗೆ ಮಾರಕವಾದುದು ಎಂದು ಹೇಳುವುದನ್ನು ಈ ಹಿನ್ನೆಲೆಯಲ್ಲಿಯೇ ಪರಿಶೀಲಿಸಬೇಕು. ವಂದನಾಶಿವ ಮೊದಲಬಾರಿಗೆ ಈ ಬಗೆಯ ನಿಲುವನ್ನು ಪ್ರಕಟಿಸಿದಾಗ ಅದಕ್ಕೆ ಅಪಾರ ವಿರೋಧ ವ್ಯಕ್ತವಾಯಿತು. ಮಹಿಳೆಯರನ್ನು ಕುರಿತ



ಸರ್ಕಾರಿ ಯೋಜನೆಗಳನ್ನು, ಬದಲಾಗದ ಸಮುದಾಯದ ಮೂಲಭೂತ ದೃಷ್ಟಿಕೋನಗಳನ್ನು ನಾವು ಅಭಿವೃದ್ಧಿಯ ಹೆಸರಿನಲ್ಲಿ ಹೆಣ್ಣನ್ನೇ ಬಂಡವಾಳವಾಗಿ ಪರಿವರ್ತಿಸಿರುವ ಕಟು ವಾಸ್ತವವನ್ನು ಒಟ್ಟಿಗೇ ಇಟ್ಟು ನೋಡಿದಾಗ ವಂದನಾಶಿವ ಪ್ರತಿಪಾದಿಸಲು ಹೊರಟಿರುವ ಅಂಶಗಳು ಸ್ಪಷ್ಟವಾಗುತ್ತವೆ. ಇದು ಗೋಚರ ಸ್ವರೂಪವಾದರೆ, ಅಗೋಚರ ಸ್ವರೂಪದಲ್ಲಿ ಇನ್ನೊಂದು ದುರಂತವಿದೆ. ಹೆಣ್ಣಿನ ದೇಹದ ಬಂಡವಾಳ ಪ್ರಕ್ರಿಯೆಯನ್ನು ಹೆಣ್ಣಿನ ಮೇಲಾಗುತ್ತಿರುವ ದೌರ್ಜನ್ಯ, ಹಿಂಸೆ ಎಂದು ಗುರುತಿಸುವುದರ ಜೊತೆಗೆ ಎಲ್ಲವೂ ಸರಕಾಗುತ್ತಿರುವ ಜಾಗತಿಕ ಪ್ರಕ್ರಿಯೆಯ ಬೆಳವಣಿಗೆ ಎಂದೂ ಗುರುತಿಸಬಹುದು ನಿಜ. ಆದರೆ ಯಾವಾಗ ಇದನ್ನು ಜಾಗತೀಕರಣದ ಪ್ರಕ್ರಿಯೆಯ ಒಳಗಿಟ್ಟು ಚರ್ಚಿಸಲು ಪ್ರಾರಂಭಿಸುತ್ತೇವೋ ಆಗ ಈ ಸಮಸ್ಯೆಗಿರುವ ನಿರ್ದಿಷ್ಟತೆ ಮತ್ತು ಮಹತ್ವ ಎರಡೂ ಕಡಿಮೆಯಾಗುತ್ತವೆ. ಅಭಿವೃದ್ಧಿಯ ಹೆಸರಿನಲ್ಲಿ ಹೆಣ್ಣಿನ ದೇಹವನ್ನೂ ವೃತ್ತಿಯಾಗಿ ಮಾರ್ಪಡಿಸಿರುವ ದುರಂತ. ಈ ದುರಂತದಲ್ಲಿ ಪಾಲ್ಗೊಳ್ಳುತ್ತಿರುವ ಮಹಿಳೆಯರಿಗೆ ದೇಹ ವೃತ್ತಿಯನ್ನು ಅಭಿವೃದ್ಧಿ ಮತ್ತು ವೃತ್ತಿ ಎನ್ನುವ ಮಿಥ್ಯಾ ಪರಿಕಲ್ಪನೆಗಳ ಭ್ರಮೆಯನ್ನು ಹುಟ್ಟಿಸಲಾಗಿದೆ.

ವಿಶ್ವದ ಪ್ರಖ್ಯಾತ ಅರ್ಥಶಾಸ್ತ್ರಜ್ಞರಾಗಿರುವುದರ ಜೊತೆಗೇ ನಮ್ಮ ನಡುವಿನ ಸೂಕ್ಷ್ಮ ಚಿಂತಕರಲ್ಲಿ ಒಬ್ಬರಾಗಿರುವ ಪ್ರೊ. ಅಮರ್ತ್ಯ ಸೇನ್ ಇತರರ ಜೊತೆಯಲ್ಲಿ ನಡೆಸಿರುವ ಅಧ್ಯಯನವೊಂದು ಇತ್ತೀಚೆಗೆ ಪ್ರಕಟವಾಗಿದೆ. ಅದರ ಶೀರ್ಷಿಕೆ 'ಮಿಸ್ಸಿಂಗ್ ಉಮೆನ್'. ಮಹಿಳಾ ಸಬಲೀಕರಣದತ್ತ ದಾಪುಗಾಲು ಹಾಕುತ್ತಿದೆ ಎಂದು ಹೇಳಲಾಗುತ್ತಿರುವ ಈ ದೇಶದಲ್ಲಿ ಭ್ರೂಣಹತ್ಯೆ, ವರದಕ್ಷಿಣೆ ಸಾವು, ಅತ್ಯಾಚಾರ, ದೌರ್ಜನ್ಯ ಪ್ರಕರಣಗಳು ಸೇರಿದಂತೆ ಅನೇಕ ಕಾರಣಗಳಿಗಾಗಿ ಕಾಣೆಯಾಗುತ್ತಿರುವ ಮಹಿಳೆಯರ ಸಂಖ್ಯೆಯಲ್ಲಿ ನಿರಂತರ ಏರಿಕೆಯಾಗುತ್ತಿರುವುದನ್ನು ಅಮರ್ತ್ಯ ಸೇನ್ ಅಂಕಿ-ಅಂಶಗಳ ಸಮೇತ ಸುದೀರ್ಘವಾಗಿ ಚರ್ಚಿಸಿದ್ದಾರೆ.

ಚರ್ಚೆಯ ಈ ಘಟ್ಟದಲ್ಲಿ ದೇವನೂರು ಮಹಾದೇವ ನೆನಪಾಗುತ್ತಾರೆ. ದಲಿತರಿಗೆ ಜಾಗೃತಿಯೇ ಪರಮ ಹಿಂಸೆ ಎನ್ನುತ್ತಾರೆ ಅವರು. ಹೆಣ್ಣಿನ ಮಟ್ಟಿಗೂ ಈ ಮಾತು ಸಂಪೂರ್ಣವಾಗಿ ನಿಜ. ವ್ಯಕ್ತಿತ್ವದ ಸ್ವಪ್ರಜ್ಞೆಯೆನ್ನುವುದು ಆತ್ಮಗೌರವದ ನಿರೀಕ್ಷೆ ಎನ್ನುವುದು ಆಧುನಿಕ ಹೆಣ್ಣಿನಲ್ಲಿ ಉದ್ದಕ್ಕೂ ಹೆಣ್ಣಿಗೆ ಕೊಟ್ಟಿರುವುದು ಅಪಾರವಾದ ಹಿಂಸೆಯನ್ನು ಮಾತ್ರ. ಕೊನೆಯಲ್ಲಿ ಪ್ರೊ. ಅನಂತಮೂರ್ತಿಯವರು ಕುವೆಂಪು ಬಗೆಗೆ ಹೇಳುವ ಮಾತೊಂದನ್ನು ಬಳಸಿ ಹೇಳುವುದಾದರೆ, ಹೆಣ್ಣು ತನ್ನ ಘನತೆಯಲ್ಲಿ ತನಗೇ ನಂಬಿಕೆಯನ್ನು ತಂದುಕೊಳ್ಳುವ ಒಂದು ಅಸಾಧಾರಣ ಪ್ರಯಾಣದಲ್ಲಿ ತೊಡಗಿಕೊಂಡಿರುವ ಈ ಕಾಲಘಟ್ಟದಲ್ಲಿ ಅವಳ ಈ ಪ್ರಯಾಣಕ್ಕೆ

ನಿರಂತರವಾಗಿ ಪ್ರತಿರೋಧಗಳನ್ನು ಒಡ್ಡುವ ವ್ಯವಸ್ಥೆ, ಅದನ್ನು ಮೀರಲು, ಗೆಲ್ಲಲು ಹೆಣ್ಣು ನಡೆಸುತ್ತಿರುವ ಕೊನೆಯಿಲ್ಲದ ಪ್ರಯತ್ನಗಳ ಸಂಘರ್ಷದಲ್ಲಿ ಹೆಣ್ಣು ಮತ್ತು ಹಿಂಸೆಯ ಮೂಲವಿದೆ.

*(ನೀನಾಸಮ್ ಸಂಸ್ಕೃತಿ ಶಿಬಿರದಲ್ಲಿ ಮಾಡಿದ ಭಾಷಣದ ಲಿಖಿತರೂಪ.)*

**ನೀನಾಸಮ್ ವರದಿಗಳು**

**ನೀನಾಸಮ್ ರಂಗಶಿಕ್ಷಣ ಕೇಂದ್ರ:** ಫೆಬ್ರುವರಿ ೧೦-ಮೇ ೫ರ ನಡುವೆ ಕೇಂದ್ರದ ವಿದ್ಯಾರ್ಥಿಗಳು ಎರಡು ನಾಟಕಗಳನ್ನು ಪ್ರಯೋಗಿಸಿದರು – 'ಕಂತು' (ವಿವೇಕ ಶಾನಭಾಗರ ಕತೆಯ ನಾಟಕರೂಪ; ನಿಃ ಚನ್ನಕೇಶವ) ಮತ್ತು 'ಶ್ರೀ ಬಾಹುಬಲಿವಿಜಯಂ' (ಪಂಪನ ಆದಿಪುರಾಣ ಆಧರಿಸಿದ ಜಿ.ಪಿ. ರಾಜರತ್ನಂ ನಾಟಕ; ನಿಃ ರಘುನಂದನ). ಗುರುಮೂರ್ತಿ ವರದಾಮೂಲ ಅವರಿಂದ ಸ್ಕ್ರೀನ್ ಪ್ರಿಂಟಿಂಗ್, ಚನ್ನಕೇಶವ ಅವರಿಂದ ರಂಗ-ವಸ್ತ್ರ ವಿನ್ಯಾಸ ಕಾರ್ಯಾಗಾರಗಳು, ಎಂ.ಎಂ. ಕೃಷ್ಣಮೂರ್ತಿಯವರ ನಿರ್ದೇಶನದಲ್ಲಿ 'ಬೆಳಕಿನ ಅಲೆಗಳು' ಆಹಾರ್ಯ ವಿನ್ಯಾಸದ ಕಿರುಪ್ರಯೋಗ ಮುಂತಾದ ತರಗತಿಗಳು ನಡೆದವು. ವರ್ಷದ ಕೊನೆಯಲ್ಲಿ, ಮೇ ೧೨ ರಿಂದ೧೫ ರವರೆಗೆ, ವಿದ್ಯಾರ್ಥಿಗಳು ತಾವು ಈ ಹಿಂದೆ ಪ್ರದರ್ಶಿಸಿದ ನಾಲ್ಕು ಮುಖ್ಯನಾಟಕಗಳ ಪ್ರದರ್ಶನಗಳನ್ನೊಳಗೊಂಡ ನಾಟಕೋತ್ಸವವನ್ನು ನಡೆಸಿದರು (ಅಭಿಜ್ಞಾನ ಶಾಕುಂತಲ, ಮೂರುಕಾಸಿನ ಸಂಗೀತನಾಟಕ, ಕಂತು ಮತ್ತು ಶ್ರೀ ಬಾಹುಬಲಿವಿಜಯಂ).

**ನೀನಾಸಮ್ ಕಾರ್ಯಕ್ರಮಗಳು:** ಮಾರ್ಚ್ ೧೮ರಿಂದ ೨೨ರವರೆಗೆ ಹೆಗ್ಗೋಡಿನ ಶಿವರಾಮ ಕಾರಂತ ರಂಗಮಂದಿರದಲ್ಲಿ ಒಂದು ಸಾಹಿತ್ಯ ಚಿತ್ರೋತ್ಸವವನ್ನು ನಡೆಸಲಾಯಿತು. ಮೊದಲದಿನ ಶ್ರೀಯುತರಾದ ಐ.ಎಂ. ವಿಠ್ಠಲಮೂರ್ತಿ ಮತ್ತು ಗಿರೀಶ ಕಾಸರವಳ್ಳಿಯವರು ಉಪಸ್ಥಿತರಿದ್ದು ಚಿತ್ರೋತ್ಸವವನ್ನು ಉದ್ಘಾಟಿಸಿದರು. ಕನ್ನಡದ ಸಾಹಿತ್ಯಕೃತಿಗಳನ್ನು ಆಧರಿಸಿ ತಯಾರಿಸಲಾದ ಹಸೀನಾ, ಕಾನೂರು ಹೆಗ್ಗಡಿತಿ, ಮತದಾನ, ಮುನ್ನುಡಿ ಮತ್ತು ಮೌನಿ ಚಲನಚಿತ್ರಗಳನ್ನು ಈ ಸಂದರ್ಭದಲ್ಲಿ ಪ್ರದರ್ಶಿಸಲಾಯಿತು. ಎಪ್ರಿಲ್ ೧೪ರಿಂದ ೧೬ರವರೆಗೆ ಅನನ್ಯ, ಬೆಂಗಳೂರು ಮತ್ತು ಪಂ. ಹಾಸಣಗಿ ಗಣಪತಿ ಭಟ್ ಮ್ಯೂಸಿಕ್ ಅಕಾಡೆಮಿ – ಇವರ ಸಹಯೋಗದೊಂದಿಗೆ ಒಂದು ಯುವ ಸಂಗೀತೋತ್ಸವವನ್ನು ನಡೆಸಲಾಯಿತು. ಸುಮಾ ರವೀಂದ್ರ, ಸತೀಶ ಮಾಳಕೊಪ್ಪ, ಕಾಸರವಳ್ಳಿ ಸೋದರಿಯರು, ಎಲ್.ವಿ. ಮುಕುಂದ್, ಮಾರುತಿಪ್ರಸಾದ್, ವಿ| ರೇಣುಕಾ ಪ್ರಸಾದ್, ವಿ| ಎ.ಎಸ್.ಎನ್. ಸ್ವಾಮಿ ಮುಂತಾದವರು ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಎಪ್ರಿಲ್ ೧೪ ಮತ್ತು ೧೫ರಂದು ದರ್ಶನಪ್ರವೇಶ ಎಂಬ ಹೆಸರಿನಲ್ಲಿ ತತ್ತ್ವಶಾಸ್ತ್ರ ಕುರಿತಾದ ಕಮ್ಮಟವೊಂದನ್ನು ನಡೆಸಲಾಯಿತು. ಡಾ. ಸುಂದರ ಸಾರುಕ್ಕೈ ಅವರು ಈ ಕಮ್ಮಟವನ್ನು ನಡೆಸಿಕೊಟ್ಟರು.

# ಕಣ್ಮರೆಗೊಳಿಸಲ್ಪಟ್ಟ ಪ್ರತಿಭಾ

## ಪಟ್ಟಾಭಿರಾಮ ಸೋಮಯಾಜಿ

ಪ್ರತಿಭಾಳ ವಿಷಯ, ಸ್ತ್ರೀಯ ಮೇಲೆ ನಡೆಯುವಂಥ ಹಿಂಸೆಗಳ ಬಗ್ಗೆ ಬಹಳ ಪವರ್‌ಫುಲ್ ಆಗಿ ಮಾತಾಡಿದರು, ವೈದೇಹಿ. ಆದರೆ ಅದರಲ್ಲಿ ಒಂದೆರಡು ವಿಷಯ ಬಿಟ್ಟುಹೋಗಿದೆ ಅಂತ ಅನ್ನಿಸ್ತು ನನಗೆ. ಇದು ಸುಮ್ಮನೆ ಅವರು ಹೇಳಿದ ಮಾತಿಗೆ ಸೇರ್ಪಡೆಯಾಗಿ, ವಿರೋಧವಾಗಿ ಅಲ್ಲ.

ಅದು ಏನು ಅಂದರೆ, ಬೆಂಗಳೂರು ನಗರ ಒಂದರಲ್ಲೇ ಈವಾಗ ಸುಮಾರು ಒಂದು ಲಕ್ಷ ಜನ ಆ ರೀತಿಯ ಹೆಣ್ಣು ಮಕ್ಕಳಿದ್ದಾರೆ. ಅವರು ರಾತ್ರಿಯಲ್ಲಿ ಎಷ್ಟೆಷ್ಟೋ ಹೊತ್ತಿಗೆ ಕೆಲಸಕ್ಕೆ ಹೋಗಿ ಬೆಳಿಗ್ಗೆ ವಾಪಾಸು ಮನೆಗೆ ಬರುವವರು. ಪ್ರತಿಭಾ ಥರ ರಾತ್ರಿ ಸುಮಾರು ಎರಡು ಗಂಟೆಗೆ ಕೆಲಸಕ್ಕೆ ಹೋಗಿ ಬೆಳಿಗ್ಗೆ ಹನ್ನೊಂದು ಗಂಟೆ ಸುಮಾರಿಗೆ ಮನೆಗೆ ವಾಪಾಸು ಬರುವವರು. ನಮ್ಮಂಥವರ ಲೆಕ್ಕಾಚಾರದ ಪ್ರಕಾರ ಕೈತುಂಬಾ ಸಂಬಳ ಪಡೀತಾರೆ ಅನ್ನುವಷ್ಟು ಒಳ್ಳೆಯ ಸಂಬಳ ಪಡೆಯುವವರು. ಕಡಿಮೆ ಅಂದರೆ ತಿಂಗಳಿಗೆ ೧೦ ರಿಂದ ೨೦ ಸಾವರದಷ್ಟು. ಮತ್ತೆ, ಅವರೆಲ್ಲಾ ವಿದ್ಯಾವಂತರು, ಯಂಗ್ ಪೀಪಲ್, ಯುವತಿಯರು. ಬೀಡಿ ಕಟ್ಟುವ ಯುವತಿಯರ ಹಾಗೋ, ಗೇರುಬೀಜ ಕಾರ್ಖಾನೆಗೆ ಕೆಲಸಕ್ಕೆ ಹೋಗುವ ಯುವತಿಯರ ಹಾಗೋ, ಕಟ್ಟಡ ಕಲಸ, ಮನೆಕೆಲಸ ಮಾಡುವ ಯುವತಿಯರ ಹಾಗೋ ಅಲ್ಲ. ನೋಡಲಿಕ್ಕೆ ಕೂಡಾ ಹೆಚ್ಚು ನಾಜೂಕು. ಇಂಗ್ಲಿಷ್ ಮೇಲೆ ಪ್ರಭುತ್ವ ಇರುವವರು. ಆಧುನಿಕ ತಂತ್ರಜ್ಞಾನದ ತಕ್ಕಮಟ್ಟಿನ ಹೊಕ್ಕು ಬಳಕೆ ಇರುವವರು. ಕೈಯಲ್ಲಿ ಮೊಬೈಲ್ ಫೋನ್ ಅನ್ನುವ ಆಯುಧ/ಆಟಿಗೆ ಇರುವವರು. ಇನ್‌ಫ್ಯಾಕ್ಟ್, ಇವತ್ತಿನ ಗ್ಲೋಬಲೈಸಿಂಗ್ ಮೆಕೆನಿಸಮ್ ಏನಿದೆ ಅದರಲ್ಲಿ ಮುಖ್ಯ ಪಾತ್ರಧಾರಿಗಳಾಗಿರುವವರು. ಇದರ ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಬೇಕಾದ್ದಿದೆ. ಯಾಕೆಂದರೆ ಇದಕ್ಕೆ ಸಂಬಂಧಪಟ್ಟ ಹಾಗೆ ಹಲವಾರು ವಿಷಯ ಹೇಳೋದಿದೆ.

ಮೊದಲನೆಯದ್ದು ಏನು ಅಂದರೆ, ಸಾಂಪ್ರದಾಯಿಕವಾಗಿ ಹೇಗೆ ಕೆಲಸಗಳ

ವರ್ಗೀಕರಣ ಆಗಿ ಹೆಂಗಸರನ್ನು ಮನೆಗಳಿಗೆ ಗಂಟುಹಾಕುವ ಒಂದು ಫೆಮಿನೈಸೇಶನ್ ಆಫ್ ಲೇಬರ್ ಅಂತ ಏನು ಕರೀತಾರೆ, ಅದಷ್ಟೇ ಅಲ್ಲದೇ ಕೈಗಾರಿಕೀಕರಣ, ಆಧುನೀಕರಣ ಅಂತೆಲ್ಲಾ ಶುರುವಾದ ಮೇಲೆ ಒಂದು ಹೊಸ ರೀತಿಯ ಫೆಮಿನೈಸೇಶನ್ ಆಫ್ ಲೇಬರ್ ಶುರು ಆಯ್ತು. ಉದಾಹರಣೆಗೆ, ೧೯ನೇ ಶತಮಾನದಾದ್ಯಂತ ಕೈಗಾರಿಕಾ ಕ್ರಾಂತಿ ಶುರುವಾದ ಎಲ್ಲಾ ದೇಶಗಳಲ್ಲೂ, ಇಂಗ್ಲೆಂಡೂ ಸೇರಿದ ಹಾಗೆ, ಈಗಲೂ ಕೂಡಾ, ಸ್ಕೂಲ್ ಟೀಚರ್ಸು ಹೆಣ್ಣು ಮಕ್ಕಳು, ಟೆಲಿಫೋನ್ ಆಪರೇಟರ್ಸ್ ಹೆಣ್ಣುಮಕ್ಕಳು, ದಾದಿಯರು ಹೆಣ್ಣುಮಕ್ಕಳು, ಟೈಪಿಸ್ಟ್ ಹೆಣ್ಣುಮಕ್ಕಳು, ಇತ್ಯಾದಿ. ಈ ಉದ್ಯೋಗಗಳೆಲ್ಲಾ ಒಂದು ರೀತಿಯ ಸುಖೀ ಮತ್ತು ಕೀಳು ಉದ್ಯೋಗಗಳು ಅಂತ ಅನಿಸಿಕೊಂಡಂಥ ಉದ್ಯೋಗಗಳು. ಆದರೆ ಹೊಸ ಸಮಾಜಕ್ಕೆ ಅನಿವಾರ್ಯ ವಾಗಿರುವ ಕೆಲಸಗಳು ಕೂಡಾ ಹೌದು. ಶ್ರಮ, ಹಾಗೂ ಅದಕ್ಕಿಂತ ಹೆಚ್ಚು ಅಚ್ಚುಕಟ್ಟು ಈ ಕೆಲಸಗಳ ಸ್ವರೂಪ. ಆದರೆ ಅವುಗಳ ಸಾಮಾಜಿಕ ಸ್ಥಾನಮಾನ, ಸಂಬಳ ಬಹಳ ಆಕರ್ಷಕ ಅಲ್ಲ. ನಿಜ, ಈ ಉದ್ಯೋಗಗಳು ಸ್ತ್ರೀಯರಿಗೆ ಅವಕಾಶಗಳನ್ನು ಕೊಡುತ್ತವೆ, ಮನೆಯಿಂದ ಹೊರಗೂ ಹೊರಡಿಸುತ್ತವೆ. ಆದರೆ ಲಿಂಗತಾರತಮ್ಯವನ್ನು ಆ ಹೊಸ ಸಮಾಜದಲ್ಲಿ ಅಚ್ಚೊತ್ತಿ ಕೂಡಾ ಇರುತ್ತವೆ. ಇದರದ್ದೇ ಒಂದು ಮುಂದುವರಿದ ರೂಪವಾಗಿ, ಸುಮಾರು ಒಂದು ಲಕ್ಷ ಅಂತ ಹೇಳಿದೆನಲ್ಲಾ, ಆ ಹೆಣ್ಣು ಮಕ್ಕಳು ಬೆಂಗಳೂರಿನಲ್ಲಿದ್ದಾರೆ.

ಕೆಲವು ವರ್ಷಗಳ ಹಿಂದೆ, ಅರುಂಧತಿ ರಾಯ್, ಲೇಖಕಿ, ಬಹಳ ದೊಡ್ಡ ಹೋರಾಟಗಾರ್ತಿ ಆಕೆ, ಒನ್ ಆಫ್ ಅವರ್ ಫೈನೆಸ್ಟ್ ಥಿಂಕರ್ಸ್ ಎಂಡ್ ಆ್ಯಕ್ಟಿವಿಸ್ಟ್, ಆಕೆ ಒಂದು ಲೇಖನದಲ್ಲಿ ಇದರ ಬಗ್ಗೆ ಹೇಳಿದ್ದಾಳೆ. ಕಾಲ್ ಸೆಂಟರ್ಸ್, ಬ್ಯುಸಿನೆಸ್ ಪ್ರೋಸೆಸಸ್ ಔಟ್‌ಸೋರ್ಸಿಂಗ್ (ಬಿಪಿಓ) ಬಗ್ಗೆ. ಅದು ಇಂಡಿಯಾದಲ್ಲಿ ಕಾಲ್ ಸೆಂಟರ್ಸ್ ಶುರುವಾಗುತ್ತಿದ್ದ ಸಮಯದಲ್ಲಿ. ಈ ಪ್ರತಿಭಾ ಅನ್ನುವವಳು, ನೋಡಿ, ಅದು ಎಷ್ಟು ರೀತಿಯಲ್ಲಿ ಹಿಂಸೆಗಳ ಒಂದು ಕ್ರೋಢೀಕೃತ ಮೊತ್ತವಾಗಿದ್ದಾಳೆ ಆಕೆ ಅಂದರೆ, ಆ ವಿಷಯ ವೈದೇಹಿಯವರ ಮಾತುಗಳಲ್ಲಿ ಪ್ರಸ್ತಾಪ ಆಗಲಿಲ್ಲ ಅನ್ನುವ ಕಾರಣಕ್ಕಾಗಿ ಇದನ್ನು ಹೇಳುತ್ತಾ ಇರೋದು. ಅವಳು, ಪ್ರತಿಭಾ, ಕೆಲಸಕ್ಕೆ ಹೋಗುವುದು ರಾತ್ರಿ ಹೊತ್ತು, ಅಪರಾತ್ರಿ. ಒಂದು ನಿಶಾಚರ ವರ್ಗವೇ ನಮ್ಮಲ್ಲಿ ಸೃಷ್ಟಿಯಾಗಿದೆ. ಅದು ಗ್ಲೋಬಲೈಸೇಶನ್ನನ್ನು ಸಾಕಲಿಕ್ಕೆ. ಅಮೇರಿಕಾದಂಥ ದೇಶಗಳ ಟ್ರಾನ್ಸ್‌ನ್ಯಾಶನಲ್ ಕಂಪೆನಿಗಳೇನಿವೆ ಅವರು ಕೆಲವು ಉದ್ಯೋಗಗಳನ್ನ ಔಟ್‌ಸೋರ್ಸ್ (ಹೊರಗುತ್ತಿಗೆ) ಮಾಡಿದ್ದಾರೆ. ಅವನ್ನ ನಮ್ಮಂಥ ದೇಶಗಳಿಗೆ ಕೊಟ್ಟಿದ್ದಾರೆ. ಅವು ಎಂಥ ಉದ್ಯೋಗಗಳು ಅಂತ ನೋಡಿದರೆ, ಗ್ಲೋಬಲೈ ಸೇಶನ್ನನ್ನ ಸಾಕುವವರು



ನೀವಾದರೂ, ಗ್ಲೋಬಲೈಸೇಶನ್ ಮಾತ್ರ ನಿಮ್ಮ ಕೈವಶ ಅಲ್ಲ. ನಿಮ್ಮ ಶ್ರಮ, ಅಚ್ಚುಕಟ್ಟು, ಬಾಚೋದು, ತೊಳೆಯೋದು, ಅಂಗಿಚಡ್ಡಿ ಶೂ ಹಾಕಿ ರೆಡಿಮಾಡೋದು ನೀವು. ಮೆರೆಯೋದು ಮಾತ್ರ ನೀವಲ್ಲ. ಈಗ ಮುಂದುವರಿದ ದೇಶಗಳಿಗೂ ನಮ್ಮಂಥ ದೇಶಗಳಿಗೂ ಇರುವ ಸಂಬಂಧ, ಸಾಮ್ರಾಜ್ಯಶಾಹಿಗೂ ನಮಗೂ ಇರುವ ಸಂಬಂಧ. ಅಥವಾ ವಸಾಹತುಶಾಹಿ ಇದ್ದ ಕಾಲದಲ್ಲಿ ವಸಾಹತುಶಾಹಿಗೂ ಮತ್ತು ಅದಕ್ಕೆ ಒಳಗಾದವರಿಗೂ ಇರುವ ಸಂಬಂಧ ಕೂಡಾ ಇದೇ ರೀತಿಯ ಲಿಂಗ ತಾರತಮ್ಯದ ಭಾಗ, ಆ ಮಾದರಿ ಏನಿದೆ ಅದನ್ನೇ ಹೋಲುವಂಥದ್ದು. ಈ ಹೊತ್ತಿನ ಮಾದರಿ ಕೂಡ ಅದೇ. ಅಮೆರಿಕಾದ ಎದುರು ಭಾರತದ ಪರಿಸ್ಥಿತಿ ಅದೇ. ಅಮೆರಿಕಾದ ಎದುರು ಇರಾಕಿನ ಪರಿಸ್ಥಿತಿ ಇದೇ. ಅಮೆರಿಕಾದ ಎದುರು ಅಫ್ಘಾನಿಸ್ತಾನದ ಪರಿಸ್ಥಿತಿ ಇದೇ. ಅಂಥದ್ದರ ಒಂದು ಅಂಗವಾಗಿ ಇವರು, ಪ್ರತಿಭಾನಂಥವರು, ನಿಶಾಚರಿಗಳಾಗಿ ಮಾರ್ಪಾಟಾಗಿದ್ದಾರೆ. ಹಗಲುಗಳನ್ನ ಕಳಕೊಂಡಿದ್ದಾರೆ.

ನಮ್ಮ ದೃಷ್ಟಿಯಲ್ಲಿ ಅವರು ಅತ್ಯಂತ ಒಳ್ಳೆಯ ಸಂಬಳ ಪಡೆಯುವರು, ನಿಜ. ಆದರೆ ಅಮೆರಿಕಾದವರಿಗೆ ಇದೇ ಚೀಪ್ ಲೇಬರ್. ಇವರು ಅಗ್ಗದಲ್ಲಿ ಸಿಗುವ ಕೆಲಸಗಾರರು. ಅವರ ಮೇಲೆ ಅಮೆರಿಕಾ ಏನೂ ಇನ್‌ವೆಸ್ಟ್ ಕೂಡಾ ಮಾಡಬೇಕಾ ಗಿಲ್ಲ. ಯಾವ ಮಲ್ಟಿನ್ಯಾಶನಲ್ ಕಾರ್ಪೋರೇಶನ್‌ನವರೂ ಇನ್‌ವೆಸ್ಟ್ ಮಾಡ ಬೇಕಾಗಿಲ್ಲ. ಅದೆಲ್ಲಾ ಇಲ್ಲೇ ತಯಾರಾಗಿರುತ್ತೆ. ಅವರ ಓದು, ಬರಹ, ಅವರಿಗೆ ಬೇಕಾದ ಇನ್‌ಫ್ರಾಸ್ಟ್ರಕ್ಚರ್‌ಗಳು ನಮ್ಮ ದೇಶಗಳಲ್ಲೇ ಇರುತ್ತೆ. ಅದನ್ನ ಬಳಸಿಕೊಂಡು ಅವರು ಅದು ಹೇಗೋ ತಯಾರಾಗಿರುತ್ತಾರಲ್ಲಾ, ಹಾಗೆ ತಯಾರಾಗಿ ಅವರು ಮಲ್ಟಿನ್ಯಾಶನಲ್‌ಗಳಿಗಾಗಿ ದುಡೀತಾರೆ. ಆದರೆ, ಡಾಲರ್‌ಗಳಲ್ಲಲ್ಲ, ರೂಪಾಯಿ ಗಳಲ್ಲಿ ಸಂಬಳ ಎಣಿಸುತ್ತಾರೆ.

ಅವರು ರಾತ್ರಿ ಹೊತ್ತು ಯಾಕೆ ದುಡೀತಾರೆ ಅಂದರೆ, ಅಮೆರಿಕಾದಂಥ ದೇಶದಲ್ಲಿ ಹಗಲು ಬೆಳಕಿಗೆ ಕಾಂತಿ ಬರಲಿ ಅಂತಲೇ ಹೊರತು ನಮ್ಮ ದೇಶದಲ್ಲಿ ಹೆಣ್ಣುಮಕ್ಕಳು ರಾತ್ರಿ ಹೊತ್ತು ನಿರ್ಭಯವಾಗಿ ಓಡಾಡಲಿ ಅನ್ನುವ ಕಾರಣಕ್ಕಾಗಿ ಅಲ್ಲ. ಎಲ್ಲಿಯ ಗಾಂಧಿ ಎಲ್ಲಿಯ ಅಮೆರಿಕಾ ಸರ್ಕಾರ? ಅಲ್ಲದೇ, ಇದೂ ನಾವು ಗಮನಿಸಬೇಕಾದ್ದು. ರಾತ್ರಿ ಹೊತ್ತು ಕೆಲಸಕ್ಕಾಗಿ ಹೋಗುವ ಈ ಹೆಣ್ಣುಮಕ್ಕಳೆಲ್ಲಾ ಎಲ್ಲಿಗೆ ಹೋಗ್ತಾ ಇದಾರೆ. ಅವರು ಝಗಝಗಿಸುವ, ಜಾಗತೀಕರಣದ ಕೋರೈಸುವ ಬೆಳಕಿರುವ ಪ್ರದೇಶಗಳಿಗೆ ಮಾತ್ರ, ನಮ್ಮ ದೇಶದೊಳಗೆ ತಯಾರಾಗಿರುವ ದುಡಿಮೆಯ ಇಂಥ ದ್ವೀಪಗಳಿಗೆ ಮಾತ್ರ, ಹೋಗಬಹುದು ಅವರು. ಅಲ್ಲೂ ಅವರು ಸೇಫ್ ಅಲ್ಲ, ಪ್ರತಿಭಾ ಥರ, ನಿಜ, ಆದರೆ ಆ ಕೋರೈಸುವ ಬೆಳಕಿಗೆ ಹೋಗ್ತಾ ಇದ್ದಾರೆ ಅವರು.

ಬೇರೆ ಪ್ರದೇಶಗಳಿಗೆ ಅವರಿಗೆ ಇಂದಿಗೂ ಪ್ರವೇಶ ಇಲ್ಲ. ಹಗಲಲ್ಲೂ ಕೂಡ. ಮಬ್ಬು ಬೆಳಕಿನಲ್ಲಿ, ಕತ್ತಲೆ ಕೂಪದಲ್ಲಿ ಸಿಕ್ಕಿಹಾಕಿಕೊಂಡ ಹೆಣ್ಣುಮಕ್ಕಳ ದೊಡ್ಡದೊಂದು ಲೋಕ ಏನಿದೆ, ಅದನ್ನು ಕೂಡಾ ಇವರು ಪ್ರತಿನಿಧಿಸಲಾರರು. ಹಾಗಂತ, ಅವರು ಬೆಳಕಿಗೆ ನಡೆದರು ಅಂತ ಕೂಡಾ ಹೇಳುವಂತಿಲ್ಲ.

ರಾತ್ರಿಹೊತ್ತು ಇವರು ಯಾಕೆ ಕೆಲಸಕ್ಕೆ ಹೋಗುತ್ತಾರೆ ಅಂದರೆ, ಅಮೆರಿಕಾ ಮತ್ತು ಯೂರೋಪ್ ಮುಂತಾದ ಕಡೆಗಳಿಂದ ಬರುವ ಕರೆಗಳಿಗೆ ವಿದೌಟ್ ಎ ಟೈಂ ಲ್ಯಾಗ್, ಸಮಯದ ಲ್ಯಾಗ್ ಇರದ ಹಾಗೆ, ಸಮಯದ ಬಿರುಕು ಇಲ್ಲದ ಹಾಗೆ ತಕ್ಷಣ ಉತ್ತರ, ಪ್ರತಿಕ್ರಿಯೆ ಕೊಡುವ ಹಾಗಿರಬೇಕು ಅವರು. ಅಲ್ಲಿ ಹಗಲಾದಾಗ ಇಲ್ಲಿ ರಾತ್ರಿ ಆಗಿರುತ್ತಲ್ಲ, ಅದಕ್ಕೋಸ್ಕರ. ಅಲ್ಲಿನ ಹಗಲನ್ನು ಇವರು ಅಡ್ರೆಸ್ ಮಾಡುತ್ತಾ ಇರೋದು.

ಆಮೇಲೆ, ಅವರು ಪ್ರತಿಭಾ ಅನ್ನೋದು ನಮಗೆ ನಿಮಗೆ ಗೊತ್ತಿರುವಂಥ ಹೆಸರು. ಸ್ಥಳೀಯ ಹೆಸರು. ಅವಳ ಉದ್ಯೋಗದಲ್ಲಿ ಆ ಹೆಸರಿಲ್ಲ. ಅವಳು ಪ್ರ್ಯಾತಿ, ಮೇರಿ, ಲೂಸಿ ಎಂಥದ್ದೋ ಒಂದು ಆಗಿರುತ್ತಾಳೆ. ಅಂದರೆ, ಅವಳು ತನ್ನ ಹೆಸರನ್ನ ಬದಲಾಯಿಸಿ ಕೊಳ್ಳಬೇಕು. ಯಾಕೆ ಹೆಸರನ್ನು ಬದಲಾಯಿಸಿಕೊಳ್ಳಬೇಕು ಅಂದರೆ, ಅವಳು ಯಾವ ಕಸ್ಟಮರ್ಸ್‌ಗೆ ಆನ್ಸರ್ ಮಾಡುತ್ತಾ ಇರುತ್ತಾಳೋ, ಆ ಕಸ್ಟಮರ್ಸಿಗೆ ತಾವು ತಮ್ಮದೇ ದೇಶದ ಅಥವಾ ರೀತಿರಿವಾಜುಗಳ ಜನರ ಜೊತೆಗೆ ಮಾತಾಡುತ್ತಾ, ವ್ಯವಹರಿಸುತ್ತಾ ಇದ್ದೇವೆ ಅಂತ ಅನ್ನಿಸಬೇಕು. ಗ್ರಾಹಕರೇ ಈ ಕಾಲದ ದೊರೆಗಳು, ಅವರಿಗೆ ಕಲ್ಚರಲ್ ಶಾಕ್ ಆದರೆ ಗ್ಲೋಬಲೈಸೇಶನ್ ಸಹಿಸೋದಿಲ್ಲ, ಅದಕ್ಕೋಸ್ಕರ. ಹಾಗಾಗಿ ಅವರು, ಪ್ರತಿಭಾ ಥರದವರು, ಮರುನಾಮಕರಣಗೊಂಡಿರುವ ಜನರು. ಮತ್ತು ಅವರ ಓದು, ಬರಹ, ಭಾಷೆ, ಉಚ್ಚಾರ, ತಿಳುವಳಿಕೆ ಎಲ್ಲವೂ ಅದಕ್ಕೆ ಲಗಾವಾಗಿರಬೇಕು. ಅವರು ಯಾವ ದೇಶದ ಕಸ್ಟಮರ್ಸ್ ಜೊತೆಗೆ ಮಾತಾಡುತ್ತಾರೋ, ಉದಾಹರಣೆಗೆ ಕಸ್ಟಮರ್ಸ್ ಅಮೆರಿಕಾದವರು ಅಂತ ಆದರೆ, ಅಮೆರಿಕಾದ ಸಿನೆಮಾಗಳ ಬಗ್ಗೆ, ಹವಾಮಾನದ ಬಗ್ಗೆ, ಅಮೆರಿಕಾದ ನ್ಯೂಸ್ ಪೇಪರುಗಳಲ್ಲಿ ಏನು ಗಾಸಿಪ್ ಬರುತ್ತಾವೆ ಅದರ ಬಗ್ಗೆ, ಆ ವಿಷಯಗಳನ್ನೆಲ್ಲಾ ತಿಳಿದುಕೊಂಡಿರಬೇಕಾಗುತ್ತದೆ. ಸೋದಟ್, ದೇ ಕ್ಯಾನ್ ಸ್ಪೀಕ್ ಟು ದಯರ್ ಕಸ್ಟಮರ್ಸ್ ಇನ್ ಎ ಲ್ಯಾಂಗ್ವೆಜ್ ಎಂಡ್ ಮಿಲ್ಯೂ ದೆ ಅಂಡರ್ಸ್ಟ್ಯಾಂಡ್.

ಅವನ್ಯಾವನೋ ಅಮೆರಿಕಾದಿಂದ ಫೋನ್ ಮಾಡುತ್ತಾನೆ ಅಂತ ಇಟ್ಟುಕೊಳ್ಳಿ. ಫೋನ್ ಮಾಡುತ್ತಾನೆ. ಒಂದು ೧೦-೧೫ ನಿಮಿಷ ಅವನ ರೀತಿಯ ಇಂಗ್ಲಿಷಲ್ಲಿ ನೀವು ಆಟ ಆಡಿಸಬೇಕು, ಅವನು ಹೇಳುವ ತಲೆಬುಡ ಇಲ್ಲದ ಮಾತುಗಳಿಗೆ ಪ್ರತಿಕ್ರಿಯೆ



ಕೊಡುತ್ತಾ ಚ್ಯಾಟ್ ಮಾಡಬೇಕು, ಒಂದು ೧೫ ನಿಮಿಷ. ಆಮೇಲೆ, ಅಷ್ಟೆಲ್ಲಾ ಆದ ಮೇಲೆ, ಅವನು ಕೇಳುತ್ತಾನೆ, ನಮ್ಮದು ವಾಷಿಂಗ್ ಮೆಷಿನ್ ಕೆಲಸ ಮಾಡುತ್ತಾ ಇಲ್ಲ, ಏನು ಮಾಡಬೇಕು ಅಂತ. ಆಗ ನೀವು ಹೇಳಬೇಕು, ಸ್ವಿಚ್ ಹಾಕಿ ಅಂತ. ಅಲ್ಲಿಗೆ ಮುಗಿಯಿತು. ಈ ಸೌಭಾಗ್ಯಕ್ಕೆ ೨೦ ಸಾವಿರ ರೂಪಾಯಿಯಷ್ಟು ಸಂಬಳ ಅವರಿಗೆ. ಸಂಬಳ ಕೂಡಾ ರೂಪಾಯಿಯಲ್ಲೇ ಹೊರತು ಡಾಲರ್‌ನಲ್ಲಲ್ಲ. ಮತ್ತೆ, ರಾತ್ರಿ ಪಾಳಿಯಲ್ಲಿ ಹೋಗಿ ಅವರು ಕೆಲಸ ಮಾಡಬೇಕು. ಕತ್ತಲೆ ಖಂಡದವರಾದ ನಾವು ನಮ್ಮ ಕತ್ತಲೆ ಕಳಕೊಂಡು ಬೆಳಗಾಗುವವರೆಗೆ, ಸೂರ್ಯ ಮುಳುಗದ ದೇಶದ ಆ ಜನ ಕಾಯೋದು ಸಾಧ್ಯ ಇಲ್ಲ ನೋಡಿ, ಅದಕ್ಕೆ. ಹಾಗೇ ಅಮೆರಿಕಾದವರ ಹಬ್ಬವೇ ನಿಮಗೆ ರಜಾದಿನ, ನಿಮ್ಮ ಹಬ್ಬ. ಇಡೀ ದೇಶ ಇಲ್ಲಿ ಸ್ವಾತಂತ್ರ್ಯ ದಿನಾಚರಣೆ ಮಾಡುತ್ತಾ ಇದ್ದರೆ, ಈ ದೇಶಕ್ಕೆ ಅರ್ಧ ರಾತ್ರೀಲಿ ಸ್ವಾತಂತ್ರ್ಯ ಬಂದದ್ದೇ ಅಪರಾಧ ಆಯ್ತು ಅನ್ನುವ ಹಾಗೆ ಇವರು ಅಪರಾತ್ರಿಯಲ್ಲಿ ಕೆಲಸಕ್ಕೆ ಹೊರಡಬೇಕು. ನಮಗೆ ಸ್ವಾತಂತ್ರ್ಯ ಬಂದರೂ ಬಿಟ್ಟರೂ ಅಮೆರಿಕಾಕ್ಕೆಷ್ಟು?

ಇದು ಇಡೀ ಜಗತ್ತಿನ ಎಷ್ಟೊಂದು ಭಾಗಗಳನ್ನ, ಭೂ ಪ್ರದೇಶಗಳನ್ನ ಮಾತ್ರವಲ್ಲ, ದೇಶಗಳನ್ನ, ದೇಶಗಳ ಕಾನೂನುಗಳನ್ನ, ರೀತಿ ರಿವಾಜುಗಳನ್ನ, ಮತ್ತು ದೇಶದ ಜನರ ಘನತೆಯನ್ನ ವಸಾಹತಾಗಿ ಪರಿವರ್ತಿಸಿಕೊಂಡು ಮಾಡುತ್ತಾ ಇರುವ ದೌರ್ಜನ್ಯ. ಅಂದರೆ, ಜಾಗತೀಕರಣ ಅನ್ನುವ ಒಂದು ವಿದ್ಯಮಾನ ಇದೆ. ಅತ್ಯಂತ ಆಕ್ರಮಣಶೀಲವಾಗಿ ಇರುವಂಥ ಬಂಡವಾಳಶಾಹಿ ಅದು. ಬಹಳ ನಾಜೂಕು ಕೂಡಾ. ಪ್ರತಿಭಾ ಅಂದರೆ ಬರೀ ಪ್ರತಿಭಾ ಅಲ್ಲ. ಗ್ಲೋಬಲೈಸೇಶನ್ ಅನ್ನುವ ರಾಕ್ಷಸ ಯಂತ್ರದ ಒಂದು ನಾಡಿ ಆಕೆ. ಮತ್ತೆ, ಬಂಡವಾಳಶಾಹಿ ಈ ಹೊತ್ತು ತೊಡಗಿರುವುದು, ಇದು ಜಾಗತೀಕರಣದ ಬಗ್ಗೆ ಹೇಳಬಹುದಾದ ಸರಿಯಾದ ಮಾತು ಅಂತ ನನಗೆ ಅನ್ನಿಸುತ್ತೆ, ಸೆಲೆಬ್ರೇಶನ್ ಆಫ್ ಸರ್ಫೇಸಸ್‌ನಲ್ಲಿ, ಹೊರಮೈಯ ವಿಜೃಂಭಣೆಯಲ್ಲಿ. ನೀವು ಎಂಟರ್‌ಟೈನ್‌ಮೆಂಟ್ ಇಂಡಸ್ಟ್ರೀ ನೋಡಿ, ಎಡ್ವರ್ಟೈಸ್‌ಮೆಂಟ್ ಇಂಡಸ್ಟ್ರೀ ನೋಡಿ, ಅದರಲ್ಲಿ ಸ್ತ್ರೀಯ ಪ್ರಾಧಾನ್ಯ ನೋಡಿ. ನಾವು ಹೆಚ್ಚು ಹೆಚ್ಚು ಆಧುನಿಕರಾಗುತ್ತಾ ಹೋದ ಹಾಗೆ ಸಂಪೂರ್ಣ ಹೊರಮೈ, ಒಳತಿರುಳುಗಳ ಒಬ್ಬ ವ್ಯಕ್ತಿ ಇಲ್ಲ. ಸರ್ಫೇಸ್ ಓನ್ಲಿ, ವೆರಿ ಗ್ಲೋಸ್ಸಿ, ವೆರಿ ಅಟ್ರಾಕ್ಟಿವ್, ವೆರಿ ಸೆಡಕ್ಟಿವ್. ಆ ರೀತಿಯ ವ್ಯಕ್ತಿತ್ವವಾಗಿ ಅವಳು ಪರಿವರ್ತನೆ ಆಗುತ್ತಾಳೆ. ಅದೂ ಕೂಡಾ ಬಂಡವಾಳಶಾಹಿಯ ಉತ್ಪನ್ನಗಳನ್ನ ಮಾರ್ಕೆಟ್ ಮಾಡುವುದಕ್ಕೆ. ಅದಕ್ಕೋಸ್ಕರ ಮಾತ್ರ ಬಂಡವಾಳಶಾಹಿಗಳಿಗೆ ಅವಳು ಬೇಕು. ಬೇಕು ಅಂದರೆ ಹಾಗಲ್ಲ. ಯಾವ ಸ್ವರೂಪದಲ್ಲಿ ಬೇಕು ಅಂದರೆ, ದುಡಿಯುವವಳಾಗಿ. ಮತ್ತೆ, ದುಡಿಯೋದು ಅಂದರೆ, ತನ್ನ ಕೆಲಸಕ್ಕೆ ತನ್ನ ವ್ಯಕ್ತಿತ್ವದ

ಛಾಪನ್ನು ಅಂಟಿಸಬಲ್ಲ ವ್ಯಕ್ತಿತ್ವ ಇರುವವಳಾಗಿ ಅಲ್ಲ. ಶಿ ಈಸ್ ದಿ ಕಮೊಡಿಟಿ. ಶಿ ಹ್ಯಾಸ್ ಬಿಕಮ್ ಕಂಪ್ಲೀಟ್ಲಿ ಕಮೋಡಿಫೈಡ್. ಶಿ ಈಸ್ ಒನ್ ಕಮೊಡಿಟಿ ಮಾರ್ಕೆಟಿಂಗ್ ಎನದರ್. ಅವಳು ಒಂದು ವಸ್ತುವಾಗಿ, ಸಂಪೂರ್ಣ ವಸ್ತುವಾಗಿ ಪರಿವರ್ತನೆಯಾಗಿರುವಂಥವಳು. ಇತರ ವಸ್ತುಗಳನ್ನ ಇನ್ನಷ್ಟು ಆಕರ್ಷಕಗೊಳಿಸ ಬಲ್ಲ, ಮಾರಾಟಮಾಡುವ ಇನ್ನೊಂದು ವಸ್ತುವಾಗಿ. ಈ ಎರಡೂ ವಸ್ತುಗಳ ಹೊರಮೈ ಸೇರಿ ಬಂಡವಾಳಶಾಹಿ ಉತ್ಪನ್ನಗಳಿಗೆ ಇಲ್ಲದ ಒಳಮೈಯ್ಯೊಂದು ಪ್ರಾಪ್ತವಾಗುತ್ತದೆ. ವಸ್ತುಗಳಿಗೇ ವ್ಯಕ್ತಿತ್ವ ಪ್ರಾಪ್ತವಾಗುತ್ತದೆ. ಪ್ರತಿಭಾಳಂಥ ವ್ಯಕ್ತಿಗಳ ವ್ಯಕ್ತಿತ್ವ ವಸ್ತುಗಳಲ್ಲಿ ಇನ್‌ವೆಸ್ಟ್ ಆಗುತ್ತದೆ. ಅವಳು ಕೇವಲ ಮಧುರ ಸ್ವರವಾಗಿ ಟೆಲಿಫೋನ್‌ನಲ್ಲಿ ಮಾತಾಡೋದು ಏನಿದೆ, ಈಮೆಯಿಲ್‌ನಲ್ಲಿ ನಾಜೂಕಾಗಿ ಚ್ಯಾಟ್ ಮಾಡೋದು ಏನಿದೆ, ಅಥವಾ ಚಿತ್ರವಾಗಿ ಎಡ್ವರ್ಟೈಸ್‌ಮೆಂಟಿನಲ್ಲಿ ನೀವು ಕ್ಲೀನ್ ಬೌಲ್ಡ್ ಆಗೋ ಹಾಗೆ ಕಾಣಿಸಿಕೊಳ್ಳುವುದು ಏನಿದೆ, ಇದು ಬಂಡವಾಳಶಾಹಿಯನ್ನು ಸಾಕಲಿಕ್ಕೆ ಇರುವ ವಸ್ತುವಾಗಿ ಆಕೆ ಪರಿವರ್ತನೆಯಾಗಿರುವ ಪ್ರಕ್ರಿಯೆ. ಇದರಲ್ಲಿ ಆಕೆಯ ಕಂಪ್ಲೀಟ್ ಕಮೋಡಿಫಿಕೇಶನ್ ಆಗಿದೆ. ಇದರಲ್ಲಿ ಅವಳು, ವ್ಯಕ್ತಿತ್ವವಿಲ್ಲದ ಕೇವಲ ಹೊರಮೈ ಮಾತ್ರ. ಅಥವಾ ಅವಳ ಹೊರಮೈಯೇ ಅವಳ ವ್ಯಕ್ತಿತ್ವ.

ವಾಲ್ಟರ್ ಬೆಂಜಮಿನ್‌ನನ್ನು ಓದಿರುವವರಿಗೆ ನಾನು ಹೇಳುತ್ತಿರುವುದು ಹೆಚ್ಚು ಅರ್ಥವಾಗುತ್ತದೆ ಅನ್ನಿಸುತ್ತೆ. ಅವನು, ಹೇಗೆ ಫೋಟೋಗ್ರಫಿ, ಸಿನಿಮಾಗಳೆಲ್ಲಾ ಬಂದ ಮೇಲೆ, ಎಷ್ಟು ಬೇಕಾದರೂ ಪ್ರತಿಗಳನ್ನು ಆ ಮೂಲಕ ತೆಗೆಯಲು ಸಾಧ್ಯವಾದ ಮೇಲೆ, ಕಲಾವಿದ ನೊಬ್ಬ ಕೈಯ್ಯಾರೆ ಬಿಡಿಸಿದ ವರ್ಣಚಿತ್ರಗಳ ಕಾಲದಲ್ಲಿ ನಾವು ರೂಢಿಸಿಕೊಂಡ ಒರಿಜಿನಲ್‌ನ ಕಲ್ಪನೆ ಹೊರಟುಹೋಗಿ, ಬರೀ ಹೊರಮೈ ಅನ್ನುವುದು ಬಹಳ ಸೆಡಕ್ಟಿವ್ ಆಗುತ್ತೆ, ಅಂದರೆ ನಮ್ಮನ್ನು ಮೋಹ ಪರವಶಗೊಳಿಸುವ ವಸ್ತುವಾಗಿ ಪರಿವರ್ತನೆ ಹೊಂದುತ್ತೆ ಅಂತ ಬರೆದಿದ್ದಾನೆ. ಮೊನಾಲಿಸಾ ವರ್ಣಚಿತ್ರದ ಲಕ್ಷಾಂತರ ಉತ್ಕೃಷ್ಟ ಪ್ರತಿಗಳನ್ನ ಈಗ ತಯಾರಿಸಬಹುದು. ಅವೆಲ್ಲಾ ನಮ್ಮ ಭಾಷೆಯಲ್ಲಿ ಡೂಪ್ಲಿಕೇಟ್ಸ್. ಆದರೆ, ಈ ಡೂಪ್ಲಿಕೇಟ್ಸೇ, ಈ ಹೊರಮೈಯೇ ಈ ಕಾಲದ ವೈಭವಯುತ ಸರಕು. ಎಲ್ಲರೂ ಮುಗಿಬೀಳುವುದು ಅದಕ್ಕೇ. ಇದೊಂದು ಅಪರಾಧ ಅಂತ ಅಲ್ಲ. ಪ್ರತಿಗಳನ್ನ ತಯಾರಿಸುವ ಸೌಲಭ್ಯ ಪಡೆದವರು ಯಾರು, ಅವರ ಉದ್ದೇಶ ಏನು ಅನ್ನುವ ಪ್ರಶ್ನೆ. ಆ ಸೌಲಭ್ಯ ಇರುವುದು ಈ ಕಾಲದ ಬಂಡವಾಳಶಾಹಿ ಯಲ್ಲಿ. ಮೂಲದಿಂದ ಬಿಡುಗಡೆಗೊಂಡ ನಕಲುಗಳನ್ನ, ಹೊರಮೈಗಳನ್ನ ಇವತ್ತು ಬಂಡವಾಳಶಾಹಿ ನಮಗೇ ವಾಪಾಸು ಮಾರುತ್ತಿದೆ ಅಂತ ಇದರ ತಾತ್ಪರ್ಯ. ವರ್ಕ್ ಆಫ್ ಆರ್ಟ್ ಇನ್ ದಿ ಏಜ್ ಆಫ್ ಮೆಕ್ಯಾನಿಕಲ್ ರಿಪ್ರೊಡಕ್ಷನ್ ಅಂತ ಬಹಳ



ಪ್ರಸಿದ್ಧವಾದ ಲೇಖನದಲ್ಲಿ ವಾಲ್ಟರ್ ಬೆಂಜಮಿನ್ ಇದನ್ನ ಬರೆದಿದ್ದಾನೆ. ಅದರದ್ದೇ ಒಂದು ಮುಂದುವರಿದ ಮಾದರಿ ಇದು ಅಷ್ಟೆ.

ಹಾಗಾಗಿ ನಾವು ಪ್ರತಿಭಾಳ ವಿಷಯ ಮಾತಾಡುವಾಗ ಇದೊಂದು ನೆನಪಿನಲ್ಲಿ ಇಡಬೇಕಾದ ವಿಷಯ. ಯಾಕೆಂದರೆ, ದೌರ್ಜನ್ಯ ಅನ್ನೋದು ಯಾವನೋ ಡ್ರೈವರ್ ಮಾಡಿರೋ ದೌರ್ಜನ್ಯ ಅಲ್ಲ ಅದು. ಇದರಲ್ಲಿ ದೇಶಗಳು ಶಾಮೀಲಾಗಿರೋದು ಇದೆ. ಮಲ್ಟಿನ್ಯಾಶನಲ್ ಕಂಪೆನಿಗಳು ಶಾಮೀಲಾಗಿರೋದಿದೆ. ಹೊಸ ತಂತ್ರಜ್ಞಾನ ಹಳೆ ಸಮಾಜವನ್ನ ಬಗ್ಗುಬಡೀತಾ ಇರುವ ಬಂಡವಾಳಶಾಹಿ ಇದೆ. ನೋಡಿ, ಸರಕಾರವನ್ನ ನಾವು ಅಷ್ಟೆಲ್ಲಾ ಬಯ್ಯಬಹುದು. ನಿಜ. ಸರಕಾರದ ಪಾತ್ರ ತುಂಬಾ ಇದೆ, ಇದರಲ್ಲಿ. ಗ್ಲೋಬಲೈಸೇಶನ್ನನ್ನ ಮಣೆಹಾಕಿ ಕರಕೊಂಡು ಬರೋದ್ರಲ್ಲಿ, ಐಟಿ ಕಂಪೆನಿಗಳಿಗೆ ಹೋಗುವ ರಸ್ತೆಗಳನ್ನ ಮಾತ್ರ ಸರಿಮಾಡುವುದರಲ್ಲಿ, ಅವರಿಗೆ ತೆರಿಗೆ ವಿನಾಯಿತಿ, ಸುಲಭದಲ್ಲಿ ನೆಲ ಜಲ ಒದಗಿಸೋದರಲ್ಲಿ, ಇದೇ ಈ ದೇಶದ ದೊಡ್ಡ ಜವಾಬ್ದಾರಿ ಅನ್ನುವ ಥರ ಮಾಡುವುದರಲ್ಲಿ, ಇದೆ ನಿಜ. ಆದರೆ ನಿಮಗೆ ಗೊತ್ತಿರಬಹುದು. ಪ್ರತಿಭಾಳ ಕೇಸಿನಲ್ಲಿ, ಅವಳು ಬೇರೆ ಕಾರಿನಲ್ಲಿ ಕೂತದ್ದನ್ನ, ಮಾಮೂಲಾಗಿ ಬರುತ್ತಾ ಇದ್ದ ಡ್ರೈವರ್ ತನಗೆ ಗೊತ್ತಾದ ತಕ್ಷಣವೇ ಕಂಪೆನಿಗೆ ಇನ್‌ಫಾರ್ಮ್ ಮಾಡಿದ್ದಾನೆ. ಹಾಗಾಗಿ, ಕಂಪೆನಿಗೆ ಅದರ ಇನ್ಫೊರ್ಮೇಷನ್ ಇತ್ತು. ಆದರೆ, ಕಂಪೆನಿಯವರು ಅದರ ಆಧಾರದ ಮೇಲೆ ಏನೂ ಮಾಡಲಿಲ್ಲ. ಮಾತ್ರ ಅಲ್ಲ, ಮರುದಿವಸ ಕೆಲಸಕ್ಕೆ ಬರಲಿಲ್ಲ ಅಂತ ಅವಳಿಗೊಂದು ನೋಟೀಸ್ ಕೂಡಾ ಜಾರಿ ಮಾಡಿದ್ದಾರೆ. ಆದರೂ ಅವರನ್ನ ನೀವು ಪ್ರಶ್ನೆ ಮಾಡೋ ಹಾಗೇ ಇಲ್ಲ. ನೋ ಬಡಿ ಕ್ಯಾನ್ ಕ್ವೆಶ್ಚನ್ ದೆಮ್. ಮೂರು ಕಾರಣಕ್ಕೆ.

ಒಂದು, ಅವರು ಮಾತಿನಲ್ಲಿ, ವಾದದಲ್ಲಿ ತುಂಬಾ ಚುರುಕಾಗಿರುತ್ತಾರೆ. ಮಲ್ಟಿನ್ಯಾಶನಲ್ ಕಂಪೆನಿಯವರಲ್ಲವಾ ಅವರು. ಕೆರೆಗಳೇನು, ಹಲವಾರು ಹೊಳೆ, ಸಮುದ್ರಗಳ ನೀರನ್ನೇ ಆಪೋಶನ ತೆಗೆದುಕೊಂಡವರು ಅವರು. ರೆಪ್ರೆಸೆಂಟೇಶನ್ಸ್ ಆಫ್ ದಿ ಇಂಟೆಲೆಕ್ಚುವಲ್ ಅನ್ನುವ ಪುಸ್ತಕದಲ್ಲಿ ಎಡ್ವರ್ಡ್ ಸೈದ್ ಈ ವಿಷಯ ತುಂಬಾ ಚೆನ್ನಾಗಿ ಹೇಳಿದ್ದಾನೆ. ಈ ಕಾಲದ ಎಲ್ಲಾ ಬುದ್ಧಿವಂತರೂ, ನಿಪುಣರೂ ಪ್ರಭುತ್ವದ ಕೈಗೊಂಬೆಗಳು ಅಂತ. ಸಾವಿರಾರು ರೂಪಾಯಿ ಸಂಬಳಕೊಟ್ಟು ಈ ನಿಪುಣರನ್ನು ಕೆಲಸಕ್ಕೆ ತಗೊಳ್ಳಲಿಕ್ಕಾಗಲೀ, ಉಳಿಸಿಕೊಳ್ಳಲಿಕ್ಕಾಗಲೀ ನಮಗೆ ನಿಮಗೆ ಬಿಡಿ, ನಮ್ಮ ಸರಕಾರಗಳಿಗಾದರೂ ಸಾಧ್ಯವಾ ? ಆದರೆ ಅವರನ್ನು ವಿದ್ಯೆ ಕೊಟ್ಟು, ಜಾಗಕೊಟ್ಟು ಸಾಕಿ ಬೆಳೆಸುವವರು ಮಾತ್ರ ನಾವೇ, ನಮ್ಮ ಭ್ರಷ್ಟ ಬಡಪಾಯಿ ಸರಕಾರಗಳೇ ಅನ್ನುವುದು ಇದರ ಇನ್ನೊಂದು ವ್ಯಂಗ್ಯ.

ಎರಡನೆಯದಾಗಿ, ಅವರಿಗೆ ಯಾವ ಕಾನೂನುಗಳೂ ಲಗಾವಾಗೋದಿಲ್ಲ. ಒಂದು ವೇಳೆ ಲಗಾವಾದರೂ, ಅವರದ್ದೇ ದೇಶದಲ್ಲಿ ಹೋಗಿ ನಾವು ಕಾನೂನು ಯುದ್ಧ ಮಾಡಿ ಬೆಪ್ಪುತಕ್ಕಡಿಗಳ ಹಾಗೆ ಹಿಂದಕ್ಕೆ ಬರಬೇಕಾಗುತ್ತದೆ. ಭೋಪಾಲ್ ಅನಿಲ ದುರಂತದ ಕತೆ ನಿಮಗೆ ಗೊತ್ತೇ ಇದೆ.

ಮೂರನೆಯದಾಗಿ, ಈ ವಿಷಯಗಳನ್ನೆಲ್ಲಾ ಜೋರಾಗಿ ಮಾತಾಡೋ ಹಾಗೇ ಇಲ್ಲ. ಜೋರಾಗಿ ಮಾತಾಡಿದ್ರೆ, ಜನ ಏನು ಹೇಳುತ್ತಾರೆ, ಸರಕಾರಗಳೂ ಕೂಡಾ ಏನು ಹೇಳುತ್ತಾವೆ? ದೊಡ್ಡ ದೊಡ್ಡ ಕಂಪೆನಿಗಳನ್ನೆಲ್ಲಾ ಓಡಿಸುತ್ತಾ ಇದ್ದೀರಿ, ಮಾತಾಡಿ, ಅಂತ. ಅಂದರೆ, ನಾರಾಯಣಮೂರ್ತಿಯಂಥವರು ಮಾತ್ರ ಮಾತಾಡಬೇಕು. ಅವರಿಗೆ ಗೊತ್ತಿದ್ದ ಗೊತ್ತಿಲ್ಲದ ಎಲ್ಲಾ ವಿಷಯದ ಬಗೆಗೂ, ತಜ್ಞರ ಹಾಗೆ ಅವರು ಮಾತ್ರ ಮಾತಾಡಬಹುದು. ಇಲ್ಲಿನ ಕಾನೂನು ಕಟ್ಟಳೆ ಗೌರವ ಅದು ಇದು ಅಂತ ಹೇಳಿ ಓಡಿಸ್ತಾ ಇದ್ದೀರಿ, ಅಂತಲೇ ಅವರ ಮಾತು. ಅಂದರೆ ಬಹುರಾಷ್ಟ್ರೀಯರನ್ನ ಇಲ್ಲಿಗೆ ಕರೆಯುವುದೇ ಒಂದು ದೊಡ್ಡ ವಿಷಯ ಅಂತ ಆಗಿರೋದರಿಂದ, ಮತ್ತೆ ನಾವು ಮಾತನಾಡುವ ಹಾಗೇ ಇಲ್ಲ. ಮೊದಲೇ ಬೇಕಂತ ಕೈಕಟ್ಟಿ ನಿಂತುಕೊಂಡವರು ಆಮೇಲೆ ಕೈಯೆತ್ತಿ ಪ್ರತಿಭಟಿಸಿ ನಮ್ಮ ಹುಚ್ಚು ಜಗಜ್ಜಾಹೀರಾಗಲು ಬಿಡುತ್ತಾರಾ? ಇದು ಒಂದು ಮುಖ್ಯ ಅಂಶ.

ಖಾಸಗೀಕರಣವನ್ನು ವಿಜೃಂಭಿಸುವವರಿಗೇನೂ ಕಮ್ಮಿ ಇಲ್ಲ. ಸರಕಾರೀ, ಸಾರ್ವಜನಿಕ ಕ್ಷೇತ್ರವನ್ನು ಹಾಳು ಮಾಡಿದ್ದೂ ಅಲ್ಲದೇ ಅದನ್ನು ನಿಂದೆ ಮಾಡುವವರೂ ನಾವೇ. ಅದೇ, ಪ್ರತಿಭಾಳ ಕಂಪೆನಿ ಒಂದು ಸಾರ್ವಜನಿಕ ಕ್ಷೇತ್ರದ ಉದ್ಯಮವಾಗಿದ್ದರೆ, ನಾವು ಸರಕಾರವನ್ನು ಎಷ್ಟೂ ಬಯ್ಯಬಹುದು, ಆದರೆ ಪ್ರತಿಭಾಳ ಡ್ರೈವರ್ ತನ್ನ ಉದ್ಯೋಗದ ಭದ್ರತೆಯ ಕಾರಣದಿಂದ, ಖಾಯಂ ಸರಕಾರಿ ನೌಕರಿ ಕಾರಣದಿಂದ, ಇಂಥ ದುಸ್ಸಾಹಸಕ್ಕೆ ಕೈ ಹಾಕುತ್ತಿದ್ದನಾ? ಇದು ಯೋಚನೆ ಮಾಡಬೇಕಾದ ವಿಷಯ. ಖಾಸಗೀಕರಣವನ್ನು ಕೊಂಡಾಡುವ ಮೊದಲು ನಾವು ಬಲಿಕೊಟ್ಟ ಸಾಮುದಾಯಿಕ ಜವಾಬ್ದಾರಿಗಳೇನು ಅಂತ ಕೂಡ ನೋಡಬೇಕಾದ್ದಿದೆ.

ಗ್ಲೋಬಲೈಸೇಶನ್ ಅಂದರೆ ಒಂದು ಸೆಲೆಬ್ರೇಶನ್ ಆಫ್ ಸರ್ಫೇಸಸ್, ಹೊರಮೈಯ ವಿಜೃಂಭಣೆ ಅಂತ ನಾನು ಮೊದಲು ಹೇಳಿದ ಮಾತಿಗೆ ಈ ಅರ್ಥ ಕೂಡಾ ಇದೆ. ಖಾಸಗೀಕರಣ ಒಳ್ಳೆಯದು ಅನ್ನುವ ನಮ್ಮ ಜನಾಭಿಪ್ರಾಯ ಕೂಡಾ ಇದೇ ರೀತಿಯ ಹೊರಮೈಯ ವಿಜೃಂಭಣೆಯ ಒಂದು ಮುಖ ಅಷ್ಟೇ. ಪೆಪ್ಸಿ, ಕೋಕಾಕೋಲಾ, ಪೀಟ್ಜಾಗಳು ನಮ್ಮ ರುಚಿಗಳನ್ನೇ ಬದಲಾಯಿಸಿವೆ. ಪ್ಲಾಚಿಮಾಡಾ ದಲ್ಲಿ ಜನ ಕೂಗಾಡಿದರೆ ಅವರಿಗೇನೂ ಚಿಂತೆ ಇಲ್ಲ. ಮಜ್ಜಿಗೆ, ಎಳನೀರು, ಕಷಾಯ,



ರಸಾಯನ ಕುಡಿಯುವುದನ್ನು ಬಿಟ್ಟು ಪೆಪ್ಸಿ, ಕೋಕಾಕೋಲಾ ಕುಡೀತಾ ಇರುವ ಜನರ ಜೊತೆ ಮಾತಾಡೋದಾದರೂ ಹೇಗೆ? ಇಂಥ ಹೊರಮೈಯ ಕೆಲವು ಆಕರ್ಷಣೆಗಳನ್ನ, ಸಂಕೇತಗಳನ್ನ ಮಾತ್ರ ಹಿಡಿದು ಅವುಗಳೇ ಧರ್ಮಗಳೋ, ಆಧ್ಯಾತ್ಮಗಳೋ ಅನ್ನುವ ಮಟ್ಟಿಗೆ ನಾವೂ ಸಾಮ್ರಾಜ್ಯಶಾಹಿಯೂ ಜೊತೆ ಸೇರಿ ಜಾಗತೀಕರಣವನ್ನು ಏರಿಸಿ ಇಟ್ಟಿದ್ದೇವೆ. ಧರ್ಮ ಮತ್ತು ಆಧ್ಯಾತ್ಮಗಳನ್ನ ಕೇವಲ ಸಂಕೇತಗಳನ್ನಾಗಿ, ಹೊರಮೈಯಾಗಿ ಪರಿವರ್ತಿಸಿ ಅದರ ಹೆಸರಿನಲ್ಲಿ ವ್ಯವಹಾರ ನಡೆಸುವುದು, ಯಾವುದನ್ನು ನಾವು ಕೋಮುವಾದ, ಮತೀಯವಾದ ಅಂತ ಕರೆಯುತ್ತೇವೆ ಅದು, ಇದರದ್ದೇ ಇನ್ನೊಂದು ಸ್ವರೂಪ. ಇವೆರಡೂ, ಮಾರುಕಟ್ಟೆಯೇ ಧರ್ಮ ಆಗಿರುವುದು, ಧರ್ಮ ಮಾರುಕಟ್ಟೆಯ ವಸ್ತು ಆಗಿರುವುದು, ಇವೆರಡೂ ಜಾಗತೀಕರಣ ಅನ್ನುವ ಒಂದೇ ನಾಣ್ಯದ ಎರಡು ಮುಖಗಳು, ಒಂದರ ಜೊತೆ ಒಂದು ಫಿಟ್ ಆಗುವಂಥವು. ಮತೀಯವಾದದ ಕರಾಳತೆ ಬಗ್ಗೆ ಮಾತಾಡದೇ ಹೆಣ್ಣಿಗೆ ಧರ್ಮಗಳು ಕೊಡುವ ನಗಣ್ಯ ಸ್ಥಾನದ ಬಗ್ಗೆ ಮಾತಾಡಲು ಹೇಗೆ ಸಾಧ್ಯವಿಲ್ಲವೋ ಹಾಗೇ ಜಾಗತೀಕರಣ ಅನ್ನುವ ಮತಾಂಧತೆಯನ್ನ ನಯವಂಚನೆಯನ್ನ ಕುರಿತು ಮಾತಾಡದೇ ಪ್ರತಿಭಾಳ ಬಗ್ಗೆ ಮಾತಾಡುವುದು ಹೇಗೆ ಅನ್ನುವುದೇ ನಾನು ಕೇಳುತ್ತಿರುವ ಮೊದಲನೇ ಪ್ರಶ್ನೆ.

ಇನ್ನು ಎರಡನೇ ಪ್ರಶ್ನೆ. ವೈದೇಹಿ ನಮ್ಮ ಒಳ್ಳೆಯ ಕಥೆಗಾರ್ತಿ ಅನ್ನುವುದು ಸುಮ್ಮನೇ ಅಲ್ಲ. ಪ್ರತಿಭಾಳ ಕೊಲೆಯ ವಿಷಯ ತೆಗೆದುಕೊಂಡು, ಆಕೆ ಮೈಮೇಲೆ ಬಂದವರ ಹಾಗೆ ಅವರು ಮಾತಾಡಿದರು. ಹೆಣ್ಣೊಬ್ಬಳು ಮನುಷ್ಯಳಾಗಿ ವ್ಯವಹರಿಸೋದಕ್ಕೆ ಸಾಧ್ಯವಾ ಅನ್ನುವ ಪ್ರಶ್ನೆಯನ್ನ ಗಂಡಸರಂತೂ ತಬ್ಬಿಬ್ಬಾಗಿ ಯೋಚನೆ ಮಾಡುವಷ್ಟು ಪ್ರಖರವಾದ ಮಾತುಗಳವು. ಅವರ ಮಾತು ಕೇಳಿ ನಾನಂತೂ ಪೂರ್ತಿ ಗಲಿಬಿಲಿ ಆಗಿಬಿಟ್ಟೆ. ನಡೂರಾತ್ರಿಯಲ್ಲಿ ಸಾಲಂಕೃತಳಾಗಿ ಕೆಲಸಕ್ಕೆ ಹೊರಟ ಪ್ರತಿಭಾ ಯಾರೋ ಹೇಳ ಹೆಸರಿಲ್ಲದ ಡ್ರೈವರೊಬ್ಬನ ಪಕ್ಕದಲ್ಲಿ ಒಬ್ಬಂಟಿಯಾಗಿ ಹೋದದ್ದರ ವಿಚಾರ ಬಿಡಿ, ಪರಿಚಿತರಾದ ನಾನು ನೀವು ಅಕ್ಕಪಕ್ಕ ಕೂತು, ಹಗಲೋ ರಾತ್ರಿಯೋ, ಮನುಷ್ಯರ ಹಾಗೆ ಮಾತಾಡುವುದು ಸಾಧ್ಯವಾ ಅಂತ ಅವರದ್ದೊಂದು ಪ್ರಶ್ನೆ. ಮರ್ಮಕ್ಕೆ ನಾಟುವ ಪ್ರಶ್ನೆ. ನಾನು ಗಲಿಬಿಲಿಗೊಂಡದ್ದಕ್ಕೆ ಆ ಡ್ರೈವರನ ಸೀಟಿನಲ್ಲಿ ನಾನು ಕೂತ ಹಾಗಾಯ್ತು ಅನ್ನುವುದೂ ಕಾರಣ. ಆ ಡ್ರೈವರನ ಸೀಟನ್ನ ನಿವಾರಿಸಿಕೊಳ್ಳದೇ, ಪ್ರತಿಭಾಳ ಪಕ್ಕದಲ್ಲಿ ಅಪರಾತ್ರಿಯಲ್ಲಿ ಆ ಡ್ರೈವರನ ಸೀಟಿನಲ್ಲೇ ಕೂತು ನನ್ನ ಈ ಕೆಲವು ಕರಾಳ ಯೋಚನೆಗಳು.

ಪ್ರತಿಭಾ ಕೊಲೆ ಆಗಿರುವುದು, ಅದಕ್ಕೂ ಮೊದಲು ಆಕೆಯ ಮಾನಭಂಗ ಆಗಿರುವುದು, ವಿಕಾರದ ದಾರಿಯನ್ನು ತರ್ಕಬದ್ಧವಾಗಿ ಹಿಡಿದ ಆ ಇಡೀ ಪ್ರಕ್ರಿಯೆ

ಇವೆಲ್ಲ ನಮ್ಮನ್ನು ಪೂರ್ತಿ ಕಂಗಾಲು ಮಾಡುತ್ತವೆ. ಬಹಳ ಯೋಚನೆಗೆ ನಮ್ಮನ್ನು ಹಚ್ಚುತ್ತವೆ. ವೈದೇಹಿಯವರು ನಮ್ಮನ್ನು ಬಹಳ ಯೋಚನೆಗೆ ಹಚ್ಚುವ ಹಾಗೆ ಮಾತಾಡಿದರು. ಆದರೂ, ಇಂಥ ವಿದ್ಯಮಾನಗಳು ನಡೆಯುತ್ತವಲ್ಲ, ದಿನಂಪ್ರತಿ ನಡೆಯುತ್ತವಲ್ಲ, ಇದನ್ನು ಗ್ರಹಿಸುವುದು ಹೇಗೆ, ಅನ್ನುವುದರ ಬಗ್ಗೆ ಬರೀ ಒಂದು ಭಾವನಾತ್ಮಕವಾಗಿ ರೆಸ್ಪಾಂಡ್ ಮಾಡುವುದಷ್ಟೇ ಅಲ್ಲದೇ, ಮನುಷ್ಯ ಸ್ವಭಾವದ ಬಗ್ಗೆ, ಲೈಂಗಿಕತೆಯ ಬಗ್ಗೆ, ಆ ಡ್ರೈವರನ ಬಗ್ಗೆಯೂ, ಯೋಚನೆ ಮಾಡಬೇಕಾದ ಪರಿಸ್ಥಿತಿ ಇದೆ. ನಾನು ಹೇಳುತ್ತಾ ಇರುವುದು ಸುಮ್ಮನೇ ಮಾತು. ವೈದೇಹಿ ಹೇಳಿದ್ದೇ ನಿಜ. ಆದರೂ, ಆ ಡ್ರೈವರನ ಸೀಟಲ್ಲಿ ನಾನಿದ್ದಿದ್ದರೆ ಏನು ಮಾಡುತ್ತಿದ್ದೆ ಅಂತ ನನಗೆ ನಿಜವಾಗಿಯೂ ಗಾಬರಿಯಾಗಿ ಹೋಯ್ತು. ಇದು ನಿಜವಾಗಿ ಎಕ್ಸಿಸ್ಟೆನ್ಶಿಯಲ್ ಪ್ರಶ್ನೆ ಇದು.

ನೀವು ಟಾಲ್‌ಸ್ಟಾಯ್ ಹೆಸರು ಕೇಳಿದ್ದೀರಿ. ಬಹಳ ದೊಡ್ಡ ಲೇಖಕ ಅವನು. ಕುವೆಂಪು ಅವನನ್ನು ಟಾಲ್‌ಸ್ಟಾಯ್ ಮಹರ್ಷಿ ಅಂತ ಕರೀತಾರೆ. ಗಾಂಧಿಗೆ ಗುರುವಾಗಿದ್ದವನು. ಗಾಂಧಿ ಟಾಲ್‌ಸ್ಟಾಯ್ ಫಾರ್ಮ್ ಅಂತಾನೇ ನಡೆಸುತ್ತಾ ಇದ್ದರು, ಆಫ್ರಿಕಾದಲ್ಲಿದ್ದಾಗ. ಅವನು ಅನ್ನಾ ಕರೆನೀನಾ ಅನ್ನುವ ಕಾದಂಬರಿ ಬರೆದ. ಬಹಳ ಗ್ರೇಟ್. ಇಟ್ ಈಸ್ ಎ ಗ್ರೇಟ್ ನಾವೆಲ್. ಅದು ಶುರುವಾಗೋದು, ಎಲ್ಲಾ ಸಾಂಪ್ರದಾಯಿಕ ಕತೆ ಕಾದಂಬರಿಗಳು ಮದುವೆಯಲ್ಲಿ ಮುಗಿದರೆ, ಅದು ಮದುವೆಯ ಅನಂತರ ಶುರುವಾಗುತ್ತೆ. ಅದೊಂದು ದೊಡ್ಡ ನಾವೆಲ್. ೧೨೦೦ ಪುಟದ ಕಾದಂಬರಿ. ಮದುವೆ ನಂತರದ ಅಷ್ಟೊಂದು ಸುದೀರ್ಘ ಕತೆ. ಈ ಅನ್ನಾ ಕರೆನೀನಾ ಅನ್ನುವವಳು, ಅವಳ ಭಾವ ಏನೋ ಅಧಿಕ ಪ್ರಸಂಗ ಮಾಡುತ್ತಾ ಇರುತ್ತಾನೆ. ಮನೆಯಲ್ಲಿ ಕೆಲಸದ ಹುಡುಗಿಯ ಜೊತೆ ಪ್ರಣಯ ಚೇಷ್ಟೆಗಳು ನಡೆಯುತ್ತಾ ಇರುತ್ತವೆ. ಇದು ಗೊತ್ತಾಗಿ ಹೆಂಡತಿ ಮುನಿಸಿಕೊಂಡಿರುತ್ತಾಳೆ. ಅದನ್ನು ಸರಿ ಪಡಿಸಲಿಕ್ಕೆ, ಅವನ ಮದುವೆಯನ್ನು ಸೆಟ್‌ರೈಟ್ ಮಾಡಲಿಕ್ಕೆ ಅನ್ನಾ ಕರೆನೀನಾ ಹೊರಡುತ್ತಾಳೆ. ಅಲ್ಲಿಂದ ಕಾದಂಬರಿ ಶುರುವಾಗುತ್ತೆ. ಅದನ್ನು ಮಾಡಲು ಹೊರಟವಳು ತನ್ನ ವಿವಾಹದಿಂದ ಕೂಡ ಹೊರನಡೆಯುತ್ತಾಳೆ. ಅದರ ಕಥೆ ಅದು. ಆಮೇಲೆ, ನೀವು ಖಂಡಿತವಾಗಿಯೂ ಗಮನಿಸಬೇಕಾದ ಕೃತಿ ಅದು; ಅವಳು, ಅನ್ನಾ ಕರೆನೀನಾ, ಅವಳಿಗೂ ಗೊತ್ತಿಲ್ಲದ ಹಾಗೆ, ಸುತ್ತಮುತ್ತಲಿನವರಿಗೂ ಗೊತ್ತಾಗದ ಹಾಗೆ, ಗೊತ್ತು ಪಡಿಸಬಾರದು ಎಂದು ಅವಳು ಕೂಡಾ ಪ್ರಯತ್ನಿಸಿ ಸೋತ ಹಾಗೆ, ರಾನ್‌ಸ್ಕಿ ಅಂತ ಒಬ್ಬ ಇರುತ್ತಾನೆ. ಸೊಗಸುಗಾರ, ತರುಣ, ರಸಿಕ. ಅವನೂ ಕೂಡಾ ದಿಙ್ಮೂಢನಾಗಿ ನೋಡುವ ರೀತಿಯಲ್ಲಿ ಈಕೆ, ಈ ವಿವಾಹಿತೆ, ಸಂಸಾರಗಳನ್ನು ನೇರ್ಪುಗೊಳಿಸುವ ಹಠತೊಟ್ಟವಳು ಬಿಕಮ್ಸ್ ಸೋ ಅಟ್ರ್ಯಾಕ್ಟೀವ್, ಸೋ ಲವ್‌ಲೀ, ಸೋ ಡಿಫಿಕಲ್ಟ್ ಟು ಮ್ಯಾನೇಜ್



ಎಟ್ ಟೈಮ್ಸ್. ಕೆಲವು ಸಂದರ್ಭಗಳಲ್ಲಿ ಎಷ್ಟು ಲೈವ್‌ಲೀ ಆಗಿದ್ದಾಳೆ ಅಂದರೆ, ಅವಳು ವಿವಾಹ ಬಂಧನದಿಂದ ಹೊರಬಂದ ಕೂಡಲೇ, ಅವಳು ಪ್ರೇಮಿ ಅಂತ ಆದ ಕೂಡಲೇ, ಯಾವ ಸ್ವರೂಪದ ಚೈತನ್ಯ ಅವಳೊಳಗೆ ಸೆಲೆ ಒಡೆಯುತ್ತದೆ ಅಂದರೆ, ಅವಳ ಪ್ರೇಮಿಯೇ ದಿಙ್ಮೂಢನಾಗಿ ಬಿಡುತ್ತಾನೆ. ಶಿ ಹ್ಯಾಸ್ ಸಚ್ ಎ ಪವರ್‌ಫುಲ್ ಪ್ರೆಸೆನ್ಸ್. ಕೆಟ್ಟ ಅರ್ಥದಲ್ಲಿ ಅಲ್ಲ, ಮಾಟಗಾತಿಯಂತೆ ಅಲ್ಲ. ಐ ಮೀನ್ ಶಿ ಈಸ್ ಫುಲ್ಲಿ ಎ ಪರ್ಸನ್, ಅಲ್ಸೋ ಬಿಕಾಸ್ ಶಿ ಈಸ್ ಔಟ್ ಆಫ್ ಮ್ಯಾರೇಜ್. ಮೋರ್ ಕರೆಕ್ಟ್‌ಲೀ, ಬಿಕಾಸ್ ಶಿ ಹ್ಯಾಸ್ ಬ್ರೋಕನ್ ಔಟ್ ಆಫ್ ಹರ್ ಮ್ಯಾರೇಜ್. ಒಂದು ಅತ್ಯಂತ ಕ್ರಿಯಾಶೀಲವಾದ, ಸೃಜನಶೀಲವಾದ ವ್ಯಕ್ತಿತ್ವವಾಗಿ ಅವಳು ಪರಿವರ್ತನೆ ಆಗುತ್ತಾಳೆ. ನೋಡಿದವರೆಲ್ಲಾ ಅವಳ ಹೊಸ ಸೌಂದರ್ಯದ ಎದುರು, ಹೊಸ ಪರಿಪೂರ್ಣ ವ್ಯಕ್ತಿತ್ವದ ಎದುರು ದಿಙ್ಮೂಢ ರಾಗುವಷ್ಟು. ಅವಳ ಗಂಡನೇನೂ ದುಷ್ಟನಲ್ಲ. ಸಭ್ಯ. ದೊಡ್ಡ ಉದ್ಯೋಗದಲ್ಲಿರುವವನು. ಸ್ವಲ್ಪಮಟ್ಟಿಗೆ ತನ್ನ ಮಹಾತ್ವಾಕಾಂಕ್ಷೆಗಳನ್ನೇ ವಿವಾಹವಾದವನು. ಆದರೆ ಹೆಂಡತಿಯನ್ನು ಯಾವುದೇ ಸಾಂಪ್ರದಾಯಿಕ ಗಂಡನಂತೆ ಚೆನ್ನಾಗಿಯೇ ನೋಡಿಕೊಂಡವನು. ಅವನೂ ಅವಳ ಈ ಹೊಸ ಅವತಾರ ನೋಡಿ ತತ್ತರಿಸಿಹೋಗುತ್ತಾನೆ. ಅವಳಿಗೊಂದು ವ್ಯಕ್ತಿತ್ವವಿದೆ ಎಂಬುದು ನಿಧಾನವಾಗಿ ಅವನ ಅರಿವಿಗೆ ಬರಲು ಶುರುವಾಗುತ್ತದೆ. ಕೆಲವೊಂದು ಸಂದರ್ಭದಲ್ಲಂತೂ ಅವಳ ಉತ್ಕಟ ಪ್ರೇಮಿ ರಾನ್‌ಸ್ಕಿ ಕ್ಹೂಡಾ ಅವಳ ಕಾಲಬುಡದಲ್ಲಿ ಬೆಪ್ಪನಂತೆ ತತ್ತರಿಸಿ ನಿಲ್ಲಬೇಕಾಗುತ್ತದೆ. ಶಿ ಈಸ್ ಆಲ್ ಎನರ್ಜಿ. ಅಂದರೆ ಮಹಾಕಾಳಿಯಂತಲ್ಲ. ಸುತ್ತಮುತ್ತಲ ಜನರು, ಹೆಂಗಸರೂ ಸೇರಿದಂತೆ, ಅವಳನ್ನು ನೋಡಿ ಮರುಳಾಗುವಂತೆ, ಗಂಡ ಬಿಡಿ, ಪ್ರೇಮಿ ಕೂಡಾ ತನ್ನ ಲೆಕ್ಕಕ್ಕಿಂತ ಸ್ವಲ್ಪ ಕೆಳಗೆ ಎಂಬ ಆಕೆಯ ಆತ್ಮವಿಶ್ವಾಸದಲ್ಲಿ ಅವಳು ಯಾರ ಕೈಗೊಂಬೆಯೂ ಅಲ್ಲ. ರಾನ್‌ಸ್ಕಿಯ ಉತ್ಕಟ ಪ್ರೇಮ ಕೂಡಾ ಆಕೆಯ ವ್ಯಕ್ತಿತ್ವವನ್ನ ಒಳಗೊಳ್ಳಲಾಗದೇ ಹೋಗುತ್ತದೆ. ಯಾಕೆಂದರೆ ಅವನ ಉತ್ಕಟ ಪ್ರೇಮ ಕೂಡಾ ಬಯಸುವುದು ದಿವ್ಯ ಪ್ರಿಯತಮೆಯನ್ನ. ಅನ್ನಾ ಕರೆನೀನಾ ನಿಜಕ್ಕೂ ಪ್ರಿಯತಮೆಯೇ ಆದರೂ, ವಿವಾಹದಿಂದ ಹೊರಬಂದು ಪ್ರೇಮವಾಗಿ ಅರಳಿದ ಮೇಲೆ ಅವಳು ಪ್ರೇಮತೋಕ ಕ್ಕಿಂತಲೂ ಮೇಲೇರಿದವಳು. ವಿವಾಹದ ಹೊರಗಿನ ಪ್ರೇಮ ಕೂಡಾ ಅವಳ ಈ ವ್ಯಕ್ತಿತ್ವವನ್ನು ಗ್ರಹಿಸಲಾರದೇ ಹೋದಂತಾಗಿ ಆಕೆ ಆತ್ಮಹತ್ಯೆಗೆ ಶರಣಾಗುತ್ತಾಳೆ. ಯಾರ ಹತೋಟಿಗೂ, ನಿರ್ಬಂಧಕ್ಕೂ, ಜರ್ಝರಗೊಳ್ಳುವ ಪ್ರೇಮದ ಆಲಿಂಗನಕ್ಕೂ ಸಿಕ್ಕದ ಹಾಗೆ ಅವಳು ಪಾರಾಗುತ್ತಾಳೆ. ಅಂದರೆ, ಸಾಯುತ್ತಾಳೆ.

ಅರಳಿದ ಹೆಣ್ಣಿನ ಪರಿಪೂರ್ಣ ವ್ಯಕ್ತಿತ್ವಕ್ಕೆ ಸಾವೇ ಬಿಡುಗಡೆ ಎಂಬುದು

ಟಾಲ್‌ಸ್ಟಾಯ್ ನ ಅರ್ಥವೂ ಅಲ್ಲ, ಉದ್ದೇಶವೂ ಅಲ್ಲ. ಆಕೆಯನ್ನು ನೆಲೆಗೊಳಿಸದೇ ಹೋದ ನತದೃಷ್ಟ ಲೋಕವೇ ಟಾಲ್‌ಸ್ಟಾಯ್‌ನ ಗಮನಕೇಂದ್ರ.

ಆದರೆ ಇಂಥ ಕಾದಂಬರಿಯನ್ನ ಬರೆದ ಟಾಲ್‌ಸ್ಟಾಯ್, ಅವನು, ಈ ಥರದ ವಿಚಾರಗಳ ಬಗ್ಗೆ ಯೋಚನೆ ಮಾಡುವುದು ಕೂಡಾ ತಪ್ಪು ಅಂತ ತಿಳಕೊಂಡವನು. ಗಾಂಧಿಗೆ ಬ್ರಹ್ಮಚರ್ಯದ ಮಾತುಗಳನ್ನು ಹೇಳಿಕೊಟ್ಟವನು. ಈ ಕಾದಂಬರಿ ಬರೆದ ಟಾಲ್‌ಸ್ಟಾಯ್ ಅದನ್ನ ಸುಟ್ಟು ಹಾಕಿದನಂತೆ. ಅವನ ವಿಚಾರಗಳಿಗೆ ಅದು ವಿರುದ್ಧವಾಗಿದೆ ಅಂತ. ಐದು ವರ್ಷದ ಅನಂತರ ಅದನ್ನು ಪುನಃ ಆತ ಬರೆದ. ಅಂದರೆ, ಅಷ್ಟು ಒತ್ತಾಯ ತಂದು ಅನ್ನಾ ಕರೆನೀನಾ ಅವನಿಂದ ಅದನ್ನ ಬರೆಸಿದ್ದಾಳೆ. ಆಮೇಲೆ ಅವನು ಬರೆದ ಕಾದಂಬರಿ ಏನಿದೆ, ಅಂದರೆ, ತನಗೇ ವಿರುದ್ಧವಾಗಿ ಆತ ಬರಕೊಂಡ ಕಾದಂಬರಿ ಏನಿದೆ, ಅದೇ ಈಗಿನ ಅನ್ನಾ ಕರೆನೀನಾ ಕಾದಂಬರಿ. ಮದುವೆಯಿಂದ ಹೊರಗೆ ಬಂದು ಪ್ರೇಮದಲ್ಲಿ ಅರಳುತ್ತಾ ಇರುವ ಅನ್ನಾ ಕರೆನೀನಾಳ ಎನರ್ಜಿ ನೋಡಿ ಲೇಖಕನೇ ತತ್ತರಿಸಿಹೋಗಿದ್ದಾನೆ, ಮಂತ್ರಮುಗ್ಧನಾದವನ ಹಾಗೆ. ಬರೀ ಅವಳ ಮಾತುಗಳನ್ನ ಅವನು ಲಿಪಿಕಾರನ ಹಾಗೆ ಕಾಪಿ ಮಾಡುತ್ತಾ ಇದ್ದಾನೆ ಅನಿಸುವ ಎಷ್ಟೊಂದು ಭಾಗಗಳು ಆ ಕಾದಂಬರಿಯಲ್ಲಿ ಇವೆ.

ಲೈಂಗಿಕತೆಯನ್ನ ಹೊರತುಪಡಿಸಿ ಹೆಣ್ಣು ಗಂಡು ಅಂತ ಇಲ್ಲ ಅಂತ ಈ ಬ್ರಹ್ಮಚರ್ಯ ಬೋಧಿಸುವ ಟಾಲ್‌ಸ್ಟಾಯ್‌ಗೆ ಇಲ್ಲಿ ಕಾಣಿಸುತ್ತೆ. ಮತ್ತೆ, ಈ ಹೆಣ್ಣಿನ ಲೈಂಗಿಕತೆಯನ್ನು ಅದರ ದಮನದಿಂದ ಬಿಡುಗಡೆ ಮಾಡಿದರೆ ಆಗ ಅವಳು ಬರೀ ಲೈಂಗಿಕ ಜೀವಿಯಾಗಿ ಮಾತ್ರ ಅಲ್ಲ, ಅದೂ ಹೌದು, ಆದರೆ ಅದನ್ನೂ ಮೀರಿ ಒಂದು ಪರಿಪೂರ್ಣ ವ್ಯಕ್ತಿ ಅಂತ ಆದರೆ, ಹಾಗೆ ಅವಳು ಆಗಲಿಕ್ಕೆ ಇದುವರೆಗೆ ಬಿಟ್ಟಿಲ್ಲ ಅಂತ ಅವನ ಆತಂಕ, ಪರಿಪೂರ್ಣ ವ್ಯಕ್ತಿ ಅಂತ ಆದರೆ ಅದನ್ನ ತಾಳಿಕೊಳ್ಳುವ ವ್ಯವಸ್ಥೆ ನಮ್ಮಲ್ಲಿ ಇದೆಯಾ, ವ್ಯಕ್ತಿತ್ವ ನಮ್ಮಲ್ಲಿ ಇದೆಯಾ, ಈ ಲೈಂಗಿಕತೆ ಅನ್ನೋದೇ ಒಂದು ದೊಡ್ಡ ಸಮಸ್ಯೆ ಅಲ್ಲವಾ ಅಂತ ಟಾಲ್‌ಸ್ಟಾಯ್ ಪ್ರಶ್ನೆ. ಅದಕ್ಕೇ, ಹೆಣ್ಣು ಒಂದು ಪರಿಪೂರ್ಣ ವ್ಯಕ್ತಿ ಅಂತ ಆಗಿ ಅರಳಬೇಕಾದರೆ ಗಂಡಸು ತನ್ನ ಲೈಂಗಿಕತೆಯನ್ನ ಸಂಪೂರ್ಣ ಹತ್ತಿಕ್ಕಬೇಕು, ಬ್ರಹ್ಮಚರ್ಯ ಪಾಲನೆ ಮಾಡಬೇಕು, ಆಗ ಮಾತ್ರ ಹೆಣ್ಣು ಭೋಗವಸ್ತುವಾಗಿ ಕಾಣುವ ದುರಂತದಿಂದ ಬಿಡುಗಡೆ ಅಂತ ಅವನ ವಾದ. ಅವನ ವಾದ ಸರಿಯೋ, ತಪ್ಪೋ. ಆದರೆ, ಹೆಣ್ಣಿನ ಶೋಷಣೆಯ ಹೆಚ್ಚೂ ಕಡಿಮೆ ಎಲ್ಲಾ ಮುಖಗಳೂ ಲೈಂಗಿಕ ಅನ್ನೋದು, ಬಂಡವಾಳಶಾಹಿಯಂತೂ ಅದೊಂದು ತೋಡಿ ಮುಗಿಯದ ಗಣಿ ಅನ್ನುವ ಹಾಗೆ ಹೆಣ್ಣಿನ ಲೈಂಗಿಕತೆಯ ರಾಗಾಲಾಪ ಮಾಡುತ್ತಾ ಇರೋದು ನಮ್ಮ ಕಣ್ಣೆದುರೇ ನಡೆಯುತ್ತಾ ಇರುವಂಥದ್ದು. ಹೆಣ್ಣಿನಲ್ಲಿ, ಆಕೆಯ



ಲೈಂಗಿಕತೆಯಲ್ಲಿ ಬಂಡವಾಳಶಾಹಿ ಮಾಡಿರೋ ಇನ್‌ವೆಸ್ಟ್‌ಮೆಂಟ್ ಏನೂ ಕಡಿಮೆ ಅಲ್ಲ.

ಹಾಗಾಗಿ, ಅವಳು ಕಾರಲ್ಲೇ ಓಡಾಡಿದರೂ, ಒಳ್ಳೇ ಇಂಗ್ಲಿಷ್ ಮಾತಾಡಿದರೂ, ಎಷ್ಟೇ ಸಂಬಳ ಪಡೆದರೂ ಅವಳನ್ನ ನೋಡುವ ದೃಷ್ಟಿ ಬದಲಾದೀತು ಅನ್ನುವುದು ಸುಲಭ ಅಲ್ಲ. ಮಾತ್ರ ಅಲ್ಲ, ಇದೆಲ್ಲ ಅವಳ ಆಕರ್ಷಣೆಯನ್ನ ಹೆಚ್ಚಿಸೋವಂಥ ಹೊಸ ಅಲಂಕಾರಗಳೇ ಆಗಬಹುದು. ಪ್ರತಿಭಾ ಲೈಂಗಿಕ ಆಕ್ರಮಣಕ್ಕೂ ಒಳಗಾದಳು, ಕೊಲೆಯೂ ಆದಳು. ಇವತ್ತು ಪ್ರತಿಭಾಳ ಡ್ರೈವರ್ ವಿಷಯ ಬಿಡಿ, ಸಮುದಾಯಗಳು, ಜನರು, ಸೈನಿಕರು, ದೇಶಗಳು ಕೂಡಾ, ಲೈಂಗಿಕ ಆಕ್ರಮಣ ಮತ್ತೆ ಕೊಲೆ ಎರಡೂ ಒಂದೇ ಅನ್ನುವ ರೀತಿಯಲ್ಲಿ ಮಾಡುವಂಥವು. ಎದುರು ಕಾಣುವ ಇನ್ನೊಂದು ಗುರುತನ್ನ ನಾಶಮಾಡೋದು ಅಂದರೆ ಲೈಂಗಿಕ ಆಕ್ರಮಣವನ್ನ ಕೊಲೆಯ ರೀತಿಯಲ್ಲಿ ಮಾಡೋದು, ಆಮೇಲೆ ಕೇವಲ ಒಂದು ಆಫ್ಟರ್ ಥಾಟ್ ಆಗಿ, ಕೊಲೆ ಕೂಡಾ ಮಾಡೋದು ಅನ್ನುವುದು ಮೇಲಿಂದ ಮೇಲೆ ನಾವು ಕಂಡೇ ಇದ್ದೇವೆ. ದೇಶ ಇಬ್ಭಾಗ ಆದಾಗ ಮುಖ್ಯವಾಗಿ ಆದದ್ದು ಇದೇ ಲೈಂಗಿಕ ದುರಾಕ್ರಮಣ. ಸಾದತ್ ಹಸನ್ ಮಾಂಟೋನನ್ನ ಓದಿ ಗೊತ್ತಾಗುತ್ತೆ. ಗುಜರಾತಲ್ಲಿ ಕೂಡಾ ಗರ್ಭಿಣಿಯ ಹೊಟ್ಟೆ ಸೀಳಿ ತ್ರಿಶೂಲದ ತುದೀಲಿ ಭ್ರೂಣವನ್ನ ಹೊತ್ತುಕೊಂಡು ಪ್ರೇತನೃತ್ಯ ಮಾಡಿದವರೂ ಕೂಡಾ ಬಯಸೋದು, ಹೆಣ್ಣು, ಅಂದರೆ ತಮ್ಮ ಎದುರಿರುವವರು, ಲೈಂಗಿಕತೆಯ ಜೊತೆಗೇ ಬರೋ ತಮ್ಮ ವ್ಯಕ್ತಿತ್ವಗಳನ್ನು ಅದುಮಿಕೊಳ್ಳಲಿ, ನಮ್ಮ ಕಾಲಡಿ ಮಾತ್ರ ಸಿಕ್ಕಲಿ ಅಂತ ತಾನೇ ?

ಟಾಲ್‌ಸ್ಟಾಯ್‌ದು ಇನ್ನೊಂದು ಕಥೆ ಇದೆ. ತುಂಬಾ ದೊಡ್ಡ ಕತೆ. ೧೨೦ ಪುಟದಷ್ಟು ದೊಡ್ಡದು. ಕ್ರೋಯ್‌ತ್ಸೆರ್ ಸೊನಾಟಾ ಅಂತ. ಬಹಳ ವಿಲಕ್ಷಣವಾದ ಕತೆ ಅದು. ನನ್ನನ್ನಂತೂ ಪೂರ್ತಿ ಕಂಗಾಲು ಮಾಡಿರೋ ಕಥೆ ಅದು. ಇಂಗ್ಲಿಷಲ್ಲಿ ಒಂದು ಪದ ಇದೆ. ಮಿಸೊಜಿನಿ ಅಂತ. ಅಂದರೆ ಸ್ತ್ರೀದ್ವೇಷ ಅಂತ. ಇದೊಂದು ಮಿಸೋಜಿನಿಸ್ಟ್ ಕಥೆ. ಸ್ತ್ರೀದ್ವೇಷಿ ಇದರಲ್ಲಿ ಒಬ್ಬ ಕೇಂದ್ರ ಪಾತ್ರ ಆಗಿದ್ದಾನೆ. ಅವನು ಗಂಡನೂ ಹೌದು, ತನ್ನ ಹೆಂಡತಿಯನ್ನು ಈಗತಾನೆ ಕೊಲೆಮಾಡಿ ಬಂದಿರೋ ಕೊಲೆಗಡುಕನೂ ಹೌದು. ಟಾಲ್‌ಸ್ಟಾಯ್ ಹೇಳುತ್ತಾನೆ, ಇವೆರಡೂ ಬೇರೆ ಅಲ್ಲ, ಗಂಡ ಅಂದರೂ ಹೆಂಡತಿಯ ಕೊಲೆಗಾರ ಅಂದರೂ ಒಂದೇ. ನಿಜವಾಗಿಯೂ ಆತ ಮಾಡಿದ ಕೊಲೆ ಒಂದು ಆಫ್ಟರ್‌ಥಾಟ್. ದಾಂಪತ್ಯದ ಉದ್ದಕ್ಕೂ, ಹೆಂಡತಿ ಬದುಕಿದ್ದಾಗಲೂ ನಡೆದದ್ದೇ ನಿಜವಾದ ಕೊಲೆ, ಅದಕ್ಕೆ ಲೈಂಗಿಕತೆ ಅನ್ನುವ ವಿಷಯವೇ ಕಾರಣ ಅಂತ ಅದರಲ್ಲಿ ಅವನ ವಾದ. ಇದು ಗಮನಿಸಬೇಕಾದ ಬಹಳ ಪವರ್‌ಫುಲ್

ಸ್ಟೋರಿ. ಅದರಲ್ಲಿ ಮಹಿಳಾ ಚಳುವಳಿಯ ಕೆಲವರು ಹೆಣ್ಣುಮಕ್ಕಳು ಬರುತ್ತಾರೆ. ಮಾಡರ್ನ್, ಫ್ಯಾಶನೆಬ್‌ಲ್, ಫ್ರೀ ಥಿಂಕಿಂಗ್. ಅವರನ್ನೆಲ್ಲಾ ಕೇಂದ್ರ ಪಾತ್ರವಾಗಿರೋ ವ್ಯಕ್ತಿ ತಮಾಷೆ ಮಾಡುತ್ತಾನೆ. ಮದುವೆಗಳು ಪ್ರೇಮದ ಆಧಾರದ ಮೇಲೆ, ಪ್ರೇಮ ಅಂದರೆ ದಿವ್ಯವಾದದ್ದು ಅಂತ ಅವರು ಹೇಳಿದರೆ, ನೀವು ಹೇಳುವ ಪ್ರೇಮ ಯಾವ ಚೆಂದದ ಹೆಣ್ಣನ್ನು ಕಂಡರೂ ಗಂಡಿಗೆ ಉಂಟಾಗುತ್ತೆ, ಮತ್ತೆ ಪ್ರೇಮ ದಿವ್ಯವಾದದ್ದು, ಆದರ್ಶ ಅಂತೆಲ್ಲಾ ಆದರೆ ಅದನ್ನ ಹಾಸಿಗೆಗೆ ಯಾಕೆ ತೆಗೆದುಕೊಂಡು ಹೋಗಬೇಕು. ನಿಮ್ಮ ದಿವ್ಯಪ್ರೇಮ ಅಂದರೆ ಹಾಸಿಗೆ ಏರೋದು ಅಂತ ಅಲ್ಲವಾ ಅಂತ ಅವನು ಮಾತಾಡುವವನು. ಪ್ರೇಮದ ಬಗ್ಗೆ, ಮ್ಯೂಸಿಕ್ ಬಗ್ಗೆ, ಕಲೆ ಬಗ್ಗೆ ಬಹಳ ತೀಕ್ಷ್ಣವಾದ, ಕಟುವಾದ ವಿಮರ್ಶೆ ಮಾಡುತ್ತಾನೆ. ಅದು ಸರಿ ಇಲ್ಲ ಅಂತ. ಅವೆಲ್ಲಾ ಮನುಷ್ಯರ ಭಾವನೆಗಳನ್ನು ಉದ್ದೀಪಿಸುವುದಕ್ಕೆ ಇವೆ ಅಂತ. ಪ್ಲೇಟೋ ಥರ. ಅಂದರೆ ಕ್ರೋಯ್‌ತ್ಸೆರ್ ಸೊನಾಟಾ ಕತೆ ಬರೆಯಲಿಕ್ಕೆ ಅವನಿಗೆ ಪ್ರೇರೇಪಣೆ ಆದ ಕ್ರೋಯ್‌ತ್ಸೆರ್ ಸೊನಾಟಾ ಅನ್ನುವ ಬೀಥೋವೆನ್ ಸಿಂಫೊನಿ ಏನಿದೆ, ಸಂಗೀತ ಏನಿದೆ, ಅದರ ವಿರುದ್ಧವೇ ಅವನ ತಕರಾರು. ಆಮೇಲೆ, ಕಥೆ ಓದುತ್ತಾ ಹೋದಾಗ ಏನು ಗೊತ್ತಾಗುತ್ತೆ ಅಂದರೆ, ಆ ವ್ಯಕ್ತಿ ತನ್ನ ಹೆಂಡತಿಯನ್ನು ಕೊಲೆಮಾಡಿ ಬಂದಿರುತ್ತಾನೆ, ಮತ್ತೆ ತನ್ನದೇ ವೈಖರಿಯಲ್ಲಿ ಕನ್‌ಫೆಶನ್ ಮಾಡಿಕೊಳ್ಳುತ್ತಾ ಇದ್ದಾನೆ, ಅಂತ. ತನ್ನ ಹೆಂಡತಿ ಕೊಲೆಯಾಗಿ ಸತ್ತಳು ಅಂತಲ್ಲ, ಅವಳ ವ್ಯಕ್ತಿತ್ವ ಯಾರಿಗೂ ಬೇಡ ನೋಡಿ, ಅವಳ ವ್ಯಕ್ತಿತ್ವ ಎಲ್ಲರಿಗೂ, ನನಗೂ ಒಂದು ಸವಾಲು ಅಂತ ಆತನ ಕನ್‌ಫೆಶನ್.

ಅವನ ಹೆಂಡತಿ ಬದುಕಿದ್ದಾಗ, ಅವಳು ಜೀವಂತ ಇದ್ದಾಗ, ಅವಳನ್ನು ಭೋಗಿಸಿ, ಪೀಡಿಸಿ ತನ್ನ ಗುರುತನ್ನು ಉಳಿಸಿಕೊಂಡವ ಅವನು. ಅವಳ ಕೊಲೆ ಆದಮೇಲೆ, ಅಂದರೆ ಅವಳ ಕೊಲೆ ಮಾಡಿದ್ದರಿಂದ ಅವಳಿಂದ ಇನ್ನು ಮೇಲೆ ತನ್ನ ವ್ಯಕ್ತಿತ್ವಕ್ಕೆ, ಲೈಂಗಿಕ ಆಸೆಗೆ ಸವಾಲಿಲ್ಲ, ಛಾಲೆಂಜ್ ಇಲ್ಲ ಅಂತ ಆದಮೇಲೆ, ಈಗ, ಅವಳು ಆತನಿಗೆ ವ್ಯಕ್ತಿತ್ವವಾಗಿ ಕಾಣಿಸುತ್ತಾಳೆ. ಮತ್ತೆ ಅವನ ಅಹಂಕಾರ ಕೂಡಾ ಈಗ ಕರಗಿದೆ. ಅವನ ಕನ್‌ಫೆಶನ್ ಏನಿದೆ, ಅದು ತಪ್ಪು ಮಾಡಿದವರು, ಅಯ್ಯೋ ಏನೋ ತಪ್ಪಾಯ್ತು ಅನ್ನೋ ಥರದ ಕನ್‌ಫೆಶನ್ ಅಲ್ಲ. ಅವಳು ಇಲ್ಲವಾದ ಮೇಲೆ ಕನ್‌ಫೆಶನ್ ಅಲ್ಲದೇ ಬೇರೆ ಸಾಧ್ಯ ಇಲ್ಲ ಅನ್ನುವ ಥರದ್ದು. ಅಂದರೆ, ಅವಳು ಇದ್ದಾಗ ಅವಳ ಕೊಲೆ ಮಾಡದೇ ತನಗೆ ಅಸ್ತಿತ್ವ ಇಲ್ಲ ಅನ್ನುವ ಥರದ್ದು. ಇಲ್ಲ ಅಂತಾದಾಗ ಮಾತ್ರ ಅವಳಿಗೆ ವ್ಯಕ್ತಿತ್ವ ಅನ್ನುವ ಥರದ್ದು.

ಇದೆಲ್ಲಾ ನೋಡಿ, ಟಾಲ್‌ಸ್ಟಾಯ್ ಹೇಳುವ ಮಾತು ಏನು ಅಂದರೆ, ಗಂಡು ಹೆಣ್ಣಿನ ಲೈಂಗಿಕ ಆಕರ್ಷಣೆ, ಲೈಂಗಿಕತೆ, ಮನುಷ್ಯತ್ವವನ್ನೇ ನಾಶಮಾಡುವಂಥದ್ದು.



ಹಾಗಾಗಿ ಲೈಂಗಿಕ ಸಂಪರ್ಕ ಅಪರಾಧ ಅಂತ. ಅದಕ್ಕೇ ಅವನು ಗಂಡಸರಿಗೆ ಬ್ರಹ್ಮಚರ್ಯವನ್ನು ಬೋಧಿಸುವುದು. ಬರೀ ಲೈಂಗಿಕ ಸಂಪರ್ಕ ಮಾತ್ರ ಅಪರಾಧ ಅಂತ ಅಲ್ಲ, ಕ್ರೋಯ್‌ತ್ಸೆರ್ ಸೊನಾಟಾದಲ್ಲಿ ಅವನು ಹೇಳುವುದು ಮದುವೆಯ ಒಳಗೆಯೇ ಲೈಂಗಿಕ ಸಂಪರ್ಕ ಅಪರಾಧ ಅಂತ. ಗಂಡಸರು ಪಶುಗಳಾಗುವುದು ಅದರಿಂದಲೇ ಅಂತ. ಹೆಂಗಸರು ಗಂಡಸರನ್ನು ಕೈವಶ ಮಾಡಿಕೊಳ್ಳುವ ಮಾಟಗಾತಿಯರ ಹಾಗಾಗುವುದು ಕೂಡಾ, ತಮ್ಮ ವ್ಯಕ್ತಿತ್ವವನ್ನ ಕಳಕೊಳ್ಳೋದು ಕೂಡಾ, ಅದರಿಂದಲೇ ಅಂತ.

ಝಾರ್ ಆಡಳಿತದ ರಷ್ಯಾ ಸರಕಾರ ಈ ಕಥೆಯನ್ನ ಬಹಿಷ್ಕಾರ ಮಾಡಿತ್ತು. ಮದುವೆ ಅನ್ನುವ ಸಂಪ್ರದಾಯಕ್ಕೆ ಕೂಡಾ ಇವನು ದೊಡ್ಡ ಕಂಟಕ ಅಂತ. ಓರ್ಥೊಡೋಕ್ಸ್ ಚರ್ಚ್ ಕೂಡಾ ಟಾಲ್‌ಸ್ಟಾಯ್ ವಿರುದ್ಧ ಝಾರ್‌ಗೆ ದೂರು ಕೊಟ್ಟಿತ್ತು. ಹಾಗಾಗಿ ರಷ್ಯಾದಲ್ಲಿ ದೊಡ್ಡ ಕೋಲಾಹಲವೇ ಆಗಿತ್ತು. ಇದನ್ನ ಬರೆಯುವಾಗ ಟಾಲ್‌ಸ್ಟಾಯ್‌ಗೆ ೬೨ ವರ್ಷ. ಕ್ರೋಯ್‌ತ್ಸೆರ್ ಸೊನಾಟಾ ಅನ್ನುವುದು ಭೀಥೋವೆನ್ನನ ಒಂದು ಸುಪ್ರಸಿದ್ಧ ಸಿಂಫೋನಿ. ಮೊದಲಸಾರಿ ಈ ಕ್ರೋಯ್‌ತ್ಸೆರ್ ಸೊನಾಟಾ ಅನ್ನುವ ಭೀಥೋವೆನ್ ಸಿಂಫೋನಿಯನ್ನು ಕೇಳಿದಾಗ ಟಾಲ್‌ಸ್ಟಾಯ್, ಈ ಅಜ್ಜ, ಎದ್ದು ಕಿಟಕಿ ಪಕ್ಕ ಹೋಗಿ ನಿಂತು ಗಳಗಳ ಅತ್ತಿದ್ದ. ಅದು ಆತನ ೬೦ನೇ ವಯಸ್ಸಲ್ಲಿ. ಆದರೆ ಅದೇ ರಾತ್ರಿ ಅವನ ಹೆಂಡತಿಗೆ ಹದಿಮೂರನೇ ಮಗುವಿಗೆ ಗರ್ಭವನ್ನೂ ನೀಡಿದ್ದ. ಎರಡು ವರ್ಷ ಕಳೆದು, ಅವನು ೬೨ ರಲ್ಲಿದ್ದಾಗ, ಅದೇ ಸಿಂಫೋನಿಯನ್ನ ಮತ್ತೊಮ್ಮೆ ಕೇಳಿ, ಆ ಉತ್ಕಟತೆಯಲ್ಲಿ ಅವನು ಬರೆದಿರೋ ಕಥೆ ಇದು. ಆದಿನ ರಾತ್ರಿ ಟಾಲ್‌ಸ್ಟಾಯ್‌ನ ಹೆಂಡತಿ ತಾನು ಇವತ್ತು ಹದಿನಾಲ್ಕನೇ ಮಗುವಿಗೆ ತಾಯಿ ಆಗುತ್ತೇನೇನೋ ಅಂತ ಗಾಬರಿ ಆಗಿದ್ದಳು. ಬ್ರಹ್ಮಚರ್ಯ ಬ್ರಹ್ಮಚರ್ಯ ಅಂತ ಮಾತಾಡುವ ಟಾಲ್‌ಸ್ಟಾಯ್ ಕೂಡ, ಅಯ್ಯೋ ದೇವರೇ, ನಾಳೆ ಈ ಕತೆ ಬರೆದ ದಿನಾಂಕ, ಮತ್ತೆ ಹುಟ್ಟಬಹುದಾದ ಹದಿನಾಲ್ಕನೇ ಮಗುವಿನ ಜನ್ಮ ದಿನ ಎರಡೂ ತಾಳೆ ಆಗುತ್ತಲ್ಲ, ನನ್ನ ಮಕ್ಕಳು ನನ್ನನ್ನ ತಮಾಷೆ ಮಾಡೋದಿಲ್ಲವಾ ಅಂತ ಗುಟ್ಟಾಗಿ ಬರಕೊಂಡು ಕೊರಗುತ್ತಾನೆ.

ಟಾಲ್‌ಸ್ಟಾಯ್‌ನಿಂದ ಜೀವಮಾನ ಇಡೀ ಲೈಂಗಿಕ ದುರಾಕ್ರಮಣಕ್ಕೆ ತಾನು ಒಳಗಾದೆ ಅಂತ ಆತನ ಹೆಂಡತಿ ತನ್ನ ಡೈರಿಯಲ್ಲಿ ದಿನಂಪ್ರತಿ ಬರಕೊಳ್ಳುತ್ತಾಳೆ. ಟಾಲ್‌ಸ್ಟಾಯ್ ಮಹರ್ಷಿತ್ವದಿಂದಾಗಿ ಅದೆಲ್ಲಾ ಯಾರೂ ಕೇಳಲೇ ಇಲ್ಲ. ಈ ಮೃಗ ಬಂದು ನನ್ನ ಮೈಮೇಲೆ ಬಿತ್ತು ಅಂತ ಒಂದು ದಿನ ಅವಳು ಬರಕೊಳ್ಳುತ್ತಾಳೆ. ಟಾಲ್‌ಸ್ಟಾಯ್ ಸಾಯುವಾಗ ಆತನಿಗೆ ೮೧ ವರ್ಷ. ಅದರ ಹಿಂದಿನ ವರ್ಷ ಕೂಡಾ

ಆಕೆ ಬರಕೊಂಡದ್ದು, ಡೈರಿಯಲ್ಲಿ, ಪ್ರೀತಿ ಅಂದರೆ ಹಿಂಸೆ, ನನ್ನ ವ್ಯಕ್ತಿತ್ವವೇ ಇದರಡಿಯಲ್ಲಿ ಧೂಳೀಪಟ ಆಗಿದೆ ಅಂತ. ಪ್ರೀತಿ ಅಂದರೆ ನಾನು ಕೇಳಿದ್ದು ಆರ್ದ್ರತೆಯನ್ನ, ಬೆಚ್ಚನೆ ಗಮನವನ್ನ, ನಾನೂ ಒಂದು ಜೀವ ಅಂತ ಅಂತಾಳೆ. ಟಾಲ್‌ಸ್ಟಾಯ್ ಸಾಯುವ ಹಿಂದಿನ ವರ್ಷ ಅವಳ ಡೈರಿಯಲ್ಲಿ ಅವಳು ಬರಕೊಂಡದ್ದರ ಪ್ರಕಾರ ಉತ್ಕಟ ಲೈಂಗಿಕತೆಯ ಸ್ಫೋಟ ಮತ್ತೆ ದೀರ್ಘಕಾಲ ಅವನ ತಿರಸ್ಕಾರ, ಅದು ಮಾತ್ರ ತಾನು ಕಂಡದ್ದು ಅಂತ. ಕ್ರೋಯ್‌ತ್ಸರ್ ಸೊನಾಟಾದಲ್ಲಿ ಕಥೆಯ ಕೇಂದ್ರ ಪಾತ್ರ ಮಾಡುವ ಕನ್‌ಫೆಶನ್‌ನಲ್ಲಿ ಒಂದು ಮಾತಿದೆ. ಅದು ಟಾಲ್‌ಸ್ಟಾಯ್‌ದೇ ಮಾತಿರಬಹುದು. ಹೆಂಡತಿಯ ಕೊಲೆ ಮದುವೆಯಾದ ಹೊಸದರಲ್ಲೇ ಶುರುವಾಯ್ತು ಅಂತ. ಅದಕ್ಕೇ ಟಾಲ್‌ಸ್ಟಾಯ್‌ನ ಹೆಂಡತಿ ಝಾರ್ ಜೊತೆ ಮಾತಾಡಿ ಜಗಳಕಾದು ಕ್ರೋಯ್‌ತ್ಸರ್ ಸೊನಾಟಾ ಕಥೆಯ ಮೇಲಿದ್ದ ಬಹಿಷ್ಕಾರವನ್ನ ಹಿಂದೆ ತೆಗೆಸಿದ್ದಳು. ಅದು ಪ್ರಕಟವಾಗುವ ಹಾಗೆ ನೋಡಿಕೊಂಡಿದ್ದಳು. ಅದು ಅವಳದ್ದೇ ಕಥೆ ಅಂತ ಅವಳಿಗೇನೂ ಯಾರೂ ಹೇಳಿಕೊಡಬೇಕಾಗಿರಲಿಲ್ಲ.

ವೈದೇಹಿ ಜೊತೆ ನನ್ನ ಪ್ರಶ್ನೆ ಇಷ್ಟೇ: ಪ್ರತಿಭಾನ್ನ ಕೊಲೆ ಮಾಡಿದ ಡ್ರೈವರ್ ಏನು ಇದಾನೆ, ಅವನು ನಾವೂ ಆಗಿರಬಹುದಲ್ಲವಾ? ಇದೇನೂ ನನ್ನ ಪ್ರಶ್ನೆ ಅಲ್ಲ. ವೈದೇಹಿ ಕೇಳುವ ಪ್ರಶ್ನೆ ಕೂಡಾ ಇದೇ. ಆದರೆ, ನಮ್ಮ ನಿಯಂತ್ರಣ ತಪ್ಪಿಸುವವರನ್ನೆಲ್ಲಾ ಬಿಟ್ಟು, ಗ್ಲೋಬಲೈಸೇಶನ್ನಿನ ಪ್ರಶ್ನೆ ಬಿಟ್ಟು, ಲೈಂಗಿಕತೆಯ ಪ್ರಶ್ನೆ ಬಿಟ್ಟು, ನಮ್ಮನ್ನ ಬಿಟ್ಟು, ಪ್ರತಿಭಾಳ ಕಾರ್ ಡ್ರೈವರನ್ನ ನೋಡಲಿಕ್ಕೆ ಸಾಧ್ಯವಾ ಅಂತ. ನನಗಂತೂ ಗೊತ್ತಿಲ್ಲ. ನಿಜವಾಗಲೂ ಗೊತ್ತಿಲ್ಲ. ತಪ್ಪಿಸಿಕೊಳ್ಳುವುದಕ್ಕೆ ಅಂತ ಕೇಳುತ್ತಾ ಇರುವ ಪ್ರಶ್ನೆ ಅಲ್ಲ ಇದು.

---

*ಕರ್ನಾಟಕ ಸಾಹಿತ್ಯ ಅಕಾಡೆಮಿ, ಮೂಡಬಿದರೆಯ ಆಳ್ವಾಸ್ ಕಾಲೇಜ್ ಸಹಯೋಗದಲ್ಲಿ ೨೦೦೬ ಫೆಬ್ರವರಿಯಲ್ಲಿ ನಡೆಸಿದ ಮಹಿಳಾ ಸಾಹಿತ್ಯ ಅಧ್ಯಯನ ಶಿಬಿರದಲ್ಲಿ ಮಾಡಿದ ಭಾಷಣದ ಧ್ವನಿಮುದ್ರಿತ ಪಾಠ. ಇದಕ್ಕೂ ಮೊದಲು ವೈದೇಹಿಯವರ ಭಾಷಣವಿತ್ತು.*

# ಶಬ್ದ ಮತ್ತು ಜಗತ್ತು

ಬಿ.ಕೆ. ಮತಿಲಾಲ್
ಕನ್ನಡಕ್ಕೆ: ಎಂ.ಎ. ಹೆಗಡೆ

ಅಧ್ಯಾಯ ೬

## ಭಾಷಿಕ ಉಚ್ಚಾರಣೆಯಿಂದ ಜ್ಞಾನ (ಶಾಬ್ದಜ್ಞಾನ)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

### ೫. ಶಬ್ದಗಳಿಂದ ಮಿಥ್ಯಾಜ್ಞಾನದ ಸಂವಹನ ಸಾಧ್ಯತೆ

ನಾವು ಈವರೆಗೆ ಸ್ಥಾಪಿಸಿದ್ದೆಂದರೆ ಈ ನಿಲುಮೆಯ ಪ್ರಕಾರ ವಕ್ತೃವು 'ಸಾಕ್ರೇಟಿಸನು ಬುದ್ಧಿವಂತ' ಎಂದು ಹೇಳಿದಾಗ ಸಮರ್ಥನಾದ ಶ್ರೋತೃವಿನಲ್ಲಿ ಹುಟ್ಟುವ ಜ್ಞಾನವು ಕೂಡ 'ಸಾಕ್ರೇಟಿಸನು ಬುದ್ಧಿವಂತ' ಎಂದು ವ್ಯಕ್ತಪಡಿಸುವಂಥದೇ ಆಗಿರುತ್ತದೆ. ಹಾಗಿದ್ದರೂ ಅಂಥ ಜ್ಞಾನದ ರಾಚನಿಕ ವರ್ಣನೆಯು ಅಲ್ಲಿರುವ ವಿವಿಧ ಅಂಶಗಳ ಪರಸ್ಪರ ಸಂಬಂಧವನ್ನು ಗ್ರಹಿಸಿದ್ದು ಹೇಗೆಂಬುದನ್ನು (ಕೃತಕಭಾಷೆಯಲ್ಲಿ) ತೋರಿಸಿ ಕೊಡುತ್ತದೆ. ಅದನ್ನು ಇನ್ನಷ್ಟು ಎಚ್ಚರದಿಂದ ರೂಪಿಸಿದರೆ, ವಕ್ತೃವಿನ ಜ್ಞಾನದ ವಸ್ತುವಾದ 'ಸಾಕ್ರೇಟಿಸ್' ಎಂಬುದಕ್ಕೆ ಬುದ್ಧಿವಂತಿಕೆಯು ವಿಶೇಷಣವಾಗಿದ್ದರೂ ಶ್ರೋತೃವಿನ ಜ್ಞಾನದಲ್ಲಿ ಬುದ್ಧಿವಂತಿಕೆಯೆಂಬ ವಿಶೇಷಣದಿಂದ ಕೂಡಿದ್ದು ಸಾಕ್ರೇಟಿಸನೊಂದಿಗೆ ಅಭಿನ್ನವಾಗುತ್ತದೆ. ಹಾಗಿದ್ದರೂ ಅದು ಅತ್ಯಂತ ನಿಯಂತ್ರಿತ ವಾಗಿರುತ್ತದೆ. ಮಿಥ್ಯಾಜ್ಞಾನದಲ್ಲಿ ವಿಶೇಷಣ ಹಾಗೂ ವಿಶೇಷ್ಯಗಳೆರಡೂ ಇವೆಯಾದರೂ ನಾವು ವಿಶೇಷಣವೆಂದು ಗ್ರಹಿಸಿದ ಅಂಶವು ವಾಸ್ತವದಲ್ಲಿ (ಜಗತ್ತಿನಲ್ಲಿ) ಆ ವಿಶೇಷ್ಯಕ್ಕೆ ವಿಶೇಷಣವಾಗಿರುವುದಿಲ್ಲ. (ಆದ್ದರಿಂದಲೇ ಅದು ಮಿಥ್ಯಾಜ್ಞಾನವೆನಿಸುತ್ತದೆ.) ಆದ್ದರಿಂದ ನಾವು ಜ್ಞಾನದ ರಾಚನಿಕ ವರ್ಣನೆಯ ಸಾಮಾನ್ಯ ಸ್ವರೂಪವನ್ನು ಕೃತಕ ಭಾಷೆಯಲ್ಲಿ ಹೀಗೆ ಹೇಳಬಹುದು:

> ಕ೧ ಎಂಬ ಜ್ಞಾನವು ಸಾಕ್ರೇಟಿಸನಿಷ್ಠವಾದ ವಿಶೇಷ್ಯತೆಯನ್ನು ಹೊಂದಿದ್ದು ಅದು ಬುದ್ಧಿವಂತಿಕೆಯಲ್ಲಿರುವ ವಿಶೇಷಣತೆಯಿಂದ ನಿಯಂತ್ರಿತವಾಗಿದೆ.

ಇದರಿಂದ ನಾವು ಗಳಿಸಿದ್ದೇನು? ನಿರ್ದಿಷ್ಟವಾದ ವಿಶೇಷ್ಯತೆ ಮತ್ತು ವಿಶೇಷಣತೆಗಳು ಕ೧ ಜ್ಞಾನದ ಗುಣಲಕ್ಷಣಗಳಾಗಿದ್ದು ಅವು ಸಹಸಂಬಂಧವನ್ನು ಹೊಂದಿವೆ ಮತ್ತು ಒಂದರಿಂದೊಂದು ನಿರ್ಬಂಧಿತವಾಗಿವೆಯೆಂಬ ಸಾಮಾನ್ಯವನ್ನು ಅರಿಯುತ್ತೇವೆಯೆಂಬುದು ನನ್ನ ನಂಬುಗೆ. 'ಸಾಕ್ರೇಟಿಸನು ಬುದ್ಧಿವಂತ' ಎಂದು ವ್ಯಕ್ತಗೊಳಿಸಬಹುದಾದ ಅರಿವು ಅಥವಾ ನಂಬುಗೆ ಹುಟ್ಟುವವರೆಗೆ ಈ ವರ್ಣನೆಯಿರುತ್ತದೆ. ಆ ನಂಬುಗೆಯ ಸತ್ಯಾಸತ್ಯತೆಗಳು ಇಲ್ಲಿ ವಿಷಯವಲ್ಲ. ಸಾಕ್ರೇಟಿಸನು ನಿಜವಾಗಿಯೂ ಬುದ್ಧಿವಂತಿಕೆಯೆಂಬ ವಿಶೇಷಣವನ್ನು ಹೊಂದಿರಬೇಕೆಂಬುದನ್ನು ಈ ವರ್ಣನೆಯು ಅಪೇಕ್ಷಿಸುವುದಿಲ್ಲ.

ಇದು ನ್ಯಾಯಸಿದ್ಧಾಂತದ ಮಹತ್ತ್ವದ ಭಾಗವೆಂದು ತೋರುತ್ತದೆ. ಅನ್ಯೋನ್ಯಾವಲಂಬಿಗಳಾದ ವಿಶಿಷ್ಟವಾದ ಗುಣ-ಲಕ್ಷಣಗಳಿಂದ ಮಿಥ್ಯಾಜ್ಞಾನಗಳನ್ನು ಗುರುತಿಸಬಹುದು. ಪ್ರಸ್ತುತ ವಿಶೇಷಣತೆಯಿಂದ ನಿರ್ಧರಿಸಲ್ಪಟ್ಟ ವಿಶೇಷ್ಯತೆಗಳೇ ಆ ಗುಣಲಕ್ಷಣಗಳು. ನ್ಯಾಯಸಿದ್ಧಾಂತವು ನಾವು ಹೇಳುವ ಪ್ರಮೇಯ (ಪ್ರೊಪೋಸಿಷನ್ ಅಥವಾ ಫ್ರೀಜಿಯನ್ ವಿಚಾರ) ಗಳನ್ನು ಒಪ್ಪುವುದಿಲ್ಲವಾಗಿ, ಮೇಲೆ ಹೇಳಿದ ಗುಣಲಕ್ಷಣಗಳನ್ನು ಪ್ರಮೇಯಗಳಿಗೆ ಅದರಲ್ಲೂ ಮಿಥ್ಯಾಪ್ರಮೇಯಗಳಿಗೆ ಬದಲಿಯಾಗಿ ಸ್ವೀಕರಿಸ ಬಹುದು. ಈ ಸಿದ್ಧಾಂತವು ಮೂಲತತ್ತ್ವಶಾಸ್ತ್ರದ ಹೊರೆಯನ್ನು ಹಗುರವಾಗಿಸಿದೆಯೆಂಬುದನ್ನು ಗಮನಿಸಿ. ಹುಟ್ಟುವ ಜ್ಞಾನವು ಸತ್ಯವಾಗಿರಲಿ ಅಥವಾ ಮಿಥ್ಯೆಯಾಗಿರಲಿ ಈ ಗುಣ-ಲಕ್ಷಣಗಳು ಜ್ಞಾನದ ಅವಿಭಾಜ್ಯ ಅಂಗಗಳಾಗಿರುತ್ತವೆ. ಅವುಗಳನ್ನು ಇಚ್ಛಾಕಲ್ಪಿತವೆನ್ನುವಂತಿಲ್ಲ. ಹುಟ್ಟಿದ ಜ್ಞಾನವು ಮರೆಯಾದಾಗ ಅವೂ ಮಾಯವಾಗುತ್ತವೆ. ಯಾಕೆಂದರೆ ಜಗತ್ತು ಮತ್ತು ಜಗತ್ತಿನ ಬಗೆಗೆ ನಮ್ಮಲ್ಲಿರಬಹುದಾದ ಜಗತ್ತಿನ ಕಲ್ಪನೆಗಳ ನಡುವೆ ಏನೂ ಇರುವುದಿಲ್ಲ. ಮಿಥ್ಯಾಜ್ಞಾನ ಅಥವಾ ಮಿಥ್ಯಾವಿಶ್ವಾಸಗಳನ್ನು ಯಥಾರ್ಥಜ್ಞಾನದಿಂದ ಬೇರ್ಪಡಿಸುವ ಲಕ್ಷಣಗಳು ಬೇರೆಯೇ ಇವೆ. ಮಿಥ್ಯಾಜ್ಞಾನವು ಹುಟ್ಟಿಕೊಳ್ಳುವುದಕ್ಕೆ ನಿಮಿತ್ತಪರಂಪರೆಯಲ್ಲಿರುವ ಯಾವುದೋ ದೋಷವು ಕಾರಣವಾಗಿರುತ್ತದೆ. ಮಿಥ್ಯಾಜ್ಞಾನದಲ್ಲಿರುವ ವಿಶಿಷ್ಟವಾದ ಧರ್ಮವು ನಿಜವಾಗಿ ಸಂಬಂಧವಿಲ್ಲದ ಅನೇಕ (ಕನಿಷ್ಠ ಎರಡು) ಸಂಗತಿಗಳ ನಡುವೆ ಸಂಬಂಧವು ಗೋಚರಿಸುವಂತೆ ಮಾಡುತ್ತದೆ. ಮೇಲೆ ಹೇಳಿದ ದೋಷದ ಕಾರಣದಿಂದ ಅವುಗಳಲ್ಲಿ ಸಂಬಂಧವಿಲ್ಲದಿರುವುದನ್ನು ಗುರುತಿಸಲಿಕ್ಕಾಗುವುದಿಲ್ಲ.

'ಅರ್ಥದ ರಾಚನಿಕ ವರ್ಣನೆ'ಯೆಂಬ ಮಾತಿನ ತಾತ್ಪರ್ಯವೇನು? ನ್ಯಾಯವು ಪ್ರಮೇಯಗಳ ಬಗೆಗೆ ಹೇಳುವುದಿಲ್ಲವಾದ್ದರಿಂದ 'ಜ್ಞಾನದ ಮೂಲಕ ಗ್ರಹಿಸಿದವುಗಳ ರಾಚನಿಕ ವರ್ಣನೆ'ಯೆಂದು ನ್ಯಾಯದ ಪರಿಭಾಷೆಯನ್ನು ಸಮರ್ಪಕವಾಗಿ



ವಿವರಿಸಬಹುದು. ಉದಾಹರಣೆಗೆ– ನಮ್ಮ ನೆರೆಯಲ್ಲಿರುವ ಬೋಳುತಲೆಯ ಮನುಷ್ಯನಿಗೆ 'ಸಾಕ್ರೇಟಿಸ್' ಎಂಬ ಹೆಸರಿದೆ ಮತ್ತು ಅವನು ಬುದ್ಧಿವಂತನಲ್ಲವೆಂದು ನಮಗೆ ತಿಳಿದಿದೆ. ಅನುಕೂಲಕ್ಕಾಗಿ ಅವನನ್ನು ಸಾಕ್ರೇಟಿಸ್-೧ ಎಂದು ಕರೆಯೋಣ. ಹಾಗಿರುವಾಗ ನಮ್ಮ ನೆರೆಗೆ ಹೊಸದಾಗಿ ಬಂದವನು 'ಸಾಕ್ರೇಟಿಸ್-೧ ಬುದ್ಧಿವಂತ' ಎಂಬ ಮಿಥ್ಯಾಜ್ಞಾನವನ್ನು ಹೊಂದಬಹುದು. ಸಾಕ್ರೇಟಿಸ್-೧ ನಲ್ಲಿ ಬುದ್ಧಿವಂತಿಕೆಯೆಂಬ ವಿಶೇಷಣವಿಲ್ಲವಾದರೂ ಅದರ ರಾಚನಿಕ ವರ್ಣನೆಯನ್ನು ಹಿಂದಿನಂತೆಯೇ ಗ್ರಹಿಸಲಾಗುತ್ತದೆ. ನಾವು ಈ ಜ್ಞಾನವನ್ನು 'ಬುದ್ಧಿವಂತ ಸಾಕ್ರೇಟಿಸ್' ನ ಜ್ಞಾನವೆಂದು ಗುರುತಿಸಲಾರೆವು. (ವಾಸ್ತವ ಪ್ರಪಂಚದಲ್ಲಿ ಈ ವಿಶೇಷಣವನ್ನು ಹೊಂದಿದ ವಸ್ತುವಿಲ್ಲವಾದ್ದರಿಂದ ಅದು ಯಥಾರ್ಥಜ್ಞಾನವಾಗಲು ಸಾಧ್ಯವಿಲ್ಲ.) ಮಿಥ್ಯಾಜ್ಞಾನದಲ್ಲಿಯೂ ಸಾಕ್ರೇಟಿಸ್-೧ ವಿಶೇಷ್ಯ ಹಾಗೂ ಬುದ್ಧಿವಂತಿಕೆಯು ವಿಶೇಷಣವಾಗಿದೆ. ಮಿಥ್ಯಾಜ್ಞಾನವು ಗ್ರಹಿಸುವ ಅಂಶಗಳೂ ಕೂಡ ವಾಸ್ತವ ಜಗತ್ತಿಗೆ ಸೇರಿದವುಗಳೇ ಆಗಿವೆ. ಅಂದರೆ ಸಾಕ್ರೇಟಿಸ್-೧ ಎಂಬ ವ್ಯಕ್ತಿ ಇದ್ದುದು ನಿಜ; ಬುದ್ಧಿವಂತಿಕೆಯೆಂಬುದೂ ಇದೆ. (ಅಥವಾ ಬುದ್ಧಿವಂತಿಕೆಯೆಂಬುದನ್ನು ಮೂಲತತ್ತ್ವಶಾಸ್ತ್ರಕ್ಕೆ ಸೇರಿದ ಪ್ರತ್ಯೇಕವಾದ ದ್ರವ್ಯವೆಂದೊಪ್ಪಿಕೊಳ್ಳದಿದ್ದರೂ ಬುದ್ಧಿವಂತರಾದ ವ್ಯಕ್ತಿಗಳಿದ್ದಾರೆ. ಉದಾ: ಮಹಾತ್ಮಾ ಗಾಂಧಿ, ಮೇಡಂ ಕ್ಯೂರಿ ಇತ್ಯಾದಿ). ಈ (ಮಿಥ್ಯಾ)ಜ್ಞಾನವು ನಿಜವಾಗಿ ಅಸ್ತಿತ್ವದಲ್ಲಿರುವ ವಸ್ತುಗಳನ್ನು ತಪ್ಪಾಗಿ ಜೋಡಿಸುತ್ತದೆ. ಅಥವಾ ತಿಳಿಯುವ ವ್ಯಕ್ತಿಯು ಅವುಗಳಲ್ಲಿ ಪರಸ್ಪರ ಸಂಬಂಧವಿಲ್ಲವೆಂಬುದನ್ನು ಗುರುತಿಸುವಲ್ಲಿ ಅಸಮರ್ಥನಾಗುತ್ತಾನೆ ಹಾಗೂ ಅವುಗಳಲ್ಲಿ ಸಂಬಂಧವಿದೆಯೆಂದು ತಿಳಿಯುತ್ತಾನೆ.

ಇದು ಮಿಥ್ಯಾಜ್ಞಾನವನ್ನು ಗ್ರಹಿಸುವ ಬಗೆಯನ್ನು ಸಂಕೀರ್ಣವಾದ ರೀತಿಯಲ್ಲಿ ವಿವರಿಸುತ್ತದೆಯೆಂಬುದು ಸ್ಪಷ್ಟ. ನಾನು ಈಗಾಗಲೇ ವಿಶದಪಡಿಸಿರುವಂತೆ ನ್ಯಾಯಸಿದ್ಧಾಂತದ ವಾಸ್ತವವಾದವು ಪ್ರಮೇಯ ಅಥವಾ ಫ್ರೀಜಿಯನ್ ವಿಚಾರಗಳನ್ನು ಒಪ್ಪುವುದಿಲ್ಲ. ಆದ್ದರಿಂದ ಇದು ತನಗೆ ತಾನೇ ಹೇರಿಕೊಂಡ ಮಿತಿಯ ಪರಿಣಾಮವಾಗಿ ಹುಟ್ಟಿಕೊಂಡ ಸಮಸ್ಯೆ. 'ಸಾಕ್ರೇಟಿಸನು ಬುದ್ಧಿವಂತ' ಎಂಬ ವಿಚಾರ (ಫ್ರೀಜ್‌ನ ಪ್ರಕಾರ) ಅಥವಾ ಸಾಮಾನ್ಯವಾಗಿ ಹೇಳುವಂತೆ ಪ್ರಮೇಯವನ್ನು ತಿಳಿದಾಗ ಅಥವಾ ನಂಬಿದಾಗ ನಾವು ಗ್ರಹಿಸಿದ್ದೇನೆಂಬುದನ್ನು ನ್ಯಾಯದರ್ಶನವು ಹೇಳುವುದಿಲ್ಲ. ಆದ್ದರಿಂದ 'ಸಾಕ್ರೇಟಿಸನು ಬುದ್ಧಿವಂತ' ನೆಂಬ ಮಿಥ್ಯಾಜ್ಞಾನದ ಸಂದರ್ಭದಲ್ಲಿಯೂ ಗ್ರಹಿಸಿದ್ದೇನೆಂಬ ಬಗೆಗೆ ಹೇಳುವುದಿಲ್ಲ. ಆದ್ದರಿಂದ ಮಿಥ್ಯಾಜ್ಞಾನದ ಸಂದರ್ಭದಲ್ಲಿ ನಾವು ಏನನ್ನು ಗ್ರಹಿಸಿದ್ದೇವೆಂಬುದನ್ನು ವಿವರಿಸುವಾಗ ಅದು ಸಂಬಂಧವಿಲ್ಲದಿರುವುದು ಅಥವಾ ಸಂಬಂಧವಿಲ್ಲದಿರುವುದು ಪ್ರಕಟಗೊಳ್ಳದಿರುವುದು ಅಥವಾ ತಪ್ಪಾಗಿ

ಸಂಬಂಧವನ್ನು ಕಲ್ಪಿಸುವುದು ಎಂಬ ಸಿದ್ಧಾಂತವನ್ನು ಆಶ್ರಯಿಸುತ್ತದೆ. ಫ್ರೀಜ್‌ನ ದೃಷ್ಟಿಯಲ್ಲಿ ವಿಚಾರಗಳು ದಿಟವಾದವುಗಳು. (ಅವು ಸತ್ತೆಯ ತೃತೀಯ ಆಯಾಮವನ್ನು ಆಶ್ರಯಿಸಿಕೊಂಡಿವೆಯೆಂಬುದು ಪೂರ್ವಾನುಮಾನ.) ಯಾಕೆಂದರೆ ಅವು ವ್ಯಕ್ತ್ಯಂತರಗಳಲ್ಲಿರುವ ಇತರ ವಸ್ತುಗಳ ಮಧ್ಯದಲ್ಲಿವೆ. ಅವು ಕೇವಲ ವ್ಯಕ್ತಿನಿಷ್ಠಗಳೂ ಅಲ್ಲ; ಪ್ರತ್ಯೇಕ ವ್ಯಕ್ತಿಗಳ ಖಾಸಗಿಯಾದ ಪ್ರತಿಮೆಗಳೂ ಅಲ್ಲ. ಆದರೆ ನ್ಯಾಯದರ್ಶನದ ಪ್ರಕಾರ ನಾವು ಗ್ರಹಿಸುವ ಬಾಹ್ಯಪ್ರಪಂಚ ಮತ್ತು ನಮ್ಮ ಗ್ರಹಿಕೆಗಳ ನಡುವೆ ಏನೂ ಇರುವುದಿಲ್ಲ. ಇಲ್ಲಿ ಗ್ರಹಿಕೆಗಳೆಂದರೆ ವಿಶಿಷ್ಟರಚನಾರೂಪವನ್ನು ಹೊಂದಿದ ಜ್ಞಾನಗಳೆಂದು ತಿಳಿಯಬೇಕು. ವಸ್ತು-ಸಂಕೀರ್ಣ (ಪ್ರಪಂಚದ ಒಂದು ಭಾಗ) ವನ್ನು ಗ್ರಹಿಸಿದಾಗ ಅದು ಜ್ಞಾನವೆನಿಸುತ್ತದೆ; ಅಥವಾ ಬೇರೆ ಬೇರೆ ಖಂಡ ಅಥವಾ ತುಣುಕುಗಳನ್ನು ಗ್ರಹಿಸಿ ತಪ್ಪಾಗಿ ಜೋಡಿಸಿದಾಗ ಅದು ಮಿಥ್ಯಾಜ್ಞಾನವೆನಿಸುತ್ತದೆ. ನ್ಯಾಯವು ಒಪ್ಪುವುದು ಇವುಗಳನ್ನು ಮಾತ್ರ. ಮೇಲ್ನೋಟಕ್ಕೆ ಗೋಚರಿಸುವಂತೆ ನ್ಯಾಯವು ಆಯ್ಕೆ ಮಾಡಿಕೊಂಡದ್ದು ಹಗ್ಗದ ಮೇಲಿನ ನಡಿಗೆಯನ್ನು. ಅದು ಫ್ರೀಜ್ ಹೇಳುವ ಪ್ರಮೇಯ ಅಥವಾ ವಿಚಾರದ ಕಲ್ಪನೆಯನ್ನು ಸ್ವೀಕರಿಸದಿರುವುದು ಇದಕ್ಕೆ ಕಾರಣ. ಆದರೆ ಒಂದು ವಿಷಯದಲ್ಲಿಯಾದರೂ ನ್ಯಾಯಸಿದ್ಧಾಂತದ ಒಳನೋಟವು ಫ್ರೀಜ್‌ನ ಒಳನೋಟದೊಂದಿಗೆ ಸಂವಾದಿಯಾಗಿರುವುದನ್ನು ಗುರುತಿಸಬಹುದು. ಫ್ರೀಜ್ ತನ್ನ ಕೃತಿ Grundgesetze (ನೋಡಿ: ಪೀಠಿಕೆ, ಸಂಪುಟ ೧, ಡುಮ್ಮೆಟ್ ೧೯೮೧) ನಲ್ಲಿ ಹೇಳುತ್ತಾನೆ:

*ನಾವು ವ್ಯಕ್ತಿವಾದ (ಸಬ್ಜೆಕ್ಟಿವಿಸಮ್) ದಿಂದ ಮೇಲೇಳಬೇಕೆಂದಿದ್ದರೆ ಜ್ಞಾನವು ತಾನು ತಿಳಿದುದನ್ನು ಸೃಜಿಸುವ ಕ್ರಿಯೆಯೆಂದು ಕಲ್ಪಿಸುವ ಬದಲು ಈಗಾಗಲೇ ಅಸ್ತಿತ್ವದಲ್ಲಿರುವುದನ್ನು ಗ್ರಹಿಸುವ ಕ್ರಿಯೆಯೆಂದು ಕಲ್ಪಿಸಬೇಕು.*

ವಿಚಾರಗಳು ಸರಿಯಾದವುಗಳಾಗಲಿ ತಪ್ಪಾದವುಗಳಾಗಲಿ ಅವನ್ನು ನಾವು ಗ್ರಹಿಸುತ್ತೇವೆ; ಅವುಗಳನ್ನು ಸೃಷ್ಟಿಸುವುದಿಲ್ಲ ಎಂಬುದು ಫ್ರೀಜ್‌ನ ಅಭಿಪ್ರಾಯ. ನ್ಯಾಯದರ್ಶನದ ಪ್ರಕಾರ ನಾವು ಪ್ರಪಂಚದ ಖಂಡ ಮತ್ತು ತುಣುಕುಗಳನ್ನು ಗ್ರಹಿಸುತ್ತೇವೆ; ಅವುಗಳನ್ನು ಸೃಜಿಸುವುದಿಲ್ಲ. ಮಿಥ್ಯಾಜ್ಞಾನವು ಲೋಕದ ಸಂಗತಿಗಳನ್ನು ಗ್ರಹಿಸಿ ಅವುಗಳನ್ನು ತಪ್ಪಾಗಿ ಜೋಡಿಸುತ್ತದೆ. ಮನಸ್ಸಿಗೆ ಅತೀತವಾದ ನಿಜವಾದ ವಿಚಾರವನ್ನು ನ್ಯಾಯದ ಮೂಲತತ್ತ್ವಶಾಸ್ತ್ರವು ಒಪ್ಪುವುದಿಲ್ಲ. ನಾವು ಈಗ ಎರಡು ಸಂಗತಿಗಳ ಬಗೆಗೆ ನ್ಯಾಯದ ವಿವರಣೆಯನ್ನು ಗಮನಿಸಬಹುದು:

೧. ವಕ್ತೃವಿನ ಮಾತುಗಳನ್ನು ಶ್ರೋತೃವು ಆರಂಭದಲ್ಲಿ ನಂಬದಿರುವಾಗ ಹುಟ್ಟುವ ಅರಿವು; ೨. ಮಾತುಗಳನ್ನು ಕೇಳಿದಾಗ ಹುಟ್ಟುವ ಸಂಶಯಪ್ರಧಾನವಾದ



ಅರಿವು. ಮೊದಲನೆಯ ಸಂದರ್ಭದಲ್ಲಿ ಹುಟ್ಟುವ ಅರಿವಿನಲ್ಲಿ ಅಪನಂಬುಗೆಯೇ ಪ್ರಧಾನವಾದ ಅಂಶವೆನಿಸುತ್ತದೆ. ಎರಡನೆಯ ಸಂದರ್ಭದಲ್ಲಿ ಹುಟ್ಟುವ ಅರಿವಿನಲ್ಲಿ ಅನಿಶ್ಚಿತತೆಯೇ ಸಾರಭೂತವಾದ ಸತ್ಯವಾಗುತ್ತದೆ. ಈ ಎರಡೂ ಮನೋವೃತ್ತಿಗಳಲ್ಲಿ ತಾರ್ಕಿಕ ಸಾಂಗತ್ಯವಿರುವುದನ್ನು ಗಮನಿಸಬಹುದು. ಅವು ಸತ್ಯವನ್ನು ಅಥವಾ ಅರಿವಿನ ಜ್ಞಾನತ್ವವನ್ನು ದೂಷಿತವಾಗಿಸುತ್ತವೆ. ಇದು ಅರಿವು ದೋಷಪೂರ್ಣವಾಗುವಂತೆಸಗುತ್ತದೆ ಅಥವಾ ಅರಿವಿನಿಂದ ಗ್ರಹಿಸಿದ್ದನ್ನು ಮಲಿನಗೊಳಿಸುತ್ತದೆ.

### ೬. ತಿಳಿವಿನ ಸಮಸ್ಯೆ – ಇನ್ನಷ್ಟು ಆಳದಿಂದ

ಈ ರೀತಿಯಲ್ಲಿ ನೋಡುವಾಗ ಅನೇಕ ವಸ್ತುಗಳನ್ನು ಅವು ಇಂದು ವಾಸ್ತವವಾಗಿ ಇರುವಂತೆ ನಿರೂಪಿಸಲಾಗುವುದಿಲ್ಲ. ವಿಚಾರಗಳ ಸತ್ಯಾಸತ್ಯತೆಗಳ ಬಗೆಗೆ ತೀರ್ಮಾನಿಸದೆ ಅವುಗಳನ್ನು ಗ್ರಹಿಸುವುದು ಸಾಧ್ಯವೆಂದು ಫ್ರೀಜ್ ಹೇಳುತ್ತಾನೆ. ಇನ್ನೂ ಸ್ವಲ್ಪ ಮುಂದುವರಿದು ಹೇಳುವುದಾದರೆ ಹುಟ್ಟಾಸುಳ್ಳನ ಮಾತಿನ ಅರ್ಥವೂ ನಮಗಾಗುತ್ತದೆ. ಆದರೆ ಅದನ್ನು ನಂಬಲಿಕ್ಕೆ ಹೋಗುವುದಿಲ್ಲ. ಅಂದರೆ ತಪ್ಪು ಹೇಳಿಕೆಯ ತಾತ್ಪರ್ಯವನ್ನು ನಾವು ನಂಬದಿದ್ದರೂ ಅದರ ಅರ್ಥ ನಮಗೆ ತಿಳಿಯುತ್ತದೆ. ನಂಬುಗೆಗೆ ತಿಳಿವು ಪೂರ್ವಭಾವಿಯಾಗಿರುತ್ತದೆಂದು ಹೇಳುತ್ತೇವೆ. ಆದರೆ ನೈಯಾಯಿಕರಿಗೆ ಇದು ಸಮ್ಮತವಲ್ಲ. ಯಾವುದೇ ತೆರನಾದ ಬದ್ಧತೆಯಿಲ್ಲದ, ನಂಬುಗೆ-ಅಪನಂಬುಗೆಗಳಿಲ್ಲದ ಹೇಳಿಕೆಯ ಅರ್ಥವನ್ನು ಮಾತ್ರ ಗ್ರಹಿಸುವುದನ್ನು ಹೇಳುವುದಕ್ಕೆ ನ್ಯಾಯದ ಶಬ್ದಕೋಶದಲ್ಲಿ ಪದಗಳೇ ಇಲ್ಲ. ನ್ಯಾಯಶಾಸ್ತ್ರದ ಪ್ರಕಾರ ಮೂಲಭೂತವಾದ ಅಥವಾ ಸರಳವಾದ ಮನೋವೃತ್ತಿಯೆಂದರೆ ಸಂಶಯ ಅಥವಾ ನಿಶ್ಚಯ. ಮೊದಲನೆಯದರಲ್ಲಿ ಬದ್ಧತೆಗೆ ತಡೆಯುಂಟು; ಎರಡನೆಯದರಲ್ಲಿ ಅಂಥ ತಡೆಯಿಲ್ಲ. ನಂಬುಗೆಗಳಲ್ಲಿ ಎರಡು ವಿಧ: ಸತ್ಯ ಮತ್ತು ಮಿಥ್ಯೆ. ಅವುಗಳಲ್ಲಿ ಮೊದಲನೆಯದು ಜ್ಞಾನವೆನಿಸುತ್ತದೆ; ಎರಡನೆಯದು ದೋಷವೆನಿಸುತ್ತದೆ. ಮುಂದಿನ ಕ್ಷಣದಲ್ಲಿ ದೊರೆವ ಸಾಕ್ಷ್ಯವು ನಂಬುಗೆಯನ್ನು ಬಲಗೊಳಿಸಬಹುದು ಅಥವಾ ಜ್ಞಾನಾತ್ಮಕತೆಯನ್ನು ದುರ್ಬಲಗೊಳಿಸಬಹುದು; ನಾಶಪಡಿಸಬಹುದು; ಅಥವಾ ಸಂಶಯವನ್ನು ಹುಟ್ಟಿಸಬಹುದು. ಕೊನೆಯದರಲ್ಲಿ ನಿಶ್ಚಯದ ಬದಲು ಸಂಶಯವು ನೆಲೆಗೊಳ್ಳುತ್ತದೆ. ನ್ಯಾಯಶಾಸ್ತ್ರದ ಪ್ರಕಾರ ಶಾಬ್ದಜ್ಞಾನವು ಸಾಮಾನ್ಯವಾಗಿ ನಿಶ್ಚಯವನ್ನು ಹುಟ್ಟಿಸುತ್ತದೆ. ಸಾಧಾರಣವಾದ ಸಂದರ್ಭಗಳಲ್ಲೆಲ್ಲ ವಾಕ್ಯದ ಉಚ್ಚಾರಣೆಯು ನಂಬುಗೆಗಳನ್ನು ಅಂದರೆ ಜ್ಞಾನವೆಂದು ಕರೆಯಬಹುದಾದ ನಿಶ್ಚಯಗಳನ್ನು ಹುಟ್ಟಿಸುತ್ತದೆ. ಈ ನಿಶ್ಚಯಕ್ಕಿಂತ ಪೂರ್ವದಲ್ಲಿ ಬದ್ಧತೆಯಿಲ್ಲದ ಕೇವಲ

ತಿಳುವಳಿಕೆಯನ್ನು ಹೊಂದುವುದೆಂಬುದಿಲ್ಲ. ಇಂಥ ಮನೋಭಾವವು ಅನಂತರದಲ್ಲಿ ಅಂದರೆ ಹಿಂದಿನ ನಿಶ್ಚಯದ ಬಗೆಗೆ (ಯಾವುದೇ ಕಾರಣದಿಂದ) ಸಂಶಯವು ಮೂಡಿದಲ್ಲಿ ಹುಟ್ಟಬಹುದು.

ವಾಕ್ಯವು ಒದಗಿಸುತ್ತಿರುವ ಮಾಹಿತಿಯು ಸುಳ್ಳೆಂಬುದು ಕೇಳುಗನಿಗೆ ಮೊದಲೇ ಗೊತ್ತಿದೆಯೆಂದುಕೊಳ್ಳೋಣ. ಆಗ ಏನಾಗುತ್ತದೆ? ನ್ಯಾಯಸಿದ್ಧಾಂತದ ಪ್ರಕಾರ ಆಗ ಒಂದು ತೆರನಾದ ಸಂಕೀರ್ಣವಾದ ಮನೋವೃತ್ತಿ ಸಂಜನಿಸುತ್ತದೆ. ಅಲ್ಲಿ ಒಂದು ರೀತಿಯ ಜ್ಞಾನ ಹುಟ್ಟುತ್ತದೆ. (ಇದನ್ನು ಶಾಬ್ದಜ್ಞಾನವೆಂದು ಭ್ರಮಿಸಬೇಕಿಲ್ಲ.) ವಕ್ತೃವು ತಪ್ಪು ತಿಳುವಳಿಕೆಯಿಂದ (ಅದು ಅವನಿಗೆ ತಿಳಿದಿರಬಹುದು ಅಥವಾ ತಿಳಿದಿಲ್ಲದಿರ ಬಹುದು) ಮಾತುಗಳನ್ನಾಡುತ್ತಿದ್ದಾನೆ ಮತ್ತು ಅದರ ರಚನಾರೂಪವು ಈ ಕೆಳಗಿನಂತಿದೆ: ಅವನು ಹೇಳಿದ ವಾಕ್ಯವು 'ಸಾಕ್ರೇಟಿಸ್-೧ ಬುದ್ಧಿವಂತ' ಎಂದಿದೆ ಯೆನ್ನೋಣ. ಈ ವಾಕ್ಯದಲ್ಲಿ ವಿಶೇಷ್ಯತೆಯು ಸಾಕ್ರೇಟಿಸ್‌ನಿಷ್ಠವಾಗಿದ್ದರೆ ವಿಶೇಷಣತೆಯು ಬುದ್ಧಿನಿಷ್ಠವಾಗಿದೆ. ಇದನ್ನು 'ತಿಳುವಳಿಕೆ' ಯೆಂದು ಕರೆದರೆ ಇದು ಸಂಯೋಜಿತ ಕಲ್ಪನೆಯಾಗಿದೆ. ವಕ್ತೃವಿನಲ್ಲಿ ತಪ್ಪು ತಿಳುವಳಿಕೆಯಿದೆಯೆಂಬ ಜ್ಞಾನ ಮತ್ತು ಅದು ಮೇಲೆ ಹೇಳಿದ ರಚನಾರೂಪವನ್ನು ಹೊಂದಿದೆಯೆಂಬ ತಿಳಿವು.

ಈಗಾಗಲೇ ಹೇಳಿದ ಆಕಾಂಕ್ಷೆಯೇ ಮೊದಲಾದ ಮೂರು ನಿಬಂಧನೆಗಳಲ್ಲಿ ಯಾವುದೇ ಒಂದು ನಿಬಂಧನೆಗೆ ಬಾಧೆ ಬಂದರೂ ಇಂಥ ಸಂಕೀರ್ಣ ಮನೋವೃತ್ತಿ ಯುಂಟಾಗುವುದೆಂದು ನ್ಯಾಯದರ್ಶನದ ವಾದ. ಈ ಸಂದರ್ಭದಲ್ಲಿ ಬಾಧೆ ಬಂದಿರುವುದು 'ಯೋಗ್ಯತಾ' ಎಂಬುದಕ್ಕೆ. ಯಾಕೆಂದರೆ ಶ್ರೋತೃವಿಗೆ ತದ್ವಿರುದ್ಧ ಜ್ಞಾನವಿದೆ (ಅಂದರೆ, ಅಯೋಗ್ಯತಾ). ಶಾಬ್ದಜ್ಞಾನಕ್ಕೆ ತೊಡಕನ್ನುಂಟುಮಾಡುವ ಯೋಗ್ಯತಾ ನಿಬಂಧನೆಯು ಎರಡು ಪ್ರಕಾರದ್ದೆಂದು ಹೇಳುತ್ತಾರೆ: ಅ. ಪರಸ್ಪರ ಹೊಂದಾಣಿಕೆಯಿಲ್ಲದವುಗಳನ್ನು ಜೋಡಿಸಿದಾಗ ಅಂದರೆ, ಅಸಂಭಾವ್ಯವನ್ನು ಸಂಭಾವ್ಯವೆನ್ನುವಂತೆ ಪ್ರತಿಪಾದಿಸಿದಾಗ. ಉದಾ: 'ಬಂಜೆಯ ಮಗ'. ಆ. ಸಂಭಾವ್ಯವಾಗಿದ್ದರೂ ವಾಸ್ತವದಲ್ಲಿ ಹಾಗಿಲ್ಲದಿರುವಾಗ. ಉದಾ: 'ಪಕ್ಕದ ಕೋಣೆಯಲ್ಲಿ ಸರ್ಪವಿದೆ'. ಅಲ್ಲಿ ಅಂಥದೇನೂ ಇಲ್ಲವೆಂಬುದು ನಮಗೆ ಗೊತ್ತಿದೆ. ಈ ಎರಡನೆಯ ಉದಾಹರಣೆಯು ಅರ್ಥವತ್ತಾದ ವಾಕ್ಯಗಳ ಮಿಥ್ಯಾತ್ವವನ್ನು ವಿವರಿಸುತ್ತದೆ.

ಇಲ್ಲಿ ಸಮರ್ಥನೀಯವಾದ ಪ್ರಶ್ನೆಯೊಂದು ಹುಟ್ಟುತ್ತದೆ. ನ್ಯಾಯದರ್ಶನವು ತನಗೆ ಅರಿವಿಲ್ಲದೆ ಪ್ರಮೇಯಗಳನ್ನು ಒಪ್ಪಿಕೊಳ್ಳುತ್ತಿದೆಯೇ? ನಾವು ಪ್ರಮೇಯಾತ್ಮಕ ಸಂಗತಿಗಳ 'ಸಂಭಾವ್ಯ ಪ್ರಪಂಚ'ದ ಬಗೆಗಾದರೂ ಪ್ರಸ್ತಾಪಿಸಬಹುದೇ? ಬಹುಶಃ



ಸಾಧ್ಯವಿಲ್ಲ. ಯಾಕೆಂದರೆ ನ್ಯಾಯದರ್ಶನವು 'ಅಯೋಗ್ಯತೆ'ಯನ್ನು ಯೋಗ್ಯತೆಯ ಅಭಾವ ಮಾತ್ರವೆಂದು ಬಣ್ಣಿಸುತ್ತದೆ. ಅಲ್ಲಿ ವ್ಯಾಕರಣ ದೃಷ್ಟಿಯಿಂದ ಯೋಗ್ಯವಾದವು ಗಳನ್ನು ಪರಿಗಣಿಸುವಂತಿಲ್ಲ. 'ಅ-ವಾಸ್ತವ'ವಾದವುಗಳು ಅಸಂಭಾವ್ಯ ಹಾಗೂ ಅವಾಸ್ತವಗಳೆರಡನ್ನೂ ಒಳಗೊಳ್ಳುತ್ತವೆಂದು ಅಸ್ಪಷ್ಟವಾಗಿ ಹೇಳಲಾಗಿದೆ. ಅಸಂಭಾವ್ಯಗಳು ಶಾಬ್ದಜ್ಞಾನವನ್ನು ತಕ್ಷಣದಲ್ಲಿಯೇ ಪ್ರತಿಬಂಧಿಸುತ್ತವೆ. ಉದಾ: 'ಕೆಂಪಾಗಿದೆ ಮತ್ತು ಕೆಂಪಾಗಿಲ್ಲ.' ಆದರೆ 'ಸಂಭಾವ್ಯ'ಗಳು ಅಂದರೆ ಸಂಭಾವ್ಯ -ಅವಾಸ್ತವಗಳು ಅಥವಾ ಮಿಥ್ಯಾವಚನಗಳ ಬಗೆಗೆ ಹಾಗೆ ಹೇಳುವಂತಿಲ್ಲ. ಅದರ ಅಯೋಗ್ಯತೆಯ ಅರಿವಾಗುವವರೆಗೂ ಶ್ರೋತೃವಿನಲ್ಲಿ ಜ್ಞಾನವು ಹುಟ್ಟಿಕೊಂಡಿರುತ್ತದೆ. 'ಯೋಗ್ಯ' (ಸತ್ಯವಾಗುವ ಸಾಧ್ಯತೆಯುಳ್ಳದ್ದು) ಎಂಬ ಶಬ್ದವೇ ಇನ್ನೊಂದು ಸಾಧ್ಯತೆಯನ್ನೂ ತೆರೆದಿಡುತ್ತದೆ. ಅಲ್ಲಿ ನಮ್ಮಲ್ಲಿ ಶಾಬ್ದಜ್ಞಾನವುಂಟಾಗದಿದ್ದರೂ ಶಾಬ್ದಜ್ಞಾನವೆಂದು ಹೇಳಬಹುದಾದುದು ಹುಟ್ಟುತ್ತದೆ. ಆದರೆ ಕೆಲವೊಮ್ಮೆ ಅದು ಹುಸಿಗುಂಡಾಗಿರುತ್ತದೆ.

ಶಾಬ್ದಜ್ಞಾನವನ್ನು ಹೊಂದುವುದಕ್ಕೆ ವಕ್ತೃವಿನ ವಿಶ್ವಾಸಾರ್ಹತೆಯನ್ನು ದೃಢಪಡಿಸಿಕೊಳ್ಳುವುದು ಅತ್ಯವಶ್ಯವಾದ ನಿಮಿತ್ತವೆಂದು ಮೀಮಾಂಸಕರು ವಾದಿಸುತ್ತಾರೆ. ಮೇಲ್ನೋಟಕ್ಕೆ ಇದು ಪ್ರಾಚೀನ ನ್ಯಾಯವು ಪ್ರತಿಪಾದಿಸುವ 'ಆಪ್ತತೆ'ಯ ಕಲ್ಪನೆಗೆ ಸಂವಾದಿಯಾಗಿದೆ. ಅದೇ ರೀತಿಯಲ್ಲಿ ಅಂಧವಿಶ್ವಾಸ, ಶ್ರದ್ಧೆ, ಪ್ರಮಾಣಮೀಮಾಂಸೆಯಲ್ಲಿನ ವಿಶಿಷ್ಟ ಸ್ಥಾನ, ಬದ್ಧತೆ ಅಥವಾ ವಕ್ತೃವಿನ ಸಾಮರ್ಥ್ಯಗಳ ಕುರಿತಾದ ಆಧುನಿಕ ಚರ್ಚೆಯನ್ನು ಹೋಲುತ್ತದೆ. ಈ ಎಲ್ಲ ಕಲ್ಪಿತ ಮಾನದಂಡಗಳಲ್ಲಿ ಸುಳ್ಳುಗಾರನ ಮಾತುಗಳಿಂದ ಶಾಬ್ದಜ್ಞಾನವಿಲ್ಲ. ಆದರೆ ನ್ಯಾಯಸಿದ್ಧಾಂತವು ಅದನ್ನೊಪ್ಪುವುದಿಲ್ಲ. ವಕ್ತೃವು ಸುಳ್ಳುಗಾರನೆಂದು ತಿಳಿದಿದ್ದಾಗ ಅವನ ಬದ್ಧತೆ ಅಥವಾ ವಿಶ್ವಾಸಾರ್ಹತೆಯ ಬಗೆಗೆ ಸಂಶಯ ಮೂಡಬಹುದು. ಆದರೆ ಆವಶ್ಯಕವಾದ ನಿಮಿತ್ತಾಂಶಗಳೆಲ್ಲ (ಈ ಬಗ್ಗೆ ಹಿಂದೆಯೇ ಹೇಳಲಾಗಿದೆ) ಇರುವಾಗ ಅಂಥ ಮಾತಿನಿಂದಲೂ ಜ್ಞಾನವೆಂದು ಘೋಷಿಸುವಂಥದು ಹುಟ್ಟುತ್ತದೆ. ಆದರೆ ಅದರ ಜೊತೆಜೊತೆಗೆ ಅಥವಾ ಮರುಕ್ಷಣದಲ್ಲಿ ಅದರ ಜ್ಞಾನಾತ್ಮಕತೆಯ ಬಗೆಗೆ ಬಲವಾದ ಸಂದೇಹವು ಹುಟ್ಟಿಕೊಂಡು ಆ ನಂಬುಗೆಯು ಶಿಥಿಲವಾದೀತು. ('ಅಪ್ರಾಮಾಣ್ಯ-ಸಂಶಯಾಸ್ಕಂದಿತ'ವೆಂದು ನ್ಯಾಯವು ಇದನ್ನು ಗುರುತಿಸುತ್ತದೆ.) ವಸ್ತುಸ್ಥಿತಿಯೆಂದರೆ ಅದು ನಿಜವೋ ಸುಳ್ಳೋ ಎಂಬುದು ನಮಗೆ ತಿಳಿದಿರುವುದಿಲ್ಲ. ಮುಂದೆ ದೊರಕುವ ಸಾಕ್ಷ್ಯಾಧಾರಗಳನ್ನು ಅವಲಂಬಿಸಿ ಸಂಶಯವನ್ನೇನೋ ನಿವಾರಿಸಿಕೊಳ್ಳಬಹುದು. ಆದರೆ ಸಂಶಯವಿರುವಷ್ಟು ಕಾಲವೂ ಹಿಂದೆ ಹೇಳಿದ್ದರ ಬಗೆಗಿನ ನಂಬುಗೆಯು

ದೂಷಿತವಾಗಿರುತ್ತದೆ. ಇಲ್ಲಿ ಗಮನಿಸಬೇಕಾದುದೆಂದರೆ ಮೀಮಾಂಸಕರು ಮತ್ತು ಇತರರು ಹೇಳುವ ವಕ್ತೃವಿನ ವಿಶ್ವಾಸಾರ್ಹತೆ, ಅಥವಾ ಯೋಗ್ಯತೆಯೇ ಮುಂತಾದ ವಕ್ತೃಕೇಂದ್ರಿತ ಸಂಗತಿಗಳು ಜ್ಞಾನಕ್ಕೆ ನಿಮಿತ್ತವೆನಿಸಲು ಅವಶ್ಯವಿಲ್ಲವೆಂಬುದು ನ್ಯಾಯ ಸಿದ್ಧಾಂತದ ನಿಲುಮೆ. ಅವರ ಪ್ರಕಾರ ಗಿಣಿಯ ಮಾತುಗಳಿಂದ ಅಥವಾ ಕಲ್ಲಿನ ಮೇಲೆ ನೀರಿನ ಹೊಡೆತದಿಂದಾಗುವ ಆಕಸ್ಮಿಕ ವಾಕ್ಯಗಳಿಂದಲೂ ಕೂಡ ಜ್ಞಾನವು ದೊರಕಬಹುದು.

ಇಲ್ಲಿ ಕೊನೆಯ ಸಂದರ್ಭವು ನ್ಯಾಯಸಿದ್ಧಾಂತಕ್ಕೊಂದು ಸಮಸ್ಯೆ. ಶ್ರೋತೃವಿನ ಜ್ಞಾನವೆಂದರೆ ವಾಕ್ಯವನ್ನುಚ್ಚರಿಸಿದ ವಕ್ತೃವಿನ ಜ್ಞಾನದ ವರ್ಗಾವಣೆಯೆಂಬುದು ಇಲ್ಲಿನ ಸಿದ್ಧಾಂತ. ವ್ಯಕ್ತಿರಹಿತವಾದ ಉಚ್ಚಾರಣೆ ಅಥವಾ ಉಚ್ಚಾರಣಾಕರ್ತೃವಿಲ್ಲದ ವಾಕ್ಯಗಳ ಪ್ರಸ್ತುತಿಯಲ್ಲಿ ವಕ್ತೃವೇ ಇಲ್ಲದಿರುವುದರಿಂದ ಜ್ಞಾನದ ವರ್ಗಾವಣೆಯಾಗಲು ಸಾಧ್ಯವಿಲ್ಲ. ಆದರೆ ಇಂಥ ವಾಕ್ಯವು ಸುಸಂಬದ್ಧವಾಗಿದ್ದು ಆಕಸ್ಮಿಕವಾಗಿ ಆಕಾಂಕ್ಷಾ, ಯೋಗ್ಯತಾ ಮತ್ತು ಸನ್ನಿಧಿಗಳೆಂಬ ಮೂರು ನಿಬಂಧನೆಗಳನ್ನು ಪೂರೈಸಿದ್ದರೆ ಶ್ರೋತೃವಿಗೆ ಜ್ಞಾನಪ್ರಾಪ್ತಿಯಾಗಲೇಬೇಕು. ನ್ಯಾಯದರ್ಶನದ ಪ್ರಕಾರ ಇದನ್ನು ವಿವರಿಸುವುದು ಹೇಗೆ ? ಗಂಗೇಶನ ಕೃತಿಯ ಮೇಲೆ ವ್ಯಾಖ್ಯಾನವನ್ನು ಬರೆದ ಮಥುರಾನಾಥ ಇದರಿಂದ ಪಾರಾಗುವ ದಾರಿಯೊಂದನ್ನು ಸೂಚಿಸಿದ್ದಾನೆ. ಗಿಣಿಯ ಮಾತುಗಳ ಸಮಸ್ಯೆಗೆ ಸುಲಭವಾದ ಪರಿಹಾರವಿದೆ. ಯಾಕೆಂದರೆ ಗಿಣಿಗೆ ಆ ಮಾತುಗಳನ್ನು ಕಲಿಸಿದಾತನ ಜ್ಞಾನವೇ ಅಲ್ಲಿರುತ್ತದೆಯೆನ್ನಬಹುದು. ಗಿಣಿಯು ಸ್ವೇಚ್ಛೆಯಿಂದ ಮಾತುಗಳನ್ನು ಉಚ್ಚರಿಸುವಾಗ ಆಕಸ್ಮಿಕವಾಗಿ ಕೆಲವು ವಾಕ್ಯಗಳು ಹುಟ್ಟಿಕೊಂಡಿದ್ದಿರಬಹುದು. ಇಂಥ ವಾಕ್ಯಗಳು ಆಕಾಂಕ್ಷೆಯೇ ಮುಂತಾದ ಆವಶ್ಯಕ ನಿಬಂಧನೆಗಳನ್ನು ಪೂರೈಸಿದ್ದರೆ ಮತ್ತು ಅವು ಅಸ್ಪಷ್ಟವಾಗಿರದಿದ್ದರೆ ಅವು ದೇವರ ಮಾತುಗಳಿಗೆ ಸಂವಾದಿಯಾಗುತ್ತವೆ. ಈ ತೆರನಾದ ವ್ಯಾಖ್ಯಾನವು ಸಿದ್ಧಾಂತದ ಮೂಲಸ್ವರೂಪವನ್ನು ಉಳಿಸುವುದೆಂದು ಮಥುರಾನಾಥನ ಹೇಳಿಕೆ. ಯಾಕೆಂದರೆ ವಾಕ್ಯ ಅಥವಾ ಉಚ್ಚಾರಣೆಯು ನಿಜವಾದ ಜ್ಞಾನ ಅಥವಾ ಪ್ರಮೆಯನ್ನು ಉಂಟುಮಾಡುತ್ತದೆಯಾದರೆ ಅದು ಸರ್ವಜ್ಞಶಕ್ತಿಯ ಜ್ಞಾನಭಂಡಾರದ ಭಾಗವೇ ಆಗಿರಬೇಕು.

## ೭. ಶಾಬ್ದಜ್ಞಾನವು ಅನುಮಾನವೋ? ಪ್ರತ್ಯಕ್ಷವೊ ?

ನೈಯಾಯಿಕರು ಶಾಬ್ದಜ್ಞಾನವು ಪ್ರತ್ಯಕ್ಷ ಮತ್ತು ಅನುಮಾನಗಳಿಗಿಂತ ಭಿನ್ನವಾದು ದೆಂದೂ ಅದಕ್ಕೆ ವಿಶೇಷವಾದ ಸ್ಥಾನವು ಅವಶ್ಯವೆಂದೂ ಹೇಳುತ್ತಾರೆ. ಆದರೆ (ವೇದ-ಭಿನ್ನವಾದ) ಶಾಬ್ದಜ್ಞಾನಕ್ಕೆ ವಿಶೇಷವಾದ ಸ್ಥಾನವನ್ನು ಕೊಡುವುದಕ್ಕೆ ವೈಶೇಷಿಕರು,



ಪ್ರಾಚೀನ ಮೀಮಾಂಸಕರು ಮತ್ತು ಪ್ರಾಭಾಕರರು (ಗಂಗೇಶನು ಇಲ್ಲಿ ಬೌದ್ಧ ಮತವನ್ನು ಚರ್ಚಿಸಿಲ್ಲ) ಮುಂತಾದ ಇತರ ದಾರ್ಶನಿಕರು ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ವೈಶೇಷಿಕರು (ವೇದಭಿನ್ನವಾದ) ಶಾಬ್ದಜ್ಞಾನವಿದೆಯೆಂಬುದನ್ನು ಒಪ್ಪಿದರೂ ಅದನ್ನು ಅನುಮಾನದಲ್ಲಿ ಅಂತರ್ಗತಗೊಳಿಸಬಹುದೆನ್ನುತ್ತಾರೆ. ಉದಯನನು (ಕ್ರಿ.ಶ. ೧೦೫೦) ವೈಶೇಷಿಕರನ್ನು ಬೆಂಬಲಿಸಿ ಶಾಬ್ದಜ್ಞಾನವು ಅನುಮಾನವೇ ಆಗುತ್ತದೆಂದು ವಾದಿಸಿದ್ದಾನೆ. ‘ಅಬ’ ಎಂಬ ಉಚ್ಚಾರಣೆಯನ್ನು ಕೇಳಿದಾಗ ನಾವು ‘ಅ’ ಮತ್ತು ‘ಬ’ ಗಳು ಸಂಬಂಧಿಸಿವೆಯೆಂಬುದನ್ನು ಅನುಮಾನಿಸು ತ್ತೇವೆ. ಅವುಗಳಲ್ಲಿರುವ ಸಾಮೀಪ್ಯ, ರಾಚನಿಕ ಅನ್ವಯ ಮತ್ತು ಅರ್ಥದ ಹೊಂದಾಣಿಕೆಗಳು ಈ ಅನುಮಾನಕ್ಕೆ ಆಧಾರ ಗಳಾಗುತ್ತವೆ. ಬೇರೆ ರೀತಿಯಲ್ಲಿ ಹೇಳುವುದಾದರೆ ಅವು ಆಕಾಂಕ್ಷಾ, ಯೋಗ್ಯತಾ ಮತ್ತು ಸನ್ನಧಿಗಳೆಂಬ ಮೂರು ಆವಶ್ಯಕ ನಿಬಂಧನೆಗಳನ್ನು ಪೂರೈಸಿರುತ್ತವೆ.

ನ್ಯಾಯಸಿದ್ಧಾಂತದ ನಿಲುಮೆಯನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಗಂಗೇಶನು (ನೋಡಿ: ೧೮೯೨-೧೯೦೧ ಆವೃತ್ತಿ, ಪು. ೭೮) ಹೀಗೆ ಉತ್ತರಿಸುತ್ತಾನೆ: (ಅನುಮಾನಕ್ಕೆ ಆಧಾರವೆನಿಸುವ) ಶಬ್ದಗಳು ತಿಳಿದಿರಬೇಕೆಂಬುದಷ್ಟೇ ಅಲ್ಲ, ಆಕಾಂಕ್ಷಾ, ಯೋಗ್ಯತಾ, ಮತ್ತು ಸನ್ನಿಧಿಗಳೆಂಬ ತ್ರಿವಿಧ ನಿಬಂಧನೆಗಳನ್ನು ಲಕ್ಷಣವಾಗಿಯೂ ಹೊಂದಿದ್ದರೆ ಮಾತ್ರ ಅನುಮಾನಕ್ಕೆ ಅವಶ್ಯವಾದ ಸಾಕ್ಷ್ಯ ಅಥವಾ ಲಿಂಗವೆನಿಸುತ್ತವೆ. ಆದರೆ ಕೆಲವೊಮ್ಮೆ ಯೋಗ್ಯತಾ ಧರ್ಮವನ್ನು ತಿಳಿಯುವುದು ಅಸಾಧ್ಯವಾಗುತ್ತವೆ. ಯಾಕೆಂದರೆ ಇಂಥ ಧರ್ಮವನ್ನು ತಿಳಿಯಲು ವ್ಯತಿರೇಕ ದೃಷ್ಟಾಂತಗಳೇನೂ ಇಲ್ಲವೆಂಬುದನ್ನು ಅರಿಯ ಬೇಕಾಗುತ್ತದೆ (ಅಂದರೆ, ಅಯೋಗ್ಯತೆ). ಆದರೆ ಅದನ್ನು ನಿಶ್ಚಿತವಾಗಿ ಹೇಳಲಾಗು ವುದಿಲ್ಲ. ಗಂಗೇಶನ ಪ್ರಕಾರ ಈ ಅಭಾವದ ಬಗೆಗಿನ ಈ ಅನಿಶ್ಚಿತ ಮನೋವೃತ್ತಿಯು ಶಾಬ್ದಜ್ಞಾನವು ಮೂಡುವುದಕ್ಕೆ ಸಾಕು. ಉದಾ: ಬೆಕ್ಕು ಚಾಪೆಯ ಮೇಲೆ ಇದೆ ಅಥವಾ ಇಲ್ಲವೆಂಬುದು ನಮಗೆ ಖಚಿತವಾಗಿ ಗೊತ್ತಿಲ್ಲದಿದ್ದರೂ ಆ ಬಗ್ಗೆ ಹೇಳಿದ ಮಾತಿನ ಅರ್ಥವಾಗುತ್ತದೆ. ಆದರೆ ಆವಶ್ಯಕ ಪ್ರಮಾಣ ಅಥವಾ ಲಿಂಗದ ಬಗೆಗೆ ನಿಶ್ಚಯ ವಿಲ್ಲದಿದ್ದರೆ ಅನುಮಿತಿಯು ಹುಟ್ಟಲಾರದು.

ಜಗದೀಶನು ಇನ್ನೊಂದು ರೀತಿಯಲ್ಲಿ ವಾದಿಸುತ್ತಾನೆ: ಶಾಬ್ದಜ್ಞಾನ ಅಥವಾ ವಾಕ್ಯವನ್ನು ಉಚ್ಚರಿಸಿದಾಗ ಶ್ರೋತೃವಿನಲ್ಲಿ ಹುಟ್ಟುವ ಜ್ಞಾನವು ಯಾವಾಗಲೂ ನಿಶ್ಚಿತ ಸ್ವರೂಪದ್ದಾಗಿರುತ್ತದೆ (ನಿಯಂತ್ರಿತಾರ್ಥ). ಈ ನಿಶ್ಚಿತಸ್ವರೂಪವು ನಿಮಿತ್ತಮೂಲ ವಾದುದು. ಉಚ್ಚರಿಸಲ್ಪಟ್ಟ ವಾಕ್ಯವು ಅದರ ಕರ್ಮ ಸಂಕೀರ್ಣವನ್ನು ನಿಯಂತ್ರಿಸುತ್ತದೆ. ಪ್ರತ್ಯಕ್ಷ ಜ್ಞಾನದಲ್ಲಿ ಇಂಥ ವಿಶಿಷ್ಟ ನಿಯಂತ್ರಣವಿರುವುದಿಲ್ಲ. ಉದಾ: ‘ಒಂದು ಬೆಕ್ಕು

ಚಾಪೆಯ ಮೇಲೆ ಕುಳಿತಿದೆ.' ಇಲ್ಲಿ ಪ್ರತ್ಯಕ್ಷದ ಕರ್ಮ-ಸಂಕೀರ್ಣವು ಒಂದು ವಿಧವಾದ ತಾಟಸ್ಥ್ಯ ಸ್ವರೂಪದ್ದು. ಅದು ಕೇವಲ ಬೆಕ್ಕು, ಚಾಪೆ ಮತ್ತು ಸಂಬಂಧಗಳ ಬಗೆಗೆ ಪ್ರಾತ್ಯಕ್ಷಿಕ ಅರಿವನ್ನುಂಟುಮಾಡುತ್ತದೆ. ಅದರಿಂದ ಹುಟ್ಟುವ ಪ್ರತ್ಯಕ್ಷ ಜ್ಞಾನವು ಎರಡು ರೂಪಗಳನ್ನು ತಾಳಬಹುದು. 'ಬೆಕ್ಕು ಚಾಪೆಯ ಮೇಲೆ ಇದೆ' ಅಥವಾ 'ಚಾಪೆಯು ಬೆಕ್ಕಿನ ಕೆಳಗಿದೆ'. ಈ ಪ್ರತ್ಯಕ್ಷ ಜ್ಞಾನವನ್ನು ಪ್ರಕಟಿಸುವ ಶಾಬ್ದಿಕ ಅಭಿವ್ಯಕ್ತಿಗಳು ಭಿನ್ನಭಿನ್ನ ರಚನೆಗಳನ್ನು ಪ್ರಕಟಿಸಬಹುದು. 'ಬೆಕ್ಕು ಚಾಪೆಯ ಮೇಲೆ ಇದೆ' ಎಂಬ ವಾಕ್ಯವು ಒಂದು ನಿಶ್ಚಿತವಾದ ರಚನೆಯುಳ್ಳ ಜ್ಞಾನವನ್ನು ಕೇಳುಗನಲ್ಲಿ ಹುಟ್ಟಿಸಬಹುದು. ಇಲ್ಲಿ ಬೆಕ್ಕು ವಿಶೇಷ್ಯ; ಚಾಪೆಯ ಮೇಲೆ ಕುಳಿತಿರುವುದು ವಿಶೇಷಣ. ಆದರೆ 'ಚಾಪೆಯು ಬೆಕ್ಕಿನ ಕೆಳಗೆ ಇದೆ' ಎಂಬ ಅಭಿವ್ಯಕ್ತಿಯು ಬೇರೆ ತೆರನಾದ ರಚನಾರೂಪವುಳ್ಳ ಜ್ಞಾನವನ್ನು ಕೇಳುಗನಲ್ಲಿ ಹುಟ್ಟಿಸುತ್ತದೆ.

ನಿರ್ದಿಷ್ಟವಾದ ವಾಕ್ಯವನ್ನು ಉಚ್ಚರಿಸುವುದರಿಂದ ನಿಶ್ಚಿತವಾದ ರಚನಾ ರೂಪವುಳ್ಳ ಜ್ಞಾನವು ಹುಟ್ಟುತ್ತದೆಯೆಂಬ ಧರ್ಮವೇ ಭಾಷಾಜನ್ಯವಾದ ಜ್ಞಾನವನ್ನು ಅನುಮಾನದಿಂದಲೂ ಬೇರ್ಪಡಿಸುತ್ತದೆ. ಅನುಮಾನದಲ್ಲಿ ಅನುಮಿತಿಯುಂಟಾಗು ವುದಕ್ಕೆ ಕಾರಣವಾದುದು ಪರಾಮರ್ಶ. ಪರಾಮರ್ಶವೆಂದರೆ ಸಾಧ್ಯ ಮತ್ತು ಹೇತು ಅಥವಾ ಲಿಂಗಗಳಲ್ಲಿ ವ್ಯಾಪ್ತಿಯಿದೆಯೆಂಬ ತಿಳುವಳಿಕೆ. ಈ ರೀತಿಯಲ್ಲಿ ಪರಾಮರ್ಶವು ಎರಡು ರೂಪವನ್ನು ತಾಳಬಹುದು:

*'ಪರ್ವತವು ಅಗ್ನಿಯಿಂದ ವ್ಯಾಪ್ತವಾದ ಧೂಮವನ್ನು ಹೊಂದಿದೆ'*

ಅಥವಾ

*'ಅಗ್ನಿಯಿಂದ ವ್ಯಾಪ್ತವಾದ ಧೂಮವು ಪರ್ವತದ ಮೇಲೆ ಇದೆ'.*

ಈ ಪರಾಮರ್ಶದಿಂದ ಹುಟ್ಟುವ ಅನುಮಿತಿಗಳೂ ಎರಡು ವಿಧ:

*ಪರ್ವತದಲ್ಲಿ ಬೆಂಕಿಯಿದೆ*

ಅಥವಾ

*ಬೆಂಕಿಯು ಪರ್ವತದ ಮೇಲೆ ಇದೆ.*

ಇಲ್ಲಿ ಅನುಮಿತಿಯ ಶಾಬ್ದಿಕ ಅಭಿವ್ಯಕ್ತಿಗಳು ಒಂದನ್ನೊಂದು ಸೂಚಿಸುತ್ತವೆಯಾದರೂ ಜ್ಞಾನಗಳು ಬೇರೆಬೇರೆಯೆನಿಸುತ್ತವೆ. ಆದ್ದರಿಂದ ಅನುಮಿತಿ ಜ್ಞಾನದ ರಾಚನಿಕ ಸ್ವರೂಪವು ಅನುಮಾನಕ್ಕೆ ಆಧಾರಭೂತವಾದ ಸಾಕ್ಷ್ಯ ಅಥವಾ ಪರಾಮರ್ಶವೊಂದರ ಮೇಲೆಯೇ ನಿರ್ಧಾರಿತವಾಗಿಲ್ಲ ಎನ್ನಬೇಕಾಗುತ್ತದೆ. ಆದರೆ 'ಪರ್ವತದಲ್ಲಿ ಬೆಂಕಿಯಿದೆ' ಎಂಬ ವಾಕ್ಯವನ್ನು ಉಚ್ಚರಿಸಿದಾಗ ಅದರ ವಿಶಿಷ್ಟ ರಚನಾರೂಪದಿಂದ ನಿಶ್ಚಿತವಾದ ಜ್ಞಾನವು ಹುಟ್ಟುತ್ತದೆ. ಆದ್ದರಿಂದ ಶಾಬ್ದಬೋಧವು (=ಶ್ರೋತೃವಿನ



ಜ್ಞಾನ) ವಿಶಿಷ್ಟವಾದ ಗುಣಧರ್ಮಗಳನ್ನು ಹೊಂದಿದೆ. (ಅದು ರಚನಾರೂಪದಿಂದ ನಿಶ್ಚಿತವಾಗುತ್ತದೆ.) ಅಷ್ಟೇ ಅಲ್ಲ, ಅದು ಪ್ರತ್ಯಕ್ಷ ಮತ್ತು ಅನುಮಾನಗಳಿಂದ ಭಿನ್ನವಾಗಿದೆ. ಈ ಗುಣ-ಲಕ್ಷಣಗಳು ಅಷ್ಟೊಂದು ಮಹತ್ವದವುಗಳಲ್ಲವೆಂದು ನಮಗನಿಸಿದರೆ ಶಾಬ್ದಜ್ಞಾನ ಮತ್ತು ಪ್ರತ್ಯಕ್ಷ, ಅನುಮಾನಗಳಲ್ಲಿ ಭೇದವಿದೆ ಯೆಂಬುದನ್ನು ನಿರಾಕರಿಸಬಹುದು. ಆದರೆ ಜಗದೀಶನು ಈ ಅಂಶಕ್ಕೆ ಹೆಚ್ಚಿನ ಮಹತ್ತ್ವವನ್ನು ಕೊಟ್ಟು ರಚನಾರೂಪದ ವೈಶಿಷ್ಟ್ಯವನ್ನು ನಿರೂಪಿಸಿ, ಶಾಬ್ದಜ್ಞಾನದ ಪ್ರತ್ಯೇಕತೆಯನ್ನು ಪ್ರತಿಪಾದಿಸಿದ್ದಾನೆ.

## ೮. ತಿಳಿವಿನ ಎರಡು ಹಂತಗಳು

ವಕ್ತೃವಿನ ಗುಣಗಳಾದ ಯೋಗ್ಯತೆ, ವಿಶ್ವಾಸಾರ್ಹತೆ ಅಥವಾ ಅವಲಂಬನಾರ್ಹತೆ ಮುಂತಾದವುಗಳು ವಾಕ್ಯಜ್ಞಾನಕ್ಕೆ ನಿಮಿತ್ತಗಳೆಂಬುದನ್ನು ಅಲಕ್ಷಿಸುವುದು ಒಳನೋಟಕ್ಕೆ ವಿರುದ್ಧವಾದುದೆನಿಸುತ್ತದೆ. ಆದರೆ ಗಂಗೇಶನ ಅಭಿಪ್ರಾಯ ಬೇರೆ. ಅವನ ಪ್ರಕಾರ ಈ ಸಂಗತಿಗಳಿಗೆಲ್ಲ ಮನ್ನಣೆ ದೊರೆಯಬೇಕಾದುದು ಎರಡನೆಯ ಹಂತದಲ್ಲಿ. ಮೊದಲನೆಯ ಹಂತದಲ್ಲಿ ವಾಕ್ಯೋಚ್ಚಾರಣೆಯಿಂದ ಜ್ಞಾನ ಹುಟ್ಟುತ್ತದೆ. ಅದರ ಜ್ಞಾನತ್ವವನ್ನು ಸಾಬೀತುಪಡಿಸಲು ಬೇಕಾದ ಸಾಕ್ಷ್ಯಗಳನ್ನು ಇವು ಎರಡನೆಯ ಹಂತದಲ್ಲಿ ಒದಗಿಸುತ್ತವೆ. ನ್ಯಾಯಸಿದ್ಧಾಂತದ ಪ್ರಕಾರ ಹುಟ್ಟುವ ನಿಜವಾದ ವಿಶ್ವಾಸ ಅಥವಾ ಜ್ಞಾನ, ಮತ್ತು ಜ್ಞಾನವು ತನಗಿದೆಯೆಂಬ ಅರಿವು ಇವುಗಳಲ್ಲಿ ವ್ಯತ್ಯಾಸವಿದೆ. ಅವೆರಡೂ ಘಟನೆಗಳ ನಿಮಿತ್ತ ಪರಂಪರೆಗಳೂ ಬೇರೆಬೇರೆಯೇ ಇರುತ್ತವೆ. (ನೋಡಿ: ಮತಿಲಾಲ್, ೧೯೮೬ ಪು. ೧೬೪ - ೬).

ಗಂಗೇಶ ಇನ್ನೊಂದು ಸ್ವಾರಸ್ಯಕರ ಸಂದರ್ಭವನ್ನು ಪ್ರಸ್ತಾಪಿಸಿದ್ದಾನೆ. ಸುಳ್ಳುಗಾರನೊಬ್ಬ ಬೇರೆಯವರನ್ನು ವಂಚಿಸಲು ಹೇಳಿದ ಸುಳ್ಳು ಸತ್ಯವಾಯಿತು ಎಂದುಕೊಳ್ಳೋಣ. ಇಲ್ಲಿನ ಪ್ರಶ್ನೆ ಇದು – ಶ್ರೋತೃವಿನಲ್ಲಿ ನಿಜವಾದ ವಿಶ್ವಾಸ ಅಥವಾ ಜ್ಞಾನ ಹುಟ್ಟಿದೆ. ಇದನ್ನು ನಾವು ಜ್ಞಾನವೆಂದು ಕರೆಯಬೇಕೆ? ವಕ್ತೃವು ಸ್ವಭಾವತಃ ಸುಳ್ಳುಗಾರನೆಂಬ ಜ್ಞಾನವು ಶ್ರೋತೃವಿನಲ್ಲಿ ಇಲ್ಲದಿದ್ದರೆ, ಈ ವಾಕ್ಯದಿಂದ ಜ್ಞಾನವು ಹುಟ್ಟುತ್ತದೆಯೆಂಬುದು ಗಂಗೇಶನ ಅಭಿಪ್ರಾಯ.

ಇಲ್ಲಿ ಎರಡು ಸಮಸ್ಯೆಗಳಿವೆ. ಮೊದಲನೆಯದೆಂದರೆ, ಗಂಗೇಶನು ಕೊಟ್ಟ ಉದಾಹರಣೆಯು ಜ್ಞಾನವು ನಿಜವಾದ ನಂಬುಗೆಯೆಂಬ ಕಲ್ಪನೆಗೆ ಸಂಬಂಧಿಸಿದಂತೆ ಪಶ್ಚಿಮದಲ್ಲಿ ಗೆಟ್ಟಿಯರ್ ಮತ್ತು ಇತರರು ಕೊಟ್ಟ ಪ್ರಸಿದ್ಧವಾದ ಪ್ರತ್ಯುದಾಹರಣಗಳನ್ನು ನೆನಪಿಸುತ್ತದೆ. ಎರಡನೆಯದೆಂದರೆ, ವಕ್ತೃವು ಸ್ವಭಾವತಃ ಸುಳ್ಳುಗಾರನೆಂಬುದು

ಶ್ರೋತೃವಿಗೆ ತಿಳಿದಿದ್ದರೆ ಅವನಲ್ಲಿ ಸಂಶಯಪ್ರವೃತ್ತಿಯುಂಟಾಗುತ್ತಿತ್ತು ಅಥವಾ ಸಂಶಯದೂಷಿತವಾದ ನಂಬುಗೆಯು ಹುಟ್ಟುತ್ತಿತ್ತು. ಅದನ್ನು ಜ್ಞಾನವೆಂದು ಕರೆಯುವಂತಿರಲಿಲ್ಲ. ಗಂಗೇಶನು ಈ ಸಂದರ್ಭದಲ್ಲಿ ಮೊದಲನೆಯದರ ಬಗ್ಗೆ ಚರ್ಚಿಸಿಲ್ಲ. ಅವನು ಬೇರೆ ಸಂದರ್ಭಗಳಲ್ಲಿ ಹೇಳಿದ್ದರ ನೆರವಿನಿಂದ ಈ ಸಮಸ್ಯೆಗೆ ಉತ್ತರಿಸಲು ಪ್ರಯತ್ನಿಸುತ್ತೇನೆ. ಎರಡನೆಯದರ ಬಗ್ಗೆ ಗಂಗೇಶನು ದಿಟ್ಟವಾದ ಉತ್ತರವನ್ನು ನೀಡಿದ್ದಾನೆ. ಅದನ್ನು ಕೆಳಗೆ ನಿರೂಪಿಸಿದ್ದೇನೆ.

ಸತ್ಯವು ಹುಟ್ಟುವ ನಂಬುಗೆ ಅಥವಾ ಜ್ಞಾನದ ಧರ್ಮವೆಂದು ಪರಿಗಣಿಸುವುದಾದರೆ ಸತ್ಯ ಮತ್ತು ಜ್ಞಾನತ್ವಗಳಲ್ಲಿ ತೀವ್ರವಾದ ಭೇದವಿದೆಯೆಂಬುದನ್ನು ನ್ಯಾಯ ಸಿದ್ಧಾಂತವು ಒಪ್ಪುವುದಿಲ್ಲ. ಭಾರತೀಯ ಪರಂಪರೆಯಲ್ಲಿರುವ ಜ್ಞಾನದ ಪ್ರಾಚೀನ ಲಕ್ಷಣವನ್ನು ಗೆಟ್ಟಿಯರ್ ಕೊಡುವಂಥ ಪ್ರತ್ಯುದಾಹರಣಗಳಿಂದ ಹೊರತುಪಡಿಸುವುದಕ್ಕಾಗಿ ಗಂಗೇಶನನ್ನು ಅನುಸರಿಸುವ ನವ್ಯನ್ಯಾಯವು ನಿಜವಾದ ನಂಬುಗೆಯನ್ನು ಜ್ಞಾನ ಅಂದರೆ ಸರಳವಾದ ಜ್ಞಾನವೆಂದು ಸ್ವೀಕರಿಸುತ್ತದೆ. ಹಾಗೆ ಗಳಿಸಿದ ನಂಬುಗೆಯ ಜ್ಞಾನತ್ವವನ್ನು ದೃಢಪಡಿಸಿಕೊಳ್ಳುವುದು ಎರಡನೆಯ ಹಂತ. ಈ ಹಂತದಲ್ಲಿ ಸಮರ್ಥನೆಗಳು ಅವಶ್ಯವಾಗುತ್ತವೆ. ನ್ಯಾಯಸಿದ್ಧಾಂತದಂತೆ ಜ್ಞಾನ ಮತ್ತು ಜ್ಞಾನವಿದೆಯೆಂಬ ಜ್ಞಾನಗಳು ಎರಡು ಭಿನ್ನ ಘಟನೆಗಳು; ಅವು ಘಟಿಸುವುದಕ್ಕೆ ವಿಭಿನ್ನ ನಿಮಿತ್ತ ನಿಬಂಧನೆಗಳಿರುತ್ತವೆ. ಎರಡನೆಯ ಹಂತದ ಜ್ಞಾನ ಅಂದರೆ ಜ್ಞಾನದ ಜ್ಞಾನವು ಮೊದಲ ಹಂತದ ಸರಳವಾದ ಜ್ಞಾನವು ಹುಟ್ಟಿದ್ದರ ಬೆನ್ನಿನಲ್ಲಿಯೇ ಸೂಚ್ಯವಾದ ಅನುಮಾನದ ರೂಪದ್ದಾಗಿರುತ್ತದೆ. ಈ ಅನುಮಾನಕ್ಕೆ ಆಧಾರವಾದ ಸಾಕ್ಷ್ಯವು ಸಮರ್ಥನೆಯ ರೂಪವನ್ನು ತಳೆಯುತ್ತದೆ. ಹಾಗಾಗಿ ಹೆಚ್ಚಿನ 'ಗೆಟ್ಟಿಯರ್' ಸಂದರ್ಭಗಳಲ್ಲಿ ನಿಜವಾದ ನಂಬುಗೆಯು ತಪ್ಪುದಾರಿಯಿಂದ ಹುಟ್ಟಿಕೊಳ್ಳುತ್ತದೆ. ಅಂಥ ನಂಬುಗೆಗೆ ಸಮರ್ಥನೆಯಿದ್ದರೂ ಈ ಅಭಿಪ್ರಾಯದಂತೆ ಅದನ್ನು ಸರಳವಾದ ಜ್ಞಾನವೆಂದು ತಿಳಿಯಬೇಕಾಗುತ್ತದೆ. ಇದು ಸಾಮಾನ್ಯವಾಗಿ ಸ್ವೀಕೃತವಾದ ಪಾಶ್ಚಾತ್ಯ 'ಭಾಷಿಕ' ಒಳನೋಟಕ್ಕೆ ವಿರುದ್ಧವಾಗಿರುವಂತೆ ತೋರುತ್ತದೆ. ಯಾಕೆಂದರೆ ಅಲ್ಲಿ ಗೆಟ್ಟಿಯರ್ ಉದಾಹರಣೆಗಳನ್ನು ಪ್ರತ್ಯುದಾಹರಣಗಳೆಂದು ಅಂದರೆ ಜ್ಞಾನದ ಅಭಾವಕ್ಕೆ ಉದಾಹರಣಗಳೆಂದು ಗ್ರಹಿಸಲಾಗುತ್ತದೆ. ಅವು ನಿಜವಾದ ನಂಬುಗೆಗಳಾಗಿದ್ದರೂ ಸ್ವಲ್ಪಮಟ್ಟಿಗೆ ಸಮರ್ಥಿಸಬಹುದಾದವುಗಳಾಗಿದ್ದರೂ ಅವನ್ನು ಗಣನೆಗೆ ತಂದುಕೊಳ್ಳುವುದಿಲ್ಲ. ನವ್ಯನ್ಯಾಯದ ನಿರ್ದಿಷ್ಟ ಸಿದ್ಧಾಂತದಂತೆ ಶಾಬ್ದಜ್ಞಾನದ ಪ್ರಸಂಗದಲ್ಲಿ ಅವಶ್ಯವಾದ ನಿಮಿತ್ತಗಳೆಲ್ಲ ಸಹಕರಿಸಿದ್ದು ಪ್ರತಿಬಂಧಕವಾದ ಅಂಶಗಳಾವುವೂ ಇಲ್ಲದಿದ್ದರೆ ಶ್ರೋತೃವಿನಲ್ಲಿ ನಿಜವಾದ ನಂಬುಗೆ ಅಂದರೆ ಜ್ಞಾನವು



ಹುಟ್ಟುತ್ತದೆ. ಹಾಗಿದ್ದರೂ ಮರುಕ್ಷಣದಲ್ಲಿಯೇ ತನಗೆ ದೊರಕಿದ್ದು ಜ್ಞಾನವೋ ಅಲ್ಲವೋ ಎನ್ನುವುದನ್ನು ಅರಿಯಲು ತೊಡಗಿದಾಗಲೇ ಸಂಶಯವು ಪ್ರವೃತ್ತಿಯನ್ನು ದೂಷಿತಗೊಳಿಸಿ ಹಿಂದಿನ ಅನಿಶ್ಚಯತೆಯ ಅಭಾವವನ್ನು ನಾಶಪಡಿಸುತ್ತದೆ. ಅನಿಶ್ಚಯತೆಯ ಅಭಾವವು ಹಿಂದೆ ಹೇಳಿದ ನಿಜವಾದ ನಂಬುಗೆಯ ಸ್ವರೂಪ. (ಆದ್ದರಿಂದಲೇ ಅದನ್ನು 'ಪ್ರಮಾ' ಅಥವಾ ಜ್ಞಾನವೆಂದು ಘೋಷಿಸಲಾಗಿದೆ.) ನಮ್ಮೆಲ್ಲರಲ್ಲೂ ನಿಜವಾದ ನಂಬುಗೆ ಅಂದರೆ ಜ್ಞಾನವನ್ನು ಗಳಿಸುವ ಬಗೆಗೆ ಬಲವಾದ ಸ್ವಾಭಾವಿಕ ಪ್ರವೃತ್ತಿ (ಸಮುತ್ಕಟ ವಾಸನಾ) ಇರುವುದೆಂದು ಉದಯನನು ತನ್ನ ನ್ಯಾಯತಾತ್ಪರ್ಯ ಪರಿಶುದ್ಧಿಯಲ್ಲಿ ಹೇಳಿದ್ದಾನೆ. ಹಾಗಾಗಿ ನಮ್ಮ ಮೊದಲ ಪ್ರತಿಕ್ರಿಯೆಯು ಜ್ಞಾನಪ್ರಾಪ್ತಿಯ ಬಗೆಗೇ ಹೊರತು ಸುಳ್ಳಿನ ಶೋಧದ ಕಡೆಗಿರುವುದಿಲ್ಲ. (ಹೋಲಿಸಿ ನೋಡಿ: ಡೇವಿಡ್‌ಸನ್, ೧೯೭೫, ೧೬೬).

ಎರಡನೆಯ ಹಂತದಲ್ಲಿ ಗೆಟ್ಟಿಯರ್-ಸದೃಶವಾದ ಪ್ರತ್ಯುದಾಹರಣಗಳನ್ನು ಸುಲಭವಾಗಿ ಗುರುತಿಸಬಹುದು ಮತ್ತು ಹೊರತುಪಡಿಸಬಹುದೆಂಬುದನ್ನು ಗಮನಿಸಿ. ವಾಚಸ್ಪತಿಯನ್ನು ಅನುಸರಿಸಿ ಹೀಗೆ ಹೇಳಬಹುದು: ನಿಜವಾದ ನಂಬುಗೆ ಅಥವಾ ಜ್ಞಾನವು ಹುಟ್ಟಿದ ಎಲ್ಲ ಸಂದರ್ಭಗಳಲ್ಲಿಯೂ ಸಮರ್ಥನೆಯ ಅಗತ್ಯವಿರುವುದಿಲ್ಲ. ನಮಗೆ 'ಪರಿಚಿತ'ವಾದ ಬಹಳಷ್ಟು ಸಂದರ್ಭಗಳಲ್ಲಿ ಸಮರ್ಥನೆಯ ಬಗೆಗೆ ಅವ್ಯಕ್ತವಾಗಿ ಕೂಡ ಚಿಂತಿಸದೆ ಕ್ರಿಯೆ ತನ್ನಿಂದತಾನೆ ನಡೆದುಹೋಗುತ್ತದೆ. 'ಅಪರಿಚಿತ' ಸಂದರ್ಭಗಳಲ್ಲಿ ಅಥವಾ ಸಂಶಯವು ಹಣಿಕಿಹಾಕಿದ ಪ್ರಸಂಗಗಳಲ್ಲಿ ಜ್ಞಾನ ಅಥವಾ ನಿಜವಾದ ನಂಬುಗೆಯ ಜ್ಞಾನತ್ವವನ್ನು ಸ್ಥಾಪಿಸಲು ನಾವು ಎರಡು ವಿಧವಾದ ಅನುಮಾನಗಳನ್ನು ಬಳಸುತ್ತೇವೆ. ಅವುಗಳಲ್ಲಿ ಒಂದು 'ದೃಢೀಕರಣ ಪ್ರವೃತ್ತಿ'ಯನ್ನು ಸಾಕ್ಷ್ಯವಾಗಿ ಹೊಂದಿದ್ದರೆ, ಇನ್ನೊಂದು 'ಪರಿಚಿತವಾದುದರೊಂದಿಗೆ ಸಾದೃಶ್ಯ'ವನ್ನು ಹೊಂದಿರುವುದನ್ನು ಸಾಕ್ಷ್ಯವಾಗಿಸಿಕೊಂಡಿರುತ್ತದೆ. ಮತ್ತೊಂದು 'ಪರ್ಯಾಪ್ತ ನಿಮಿತ್ತಾಂಶಗಳ ಕಾರ್ಯಕಾರಿತ್ವದ ಭರವಸೆ'ಯನ್ನು ಸಾಕ್ಷ್ಯವಾಗಿ ಹೊಂದಿರಬಹುದು. ಹೇಗೇ ಇದ್ದರೂ ಅನುಮಾನವು ಸಮರ್ಪಕವಾಗಿದ್ದರೆ ಅದು ಜ್ಞಾನತ್ವವನ್ನು ಸ್ಥಾಪಿಸುವುದಲ್ಲದೆ ಅವಶ್ಯವಾದ ಸಮರ್ಥನೆಯನ್ನೂ ಒದಗಿಸುತ್ತದೆ. ಅಂದರೆ ವ್ಯಕ್ತಿಯು ಜ್ಞಾನವನ್ನು ಹೊಂದಿರುವುದು ಮಾತ್ರವಲ್ಲ, ಅದನ್ನು ನಿಶ್ಚಯಪಡಿಸಿಕೊಳ್ಳುವ ಹಕ್ಕನ್ನೂ ಹೊಂದಿರುತ್ತಾನೆ. ಈಗ ಅವನು ತನ್ನ ಅರಿವನ್ನು ಜ್ಞಾನದ ಸಂದರ್ಭವೆಂದು ಕರೆದುಕೊಳ್ಳಬಹುದು. ಇನ್ನು ಕೆಲವು (ಗೆಟ್ಟಿಯರ್-ಸದೃಶ) ಪ್ರತ್ಯುದಾಹರಣಗಳಲ್ಲಿ ಹುಟ್ಟುವ ನಂಬುಗೆಯು ಸತ್ಯವಾದುದಾಗಿದ್ದರೆ ಅದು ಜ್ಞಾನವೆನಿಸುತ್ತದೆ; ಅಸತ್ಯವಾದುದಾಗಿದ್ದರೆ ಜ್ಞಾನವೆನಿಸುವುದಿಲ್ಲ. ಈ ಎರಡೂ ಸಂದರ್ಭಗಳಲ್ಲಿಯೂ ಅದನ್ನು

ಜ್ಞಾನವೆಂದೇ ಜನರು ಕರೆಯುತ್ತಾರೆಂದು ಗಂಗೇಶನು ಹೇಳುತ್ತಾನೆ. ಈಗ ನಾವು ನಿರೂಪಿಸುತ್ತಿರುವ ಸಿದ್ಧಾಂತದ ಪ್ರಕಾರ 'ಇದು ಕ್ಷ' ಎಂದು ನಾವು ಮಾತಿನ ಮೂಲಕ ಹೇಳುವಾಗ 'ಇದು ಕ್ಷ' ಎಂಬ ಅರಿವು ನಮ್ಮಲ್ಲಿ ಪೂರ್ವಭಾವಿ ಯಾಗಿರುವುದು ಸಾಮಾನ್ಯ. 'ಇದು ಒಂಟೆ' ಎಂಬುದು ನನಗೆ ತಿಳಿದಿರದಿದ್ದರೆ 'ಇದು ಒಂಟೆ' ಎಂದು ಸರಿಯಾಗಿ ಹೇಳಲು ಸಾಧ್ಯವಿಲ್ಲ. ಒಂದುವೇಳೆ ಗಟ್ಟಿಯರ್-ಸದೃಶ ಸಂದರ್ಭಗಳಲ್ಲಿ ನಿರ್ದಿಷ್ಟವಾದ ನಂಬುಗೆಯ ಜ್ಞಾನತ್ವದ ವಿಷಯದಲ್ಲಿ ನನ್ನ ಅನುಮಾನವು ತಪ್ಪಾಗಿದ್ದರೆ (ಯಾಕೆಂದರೆ, ಸಾಕ್ಷ್ಯವು ಕೇವಲ ಭ್ರಮಾತ್ಮಕ ಸಾಕ್ಷ್ಯವಾಗಿದ್ದರೆ) ನನ್ನ ನಂಬುಗೆಯ ಸತ್ಯತೆಯನ್ನು ತಿಳಿಯುವಲ್ಲಿ ತಪ್ಪಿರುತ್ತೇನೆ. ಇದು ನ್ಯಾಯದ ಖ್ಯಾತಿವಾದಕ್ಕೆ ಅನುಗುಣವಾಗಿದೆ: ಜ್ಞಾನವೆಂದು ಹೇಳಿಕೊಂಡವುಗಳೆಲ್ಲವೂ ನಿಲ್ಲಲಾರವು.

## ೯. ವಕ್ತೃವಿನ ಗುಣಗಳ ಜ್ಞಾನ

ಇಲ್ಲಿ ಇನ್ನೊಂದು ವೈಶಿಷ್ಟ್ಯವನ್ನು ಗಮನಿಸಬಹುದು. ನ್ಯಾಯ ಮತ್ತು ಮೀಮಾಂಸ ಗಳೆರಡೂ ಶಬ್ದವು ಪ್ರತ್ಯಕ್ಷ ಮತ್ತು ಅನುಮಾನಗಳಿಂದ ಪ್ರತ್ಯೇಕವಾದ ಪ್ರಮಾಣ ವೆಂಬುದನ್ನು ಒಪ್ಪುತ್ತವೆ. ಆದರೆ ಮೀಮಾಂಸಕರು ಶಬ್ದಪ್ರಮಾಣವೆಂದು ಸ್ವೀಕರಿಸುವುದು ಕೇವಲ ವೈದಿಕ ವಾಕ್ಯಗಳನ್ನು. ಯಾಕೆಂದರೆ ಅವು ನಮಗೆ ಬೇರಾವ ಪ್ರಮಾಣದಿಂದಲೂ ತಿಳಿಯಲಾಗದ (ಉದಾ: ಸ್ವರ್ಗ, ಮರಣೋತ್ತರ ಜೀವನ, ನೈತಿಕ ಮೌಲ್ಯಗಳು ಇ.ಇ.) ಸಂಗತಿಗಳನ್ನು ತಿಳಿಸಿಕೊಡುತ್ತವೆ. ಹಾಗಾಗಿ ಅವು ನಮಗೆ ತಿಳಿಸುವ ಸಂಗತಿಗಳಲ್ಲಿ ಅಪೂರ್ವತೆಯಿದೆ; ನಾವು ತಿಳಿದುದನ್ನೇ ತಿಳಿಸುವುದಿಲ್ಲ. ಆದರೆ ಲೌಕಿಕ ವಾಕ್ಯಗಳು ಹಾಗಲ್ಲ. ಅವು ವೈದಿಕ ವಾಕ್ಯಗಳಂತೆ ಅಪೂರ್ವವಾದುದನ್ನು ತಿಳಿಸುವುದಿಲ್ಲ. ಯಾಕೆಂದರೆ ಅವು ವಕ್ತೃವಿನ ವಿಶ್ವಾಸಾರ್ಹತೆಯನ್ನು ಅಪೇಕ್ಷಿಸುತ್ತವೆ. ವಕ್ತೃವಿನ ವಿಶ್ವಾಸಾರ್ಹತೆಯ ಅರಿವು ಶ್ರೋತೃವಿಗೆ ಅವಶ್ಯವೆಂದಾದರೆ ಅದರಿಂದ ದೊರೆವ ಜ್ಞಾನದಲ್ಲಿ ಅಪೂರ್ವತೆಯಿರುವುದಿಲ್ಲ. ಉದಾ: ''ಅ' ವು 'ಬ' ಆಗಿದೆ'' ಎಂಬ ವಾಕ್ಯವು ನಂಬುಗೆಗೆ ಯೋಗ್ಯವಾದುದೆಂದು ಒಪ್ಪುವಾಗ 'ಅ' ವು 'ಬ' ಆಗಿದೆ ಎಂಬ ಜ್ಞಾನವು ಈಗಾಗಲೇ ಶ್ರೋತೃವಿನಲ್ಲಿ ಇರಬೇಕಾಗುತ್ತದೆ. ಹಾಗಿರುವುದರಿಂದ ಉಚ್ಚರಿತ ವಾಕ್ಯದಿಂದ ದೊರೆವ ಜ್ಞಾನದಲ್ಲಿ ಅಪೂರ್ವತೆಯಿರುವುದಿಲ್ಲ. ಅಂದರೆ ಅದು ವಕ್ತೃವಿನ ವಿಶ್ವಾಸಾರ್ಹತೆಯನ್ನು ಅರಿಯುವಾಗ ತಿಳಿದುದರ ಪುನರಾವರ್ತನೆ ಯಾಗುವುದೇ ಹೊರತು ಹೊಸದೇನನ್ನೂ ತಿಳಿಸುವುದಿಲ್ಲ.

ಈ ಕಾರಣದಿಂದಲೇ ವಕ್ತೃವಿನ ವಿಶ್ವಾಸಾರ್ಹತೆಯನ್ನು ಜ್ಞಾನದ ನಿಮಿತ್ತವೆಂದು ಪರಿಗಣಿಸಬಾರದೆಂಬುದು ಗಂಗೇಶನ ಅಭಿಪ್ರಾಯ. ಸಾಮಾನ್ಯವಾಕ್ಯದಲ್ಲಿಯೂ



ಅಪೂರ್ವತೆಯಿರುತ್ತದೆ; ಅದೂ ಕೂಡ ಹೊಸ ಸಂಗತಿಯನ್ನು ತಿಳಿಸಬಲ್ಲುದು. ಅಲ್ಲದೆ (ನಿಬಂಧನೆಗಳೆಲ್ಲ ಪೂರೈಸಿದ್ದರೆ) ಅದು ಒದಗಿಸುವ ಮಾಹಿತಿಯಿಂದ ವಕ್ತೃವಿನ ವಿಶ್ವಾಸಾರ್ಹತೆಯ ತೀರ್ಮಾನವಾಗುವವರೆಗೆ ಕಾಯಬೇಕಾದ ಆವಶ್ಯಕತೆಯಿಲ್ಲದೆ ಶ್ರೋತೃವಿನಲ್ಲಿ ಜ್ಞಾನವು ಹುಟ್ಟುತ್ತದೆ. ಅಲ್ಲದೆ, ಶ್ರೋತೃವು ತನಗೆ ದೊರೆತ ಜ್ಞಾನವನ್ನು ಪರೀಕ್ಷಿಸಿದ ಹೊರತು ವಕ್ತೃವಿನ ವಿಶ್ವಾಸಾರ್ಹತೆಯನ್ನು ತಿಳಿಯುವುದು ಸಾಧ್ಯವಿಲ್ಲ. ಶಾಬ್ದಜ್ಞಾನವು ಹುಟ್ಟುವುದಕ್ಕೆ ವಕ್ತೃವಿನ ವಿಶ್ವಾಸಾರ್ಹತೆಯ ಬಗೆಗೆ ಸಂಶಯ ವಿಲ್ಲದಿದ್ದರೆ ಸಾಕು.

ಈಗ ನಾವು ಎರಡನೆಯ ಸಮಸ್ಯೆಯನ್ನು ಕೈಗೆತ್ತಿಕೊಳ್ಳಬಹುದು. ವಕ್ತೃವು ಸುಳ್ಳುಗಾರ (ಅಥವಾ ಸ್ವಭಾವತಃ ಹಾಸ್ಯಪ್ರಿಯ) ಎಂಬುದು ನಮಗೆ ಗೊತ್ತಿದೆ. ಅವನ ಮಾತುಗಳನ್ನು ಕೇಳಿದಾಗಲೂ ಜ್ಞಾನವೆಂದು ಹೇಳಿಕೊಳ್ಳಬಹುದಾದುದು ಹುಟ್ಟುತ್ತದೆಯೆಂದಾದರೆ ಅದನ್ನು ಸಮರ್ಥಿಸುವುದು ಹೇಗೆ? ಇಂಥ ಮಾತುಗಳನ್ನು ಕೇಳಿದಾಗ ಶ್ರೋತೃವಿನಲ್ಲಿ ಹುಟ್ಟಬಹುದಾದ ಮಿಥ್ಯಾಜ್ಞಾನದ ಸಾಧ್ಯತೆಯನ್ನು ನಿವಾರಿಸಲು ವಕ್ತೃವಿನ ವಿಶ್ವಾಸಾರ್ಹತೆ ಅಥವಾ ಪ್ರಾಮಾಣಿಕತೆಯನ್ನು ತಿಳಿದಿರುವುದು ಜ್ಞಾನಕ್ಕೆ ಅವಶ್ಯವಾದ ನಿಮಿತ್ತವೆಂಬ ಮೀಮಾಂಸಕರ ವಾದವನ್ನು ಇದು ಸಮರ್ಥಿಸೀತು. ಇಲ್ಲವಾದರೆ ವಾಕ್ಯೋಚ್ಚಾರಣೆಯಾದೊಡನೆ ಅದರ ಸತ್ಯಾಸತ್ಯತೆಯ ಬಗೆಗೆ ಮೊದಲಿನಿಂದಲೂ ಸಂದೇಹವು ಸುಳಿಯುತ್ತಿರುತ್ತದೆ. ಗಂಗೇಶನು ಇದನ್ನು ಒಪ್ಪುವುದಿಲ್ಲ. ಅವನ ಪ್ರಕಾರ ವಕ್ತೃವಿನ ಗುಣಗಳಾದ ವಿಶ್ವಾಸಾರ್ಹತೆ, ಪ್ರಾಮಾಣಿಕತೆ ಅಥವಾ ಯೋಗ್ಯತೆ ಮುಂತಾದವುಗಳ ಆವಶ್ಯಕತೆಯಿರುವುದು ಘೋಷಿತ ಜ್ಞಾನದ ಜ್ಞಾನತ್ವವನ್ನು ನಿರ್ಧರಿಸುವ ಎರಡನೆಯ ಹಂತದಲ್ಲಿಯೇ ಹೊರತು ಮೊದಲನೆಯ ಕ್ಷಣದಲ್ಲಿ ಅಲ್ಲ.

ವಕ್ತೃವಿನ ಮಾತುಗಳ ಸತ್ಯಾಸತ್ಯತೆಯ ಬಗೆಗೋ ಘಟನೆಗಳ ವಾಸ್ತವತೆಯ ಬಗೆಗೋ ನಮ್ಮಲ್ಲಿ ಸಂಶಯಭಾವವಿದೆ ಎಂದುಕೊಳ್ಳೋಣ. ಹಾಗಿದ್ದರೂ ಅದು ಮೊದಲನೆಯ ಕ್ಷಣದಲ್ಲಿ ಹುಟ್ಟುವ ಜ್ಞಾನವೆಂದು ಘೋಷಿಸಿಕೊಳ್ಳಬಹುದಾದುದನ್ನು ತಡೆಯುವುದಿಲ್ಲ. ಬದಲಿಗೆ ವಿರೋಧಾಭಾಸಕರವಾಗಿ ಕಂಡರೂ ಅದು ಅಂಥ ಜ್ಞಾನವನ್ನು ಹುಟ್ಟಿಸುತ್ತದೆ. ಯಾಕೆಂದರೆ ಪ್ರತ್ಯಕ್ಷ ಮತ್ತು ಅನುಮಿತಿಗಳು ಕೂಡ ಇಂಥ ಸಂಶಯದ ಬಸಿರಿನಿಂದಲೇ ಜನ್ಮ ತಳೆಯುತ್ತವೆ. ಉದಾಹರಣೆಗೆ, ದೂರದಲ್ಲೊಬ್ಬ ಉದ್ದನೆಯ ಮನುಷ್ಯ ಬರುತ್ತಿದ್ದಾನೆ. ಅವನು ನನ್ನ ಸ್ನೇಹಿತನೋ ಅಲ್ಲವೋ ಎಂಬ ಸಂಶಯ. ಹತ್ತಿರ ಹೋಗಿ ನೋಡಿದಾಗ ಅವನು ಸ್ನೇಹಿತನೆಂಬ ಅರಿವು ಮೂಡುತ್ತದೆ. ಅದೇ ರೀತಿಯಲ್ಲಿ ಸಂಶಯವು ಹುಟ್ಟಿಕೊಂಡಾಗ ಅದನ್ನು ಪರಿಹರಿಸಿಕೊಳ್ಳಲು

ಪ್ರೇರಿತರಾಗುತ್ತೇವೆ. ಸರಿಯಾದ ಸಾಕ್ಷ್ಯವನ್ನು ಕಂಡುಕೊಂಡಾಗ ಒಂದಿಲ್ಲೊಂದು ರೀತಿಯಲ್ಲಿ ಅದನ್ನು ನಿವಾರಿಸಿಕೊಂಡು ಅನುಮಿತಿಯನ್ನು ಪಡೆಯುತ್ತೇವೆ. ನ್ಯಾಯ ಸಿದ್ಧಾಂತದಲ್ಲಿ ಕೆಲವೆಡೆ ಸಂಶಯವು ಅನುಮಿತಿಯು ಹುಟ್ಟುವುದಕ್ಕೆ ಅವಶ್ಯವಾದ ಮನೋಭಾವವೆಂದು ಹೇಳಿರುವುದೂ ಉಂಟು (ಸಂಶಯಪಕ್ಷತಾ). ಇದು ಶಾಬ್ದಜ್ಞಾನಕ್ಕೂ ಅನ್ವಯಿಸುತ್ತದೆ. (ಗಂಗೇಶ, ೧೮೯೭ - ೧೯೦೧ರ ಆವೃತ್ತಿ, ೧೫೪-೬).

ಇದಕ್ಕೆ ಪ್ರತಿವಾದಿಯು ಹೀಗೆ ವಾದಿಸಬಹುದು: ಒಳ್ಳೆಯದು. ಜ್ಞಾನವು ಹುಟ್ಟುವುದನ್ನು ಸಂಶಯವು ತಡೆಯಲಾರದೆಂಬುದೇನೋ ನಿಜ. ಆದರೆ ರಚಿತವಾದ ಅಥವಾ ಉಚ್ಚರಿತವಾದ ವಾಕ್ಯವು ತಾನು ಸೂಚಿಸುವ ವಾಸ್ತವ ಸ್ಥಿತಿಗೆ ಸಂವಾದಿ ಯಾಗಿರದಿದ್ದರೆ ಶಾಬ್ದಜ್ಞಾನದ ನಿಶ್ಚಿತತೆಗೆ ಭಂಗ ಬರುತ್ತದಲ್ಲವೇ? ಅದಕ್ಕೆ ಗಂಗೇಶನ ಉತ್ತರ ಹೀಗೆ: ವಾಕ್ಯೋಚ್ಚಾರಣೆಯಿಂದ ಜ್ಞಾನವೆಂದು ಹೇಳಬಹುದಾದುದು ಹುಟ್ಟಿಕೊಂಡ ನಂತರದಲ್ಲಿ ಅನಿಶ್ಚಯತೆಯು ತಲೆದೋರಬಹುದೇ ಹೊರತು ಅದಕ್ಕಿಂತ ಮೊದಲಲ್ಲ. ಅಂಥ ಅನಿಶ್ಚಯತೆಯು ಜ್ಞಾನವೆಂದು ಘೋಷಿಸಿಕೊಳ್ಳು ವಂಥದಕ್ಕೆ ಪೂರ್ವಭಾವಿಯಾಗಿರಬೇಕಾಗುತ್ತದೆ.

ವಕ್ತೃತಾತ್ಪರ್ಯದ ಕಲ್ಪನೆಯ ಬಗೆಗೆ ವ್ಯಾಖ್ಯಾನಿಸಿ ಮುಕ್ತಾಯ ಮಾಡುತ್ತೇನೆ. ವಾಕ್ಯಾರ್ಥದ ವಿಷಯದಲ್ಲಿ ಸಂದಿಗ್ಧತೆಯಿರುವಾಗ ವಕ್ತೃತಾತ್ಪರ್ಯಜ್ಞಾನವು ಶಾಬ್ದಜ್ಞಾನಕ್ಕೆ ಅವಶ್ಯವೆಂದು ನ್ಯಾಯವು ಒಪ್ಪುತ್ತದೆ. ಉದಾಹರಣೆಯನ್ನು ಗಮನಿಸಿ – 'ಸೈಂಧವವನ್ನು ತಾ' – ಇಲ್ಲಿ ಹುಟ್ಟುವ ಪ್ರಶ್ನೆ ಇದು: ವಕ್ತೃತಾತ್ಪರ್ಯ ಜ್ಞಾನವನ್ನು ಹೊಂದಿದ ಮೇಲೆ ಹುಟ್ಟುವ ಶಾಬ್ದಜ್ಞಾನವು ವ್ಯರ್ಥ ಅಥವಾ ಪುನರಾವೃತ್ತಿ ಯೆನಿಸುವುದಿಲ್ಲವೇ? ಯಾಕೆಂದರೆ ಪ್ರಾಭಾಕರರು ಹೀಗೆ ವಾದಿಸುತ್ತಾರೆ: ಲೌಕಿಕ ವಾಕ್ಯಗಳಿಂದ ಜ್ಞಾನವೊದಗುವಲ್ಲಿ ವಕ್ತೃತಾತ್ಪರ್ಯಜ್ಞಾನವು ಆವಶ್ಯಕ ನಿಮಿತ್ತ ವೆಂದಾದರೆ ಅಂಥ ಜ್ಞಾನವು ಕೇವಲ ಅನುವಾದವಾಗಿದ್ದು ವ್ಯರ್ಥವಾಗುತ್ತದೆ. ಉದಾ: ''ಅ' ವು 'ಬ' ಆಗಿರುತ್ತದೆ'' ಎನ್ನುವುದನ್ನು ತಿಳಿಸಿಕೊಡುವುದು ವಕ್ತೃವಿನ ತಾತ್ಪರ್ಯವೆಂಬ ಅರಿವು ನಮಗಿದ್ದರೆ ''ಅ'ವು'ಬ' ಆಗಿರುತ್ತದೆ'' ಎಂಬ ವಾಕ್ಯದಿಂದ ದೊರೆವ ಜ್ಞಾನವು ಈಗಾಗಲೇ ತಿಳಿದುದರ ಪುನರಾವರ್ತನೆಯೆನಿಸಿ ವ್ಯರ್ಥವಾಗುತ್ತ ದಲ್ಲವೆ? ಅಂಥವನ್ನು ಜ್ಞಾನವೆನ್ನಲಾಗುವುದಿಲ್ಲ. ಇದಕ್ಕೆ ನ್ಯಾಯಸಿದ್ಧಾಂತದ ಉತ್ತರ ಹೀಗೆ: ಮೇಲಿನ ಉದಾಹರಣೆಯಲ್ಲಿ ಸಂದರ್ಭವೇ ಮುಂತಾದವುಗಳ ನೆರವಿನಿಂದ 'ಸೈಂಧವ' ವೆಂಬ ಶಬ್ದವು ಉಪ್ಪನ್ನು ಸೂಚಿಸುತ್ತದೆಯೆಂದು ತಿಳಿಯುವಷ್ಟರಮಟ್ಟಿಗೆ ವಕ್ತೃತಾತ್ಪರ್ಯ ಜ್ಞಾನವು ನೆರವಾಗುತ್ತದೆ. ವಾಕ್ಯದ ಮೂಲಕ ವಕ್ತೃವು ಹೇಳಲು ಬಯಸಿದ್ದೆಲ್ಲವನ್ನೂ ಅದು ಮೊದಲೇ ತಿಳಿಸಿಕೊಡುವ ಆವಶ್ಯಕತೆಯಿಲ್ಲ.



'ಸೈಂಧವವು ಬೆಳ್ಳಗಿದೆ' ಯೆಂದು ವಾಕ್ಯವಿದೆ ಎಂದುಕೊಳ್ಳೋಣ. ಇಲ್ಲಿ ವಕ್ತೃವಿನ ತಾತ್ಪರ್ಯ 'ಕುದುರೆಯು ಬೆಳ್ಳಗಿದೆ' ಯೆಂಬುದು. ಇಲ್ಲಿ ಸಂದಿಗ್ಧತೆಯ ನಿವಾರಣೆಗೆ ಅವನ ವಿವಕ್ಷೆಯನ್ನು ಪೂರ್ತಿಯಾಗಿ ಅರಿಯಬೇಕಾಗಿಲ್ಲ. ವಕ್ತೃವು ಕುದುರೆಯನ್ನು ವಿಶೇಷ್ಯವಾಗಿಸಲು ಬಯಸಿದ್ದಾನೆಂಬುದನ್ನು ತಿಳಿದರೆ ಸಾಕು. ಆದರೆ ಅಲ್ಲಿ ಹುಟ್ಟುವ ಜ್ಞಾನವು ತಾಂತ್ರಿಕವಾಗಿ ಭಿನ್ನವಾಗಿರುತ್ತದೆ. ಅಶ್ವನಿಷ್ಠವಾದ ವಿಶೇಷ್ಯತೆ ಹಾಗೂ ಶ್ವೇತತ್ವನಿಷ್ಠವಾದ ವಿಶೇಷಣತೆಯಿಂದ ಅದು ಸೋಪಾಧಿಕವಾಗಿರುತ್ತದೆ.

ಇಲ್ಲೊಂದು ತಾಂತ್ರಿಕ ಸೂಕ್ಷ್ಮತೆಯಿದೆ. ಅದನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ. 'ಸೈಂಧವವು ಬೆಳ್ಳಗಿದೆ' ಎಂಬುದು ಉಚ್ಚಾರಣೆ. ಕುದುರೆಯಂತೆ ಉಪ್ಪು ಕೂಡ ಬೆಳ್ಳಗಿದೆ. ಇಂಥ ವಾಕ್ಯದಿಂದ ಶ್ರೋತೃವಿನಲ್ಲಿ ಶಾಬ್ದಬೋಧವುಂಟಾಗುವುದಿಲ್ಲ. ಯಾಕೆ? ಅವನು ಶಬ್ದಾರ್ಥವನ್ನು ನಿಶ್ಚಯಿಸಲಾರ; ಅಲ್ಲಿ ಪ್ರಮಾಣಿತ ವ್ಯಾಖ್ಯಾನವಿಲ್ಲ. ಹಾಗಾಗಿಯೇ ನಾನು ಪ್ರಾರಂಭದಲ್ಲಿ ಪ್ರಮಾಣಿತ ಅಥವಾ ಸಿದ್ಧವ್ಯಾಖ್ಯಾನ (ಸ್ಟಾಂಡರ್ಡ್ ಇಂಟರ್‌ಪ್ರಿಟೇಶನ್)ದ ಬಗೆಗೆ ಪ್ರಸ್ತಾಪಿಸಿದ್ದೆ. ಇಲ್ಲಿ ಆಕಾಂಕ್ಷೆಯೇ ಮೊದಲಾದ ನಿಬಂಧನೆಗಳು ಸಾಕಾಗುವುದಿಲ್ಲ. ಇದನ್ನು ಪರ್ಯಾಪ್ತಗೊಳಿಸಲು ವಕ್ತೃತಾತ್ಪರ್ಯ-ಜ್ಞಾನವನ್ನು ಸೇರಿಸಬೇಕಾಗುತ್ತದೆ. ಆದರೆ ಇದು ಪ್ರಾಭಾಕರರು ಕಲ್ಪಿಸುವ ಹಾಗೂ ನೈಯಾಯಿಕರು ನಿರಾಕರಿಸುವ ಪೂರ್ತಿಯಾದ ವಕ್ತೃತಾತ್ಪರ್ಯಜ್ಞಾನವಲ್ಲ. ವಕ್ತೃವು ತಾನು ಸಂವಹನಗೊಳಿಸಲು ಬಯಸುವ ಜ್ಞಾನಕ್ಕೆ ಕುದುರೆಯನ್ನು ವಿಶೇಷ್ಯವಾಗಿಸುವ ತಾತ್ಪರ್ಯವುಳ್ಳವನಾಗಿದ್ದಾನೆಂದು ತಿಳಿದರೆ ಸಾಕು. ಆದ್ದರಿಂದ ಇದು 'ಸೈಂಧವವು ಬೆಳ್ಳಗಿದೆ' ಎಂಬ ವಾಕ್ಯದಿಂದ ಹುಟ್ಟುವ ಪೂರ್ತಿಯಾದ ಜ್ಞಾನಕ್ಕಿಂತ ಭಿನ್ನವಾಗಿದೆ.

ಅಧ್ಯಾಯ ೨

# ಸ್ಫೋಟ ಸಿದ್ಧಾಂತ:

# ಪ್ರಾಚೀನ ಇತಿಹಾಸ ಮತ್ತು ಪತಂಜಲಿಯ ಮತ

## ೧. ಸ್ಫೋಟದ ಸಾಮಾನ್ಯ ಲಕ್ಷಣಗಳು

ಭಾಷೆಯೆಂದರೇನು? ಸ್ಫೋಟ; ಅದೇ ನಿಜವಾದ ಅರ್ಥವಾಹಕ. ಇದು ಭಾರತೀಯ ವೈಯಾಕರಣರು ಕೊಡುವ ಸಾಂಪ್ರದಾಯಿಕ ಉತ್ತರ. ವಾಸ್ತವವಾಗಿ ಭಾರತೀಯ ವೈಯಾಕರಣರ ಸ್ಫೋಟ ಸಿದ್ಧಾಂತವು ಭಾಷಾತತ್ತ್ವಶಾಸ್ತ್ರ ಹಾಗೂ ಸಾಮಾನ್ಯ ಭಾಷಾ ಶಾಸ್ತ್ರದ ಕೇಂದ್ರ ಸಮಸ್ಯೆಗೆ ಅತ್ಯಂತ ಮಹತ್ವದ ಕೊಡುಗೆಯೆಂದು ಪ್ರಶಂಸಿಸಲಾಗಿದೆ. ಶಬ್ದ ಅಥವಾ ವಾಕ್ಯವೆಂದರೆ ನಿರ್ದಿಷ್ಟ ಕ್ರಮದಲ್ಲಿ ಅಳವಟ್ಟ ವಿವಿಧ ಧ್ವನಿಘಟಕಗಳ ಕೇವಲ ಜೋಡಣೆಯಲ್ಲ; ಅದೊಂದು ಸಮಗ್ರ ವಸ್ತು; ಅರ್ಥವನ್ನು ಹೊತ್ತಿರುವ

ಒಂದು ಸಂಕೇತ ಎಂಬುದು ಈ ಸಿದ್ಧಾಂತದ ಮೂಲರೂಪ. ನಾನು ‘ಕೇವಲ’ ಮತ್ತು ‘ಹೊತ್ತಿರುವ’ ಎಂಬ ಶಬ್ದಗಳನ್ನು ಉದ್ದೇಶಪೂರ್ವಕವಾಗಿ ಬಳಸಿದ್ದೇನೆ. ಯಾಕೆಂದರೆ ಸ್ಫೋಟದ ಬಗೆಗಿನ ಸಾಮಾನ್ಯ ಕಲ್ಪನೆಯನ್ನು ರೂಪಿಸುತ್ತಿರುವ ಈ ಹಂತದಲ್ಲಿ ಇದಕ್ಕಿಂತ ಸಂಗ್ರಹವಾಗಿ ಹೇಳುವುದು ಕಷ್ಟ. ಸ್ಫೋಟ ಕಲ್ಪನೆಯನ್ನು ಬೇರೆ ಬೇರೆ ಲೇಖಕರು (ಕೆಳಗೆ ನೋಡಿ) ಬೇರೆ ಬೇರೆ ತೆರನಾಗಿ ಸಂಗ್ರಹಿಸಿ ರೂಪಿಸಿದ್ದಾರೆ. ಶಬ್ದವಾಗಲಿ ವಾಕ್ಯವಾಗಲಿ ಅರ್ಥವನ್ನು ಹೊತ್ತಿರುವ ಸರಳವಾದ ಸಂಕೇತವು ಸ್ಫೋಟವೆನಿಸುತ್ತದೆ. ಒಪ್ಪಿತವಾದ ಮತ್ತು ಗೊತ್ತುಪಡಿಸಿದ ಇಡಿಯಾದ ಅರ್ಥವನ್ನು ನೀಡಬಲ್ಲ ಭಾಷಿಕ ಚಿಹ್ನೆಯ ಘಟಕವನ್ನು ಅವಲಂಬಿಸಿ ಅದು ಶಬ್ದಸ್ಫೋಟ ಅಥವಾ ವಾಕ್ಯಸ್ಫೋಟವೆಂದು ಕರೆಸಿಕೊಳ್ಳುತ್ತದೆ.

ಭಾಷಿಕ ಚರ್ಚೆಯಲ್ಲಿ ತೊಡಗಿದಾಗ ನಾವು ಬಳಸುವ ಉಚ್ಚರಿತವಾದ ಮತ್ತು ಶ್ರವಣಯೋಗ್ಯವಾದ ಧ್ವನಿಗಳಿಗೂ ಸ್ಫೋಟಕ್ಕೂ ವೈದೃಶ್ಯವಿದೆ. ಈ ಸಿದ್ಧಾಂತದ ಪ್ರಕಾರ ನಮ್ಮ ಕಿವಿಗೆ ಬೀಳುವ ಧ್ವನಿಗಳು, ‘ಶಾಬ್ದಿಕ’ ವಾಸ್ತವಗಳ ಸಾಧನಗಳಾಗಿವೆ. ಅವುಗಳ ಮೂಲಕ ಸಂಕೇತ, ಸಂಬಂಧಿತ ಸ್ಫೋಟವು ಪ್ರಕಟವಾಗುತ್ತದೆ ಅಥವಾ ಸಾರ್ವಜನಿಕ ವಾಗುತ್ತದೆ. ಈ ಸ್ಥೂಲ ಸಿದ್ಧಾಂತದಂತೆ ಭಾಷೆಯೆಂದರೆ ‘ಶಾಬ್ದಿಕ’ ವಾಸ್ತವಗಳಿಂದ ಅಭಿವ್ಯಕ್ತಗೊಂಡುದು ಅಥವಾ ಮತ್ತೊಬ್ಬನಿಗೆ ಪ್ರಕಟಿಸಿದ್ದೇ ಹೊರತು ‘ಶಾಬ್ದಿಕ’ ವಾಸ್ತವಗಳೇ ಭಾಷೆಯಲ್ಲ. ಭಾಷೆಯ ತುಣುಕುಗಳನ್ನು ಗ್ರಹಿಸುವಾಗ ನಾವು ಅವು ತಿಳಿಯಪಡಿಸುವ ಅರ್ಥವನ್ನು ಗ್ರಹಿಸುತ್ತೇವೆ. ಆದರೆ ಇಂಥ ಅರ್ಥಗ್ರಹಣವು ಸಾಧ್ಯವಾಗುವುದು ಸ್ಫೋಟವನ್ನು ಗ್ರಹಿಸಿದಾಗ ಮಾತ್ರ. ಧ್ವನಿಗಳು ಕಾಗದದ ಮೇಲಿನ ಕಪ್ಪುಗೀಟು (ಬರವಣಿಗೆ) ಗಳಂತೆ. ನಮ್ಮ ತಿಳುವಳಿಕೆಯು ಆರಂಭಗೊಳ್ಳುವುದು ಧ್ವನಿಗಳನ್ನು ಅಥವಾ ಕಪ್ಪುಗೀಟುಗಳನ್ನು ಗುರುತಿಸುವುದರ ಮೂಲಕವೇ ಆಗಿದ್ದರೂ ಅವು ಅನಗತ್ಯವೆನಿಸುತ್ತವೆ.

‘ಸ್ಫೋಟ’ ಎಂಬ ಶಬ್ದದ ಧಾತ್ವರ್ಥಕ್ಕೆ ಸ್ವಲ್ಪ ಮಹತ್ವವಿದೆ. ಈಚಿನ ವಿದ್ವಾಂಸನಾದ ನಾಗೇಶಭಟ್ಟನು ‘ಸ್ಫುಟ್’ – ‘ಸ್ಫೋಟಗೊಳ್ಳು’ ಎಂಬ ಧಾತುವಿನಿಂದ ನಿಷ್ಪತ್ತಿಯನ್ನು ಹೇಳುತ್ತಾನೆ. ‘ಸ್ಫೋಟಗೊಳ್ಳು’ ಎಂಬುದಕ್ಕೆ ವ್ಯಕ್ತವಾಗುವುದು ಎಂಬುದು ನಾಗೇಶನ ವಿವರಣೆ. ಈ ಶಬ್ದನಿಷ್ಪತ್ತಿಯನ್ನು ಆಧರಿಸಿ ಸ್ಫೋಟದ ಅರ್ಥವನ್ನು ಹೀಗೆ ವಿವರಿಸಬಹುದು: ಯಾವುದರಿಂದ ಅರ್ಥವು ಸ್ಫೋಟಗೊಳ್ಳು ವುದೋ ಅಂದರೆ ಪ್ರಕಟವಾಗುವುದೋ ಅದು ಸ್ಫೋಟ (ನಾಗೇಶಭಟ್ಟ, ೧೯೫೬ರ ಆವೃತ್ತಿ, ಪು. ೫). (ನಾಗೇಶನಿಗಿಂತ ಪ್ರಾಚೀನನಾದ) ಮಾಧವನು ತನ್ನ ಸರ್ವದರ್ಶನ ಸಂಗ್ರಹದಲ್ಲಿ ಶಬ್ದವ್ಯುತ್ಪತ್ತಿಯನ್ನು ವಿವರಿಸಿದ್ದು ಹೀಗೆ: ‘ಸ್ಫೋಟಗೊಳ್ಳುವುದು’ ಎಂದರೆ



‘ಅಭಿವ್ಯಕ್ತವಾಗುವುದು’. ಆದ್ದರಿಂದ ಸ್ಫೋಟವೆಂದರೆ ವರ್ಣಗಳಿಂದ ಅಭಿವ್ಯಕ್ತ ಗೊಂಡು (ವ್ಯಜ್) ಅರ್ಥವನ್ನು ಪ್ರಕಟಪಡಿಸುವಂಥದಾಗುತ್ತದೆ. ಆದ್ದರಿಂದ ಸ್ಫೋಟವು ವರ್ಣಗಳಿಂದ ತನ್ನನ್ನು ಅಭಿವ್ಯಕ್ತಗೊಳಿಸಿಕೊಂಡು ಶ್ರೋತೃವಿಗೆ ಅರ್ಥವನ್ನು ಬೋಧಿಸುತ್ತದೆ (ಮಾಧವ, ೧೯೨೪ರ ಆವೃತ್ತಿ, ಪು. ೩೦೦). ಆಧುನಿಕ ವಿದ್ವಾಂಸನಾದ ಜಾನ್ ಬ್ರೋ ಇದನ್ನು ಸಂಕ್ಷಿಪ್ತವಾಗಿ ಹೀಗೆ ಹೇಳುತ್ತಾನೆ: ಸ್ಫೋಟವೆಂದರೆ ಸರಳವಾಗಿ ಭಾಷಿಕ ಚಿಹ್ನೆಯ ಅರ್ಥವಾಹಕ ಮುಖ (ಬ್ರೋ, ೧೯೫೧, ೩೩). ಕೆಲವು ಭಾರತ ತತ್ತ್ವಶಾಸ್ತ್ರಜ್ಞರು ಇದನ್ನು ‘ನಿಗೂಢವಾದ ತತ್ತ್ವ’ವೆಂದು ವರ್ಣಿಸಿದ್ದಾರೆ (ಕೀಥ್, ೧೯೨೮, ೩೮೭; ಡೇ, ೧೯೨೩, ೨, ಪು. ೧೮೦). ಭರ್ತೃಹರಿಯು ತನ್ನ ಸಾಮಾನ್ಯ ತತ್ತ್ವಶಾಸ್ತ್ರದಲ್ಲಿ ಶಬ್ದತತ್ತ್ವ ಮತ್ತು ಸ್ಫೋಟಗಳನ್ನು ಬ್ರಹ್ಮಕಲ್ಪನೆಯೊಂದಿಗೆ ಸೇರಿಸಿ ಹೇಳಿದ್ದೇ ಇದಕ್ಕೆ ಕಾರಣವಿರಬಹುದು. ಕೆಲವೊಮ್ಮೆ ಭರ್ತೃಹರಿಯು ಸ್ಫೋಟಕ್ಕೆ ಶಬ್ದವನ್ನು ಪರ್ಯಾಯಪದವನ್ನಾಗಿ ಬಳಸಿದ್ದಾನೆ. ಭರ್ತೃಹರಿಯ ಪ್ರಭಾವಕ್ಕೊಳಗಾದ ಕೆಲವು ಆಧುನಿಕ ವಿದ್ವಾಂಸರು ಸ್ಫೋಟವನ್ನು ವರ್ಣಿಸುವುದು ಹೀಗೆ: ಅದು ಧ್ವನಿಯೂ ಅಲ್ಲ; ಧ್ವನಿಗಳ ಸಮುದಾಯವೂ ಅಲ್ಲ; ಆದರೆ ‘ವಕ್ತೃವಿನ ಬುದ್ಧಿಯಲ್ಲಿರುವ ಮತ್ತು ಅವನು ಸಂವಹನಗೊಳಿಸಲು ಬಯಸುವ ವಿಶ್ಲೇಷಣೆಗೆ ನಿಲುಕದ ಭಾಷಿಕ ವಾಸ್ತವದ ಘಟಕಗಳು’ (ಕಾರ್ಡೋನಾ, ೧೯೭೬ ಪು. ೩೦೧).

## ೨. ಪ್ರಾಚೀನ ಇತಿಹಾಸ

ಪಾಣಿನಿಗೆ ಸ್ಫೋಟ ಸಿದ್ಧಾಂತದ ಯಾವುದಾದರೊಂದು ಸ್ವೀಕಾರಾರ್ಹ ರೂಪದ ಪರಿಚಯವಿದ್ದಿರಬಹುದೇ? ಸ್ಪಷ್ಟವಾಗಿ ಹೇಳಲು ಕಷ್ಟ. ಅವನ ಅಷ್ಟಾಧ್ಯಾಯಿಯಲ್ಲಿ ‘ಅವಾಜ್ ಸ್ಫೋಟಾಯನಸ್ಯ’ (೬.೧.೧೨೩) ಎಂಬ ಒಗಟಿನಂಥ ಸೂತ್ರವೇನೋ ಇದೆ. ಇದು ಸ್ಫೋಟಾಯನನೆಂಬ ಪ್ರಾಚೀನ ವೈಯಾಕರಣನನ್ನು ಸೂಚಿಸುತ್ತದೆ. ಈ ಸೂತ್ರವನ್ನು ಹೊರತುಪಡಿಸಿದರೆ ಮತ್ತಾವ ಆಧಾರವೂ ದೊರೆಯುವುದಿಲ್ಲ. ಆದರೆ ಪಾಣಿನಿಯ ಪರಂಪರೆಗೆ ಸೇರಿದ ಬಹುಶಃ ಹತ್ತನೆಯ ಶತಮಾನದವನಾದ ಹರದತ್ತನ ಊಹೆಯ ಪ್ರಕಾರ ಸ್ಫೋಟಾಯನನು ಸ್ಫೋಟಸಿದ್ಧಾಂತದ ಪ್ರವರ್ತಕ. ಹರದತ್ತನು ಪಾಣಿನಿಯ ೬.೧.೧೨೩ನೇ ಸೂತ್ರಕ್ಕೆ ವ್ಯಾಖ್ಯಾನ ಮಾಡುವಾಗ ತನ್ನ ಪದಮಂಜರಿಯಲ್ಲಿ ಈ ಸಂಗತಿಯನ್ನು ಪ್ರಸ್ತಾಪಿಸಿದ್ದಾನೆ. ಹರದತ್ತನನ್ನು ಅನುಸರಿಸಿ ನಾಗೇಶ ಭಟ್ಟ ಸ್ಫೋಟವಾದಕ್ಕೆ ಸ್ಫೋಟಾಯನ ಋಷಿಯೇ ಮೂಲಪುರುಷನೆಂದಿದ್ದಾನೆ (ನಾಗೇಶ ಭಟ್ಟ, ೧೯೫೬ರ ಆವೃತ್ತಿ, ಪು. ೧೦೨). ಯಾಸ್ಕನು ಔದುಂಬರಾಯಣನದೆಂದು ಹೇಳಿ ಇನ್ನೊಂದು ಸೂತ್ರರೂಪದ ವಾಕ್ಯದ ಉದ್ಧರಣೆಯನ್ನು ನೀಡಿದ್ದಾನೆ. (ಪಾಣಿನಿ ಮತ್ತು

ಯಾಸ್ಕರಲ್ಲಿ ಕಾಲಾನುಕ್ರಮದಲ್ಲಿ ಯಾರು ಪ್ರಾಚೀನರೆಂಬುದು ಅನಿಶ್ಚಿತ.) 'ಇಂದ್ರಿಯ ನಿತ್ಯಂ ವಚನಂ' —'ವಚನವು ಇಂದ್ರಿಯನಿತ್ಯವಾದುದು' ಎಂದು ಉದಾಹರಿಸಿ ಹೀಗೆ ವಿವರಿಸುತ್ತಾನೆ: ಭಾಷೆಯನ್ನು ಬಳಸುವ ವಕ್ತೃ ಮತ್ತು ಶ್ರೋತೃಗಳ ಅಂತರಂಗದಲ್ಲಿ ವಾಕ್ಯವಿರುತ್ತದೆ (ಯಾಸ್ಕ, ೧೯೧೮ರ ಆವೃತ್ತಿ, ೧.೧). ಇದೇ ರೀತಿಯ ಅಭಿಪ್ರಾಯವನ್ನು ವಾರ್ತಾಕ್ಷನೆಂಬವನು ಹೊಂದಿದ್ದನೆಂದು ಭರ್ತೃಹರಿ ಹೇಳುತ್ತಾನೆ (ಭರ್ತೃಹರಿ, ೧೯೬೫ರ ಆವೃತ್ತಿ, ೨. ೩೪೭). ಈ ವಿದ್ವಾಂಸರ ಬಗೆಗೆ ನಮಗೆ ತಿಳಿದದ್ದು ಅತ್ಯಲ್ಪ. ಯಾಸ್ಕನು ಹೇಳುವ ಔದುಂಬರಾಯಣನ ಮತವು ಭರ್ತೃಹರಿಯ ಸ್ಫೋಟ ಸಿದ್ಧಾಂತದ ಮುನ್ಸೂಚನೆಯಾಗಿರಬಹುದೆಂದು ಬ್ರೋ ಹೇಳುತ್ತಾನೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಸ್ಫೋಟ ಸಿದ್ಧಾಂತದ ಮೂಲರೂಪವನ್ನು ಪರಿಚಯಿಸುವ ಆಧಾರಗಳಾವುವೂ ದೊರೆಯುವುದಿಲ್ಲ. ಪಾಣಿನಿಯು ಹೇಳಿದ್ದು ವ್ಯಕ್ತಿಯೊಬ್ಬನ ಹೆಸರನ್ನು ಮಾತ್ರ. ಯಾಸ್ಕನು ಸಂಕ್ಷಿಪ್ತವಾದ ಉದ್ಧರಣವನ್ನು ಕೊಟ್ಟಿದ್ದಾನೆ. ಅವು ನಮ್ಮನ್ನು ಹೆಚ್ಚು ದೂರ ಕೊಂಡೊಯ್ಯಲಾರವು. ಬಹುಶಃ ಪಾಣಿನಿಯ ಸಮಕಾಲೀನನಾಗಿರಬಹುದಾಗಿದ್ದ ವ್ಯಾಡಿಯೆಂಬ ಮಹಾನ್ ವೈಯಾಕರಣನು ಸಂಗ್ರಹವೆಂಬ ಗ್ರಂಥವನ್ನು ರಚಿಸಿದ್ದಾನೆ. (ಭರ್ತೃಹರಿಯಂಥ ವೈಯಾಕರಣರು ಆಗಾಗ ಈ ಕೃತಿಯ ಬಗೆಗೆ ಹೇಳುತ್ತಾರಾದರೂ ನಮ್ಮ ಪಾಲಿಗೆ ಅದು ಪೂರ್ಣವಾಗಿ ಲುಪ್ತವಾಗಿದೆ.) ಅವನು ತನ್ನ ಕೃತಿಯಲ್ಲಿ ಸ್ಫೋಟ ಸಿದ್ಧಾಂತದ ಮೂಲರೂಪದ ಬಗ್ಗೆ ಚರ್ಚಿಸಿದ್ದಿರಬಹುದಾಗಿದೆ. ಆದರೆ ಇದು ಊಹೆ ಮಾತ್ರ. ಈ ಊಹೆಗೆ ಹೆಚ್ಚಿನ ಮಹತ್ವವನ್ನು ಕೊಡಲು ಸಾಧ್ಯವಿಲ್ಲ.

### ೩. ಪತಂಜಲಿಯ ಮತ

ಪತಂಜಲಿಯು ಒಂದು ಸಂದರ್ಭದಲ್ಲಿ ಸ್ಫೋಟವೆಂದರೆ 'ಮಾತು' ಅಥವಾ 'ಭಾಷೆ' (ಶಬ್ದ) ಯೆಂದೂ ಧ್ವನಿ ಅಥವಾ ಶಬ್ದವು ಆ ಮಾತು ಅಥವಾ ಭಾಷೆಯ ಧರ್ಮವೆಂದೂ ಹೇಳುತ್ತಾನೆ. ಭಾಷೆಯಲ್ಲಿರುವ ಧ್ವನಿಯ ಅಂಶ ಅರ್ಥಾತ್ ಶ್ರವಣಯೋಗ್ಯವಾದ ಭಾಗವು ಮೃದುವೋ ಕರ್ಕಶವೋ ಹ್ರಸ್ವವೋ ದೀರ್ಘವೋ ಆಗಿರಬಹುದಾದರೂ ಸ್ಫೋಟವು ಒಂದೇ ತೆರನಾಗಿರುತ್ತದೆ; ಅದು ಪ್ರತ್ಯೇಕ ವಕ್ತೃಗಳ ವೈಶಿಷ್ಟ್ಯಗಳಿಂದ ಪರಿಣಾಮಗೊಳ್ಳುವುದಿಲ್ಲವೆಂದು ವಿವರಿಸುತ್ತಾನೆ. ಪತಂಜಲಿಯ ಪ್ರಕಾರ ಒಂದು ಅಕ್ಷರ ಅಥವಾ ಕ್, ಪ್ ದಂಥ ಒಂದು ವರ್ಣ ಅಥವಾ ವರ್ಣಪರಂಪರೆ ಅಥವಾ ಅಕ್ಷರಪರಂಪರೆಗಳು ಸ್ಫೋಟವೆನಿಸಬಲ್ಲವು. ಇಲ್ಲಿನ ವಿಚಾರವಿಷ್ಟೆ; ಬೇರೆ ಬೇರೆ ವ್ಯಕ್ತಿಗಳು ವಿಭಿನ್ನ ಲಯದಲ್ಲಿ ಉಚ್ಚರಿಸಿದಾಗ ಉಂಟಾಗುವ ವ್ಯತ್ಯಾಸವು ಧ್ವನಿಯ ಶ್ರಾವಣ ವಿಭಾಗಕ್ಕೆ ಸೇರಿದ್ದಾಗಿರುತ್ತದೆ; ವ್ಯತ್ಯಾಸಕ್ಕೊಳಗಾಗದ ಧ್ವನಿರೂಪವನ್ನು



ಸ್ಫೋಟವೆಂದು ಕರೆಯುತ್ತಾರೆ. ಹೀಗೆ ಸ್ಫೋಟವೆಂದರೆ ಒಂದು ಧ್ವನಿಘಟಕ; ಅದು ಒಂದು ವರ್ಣವಾಗಿರಬಹುದು ಅಥವಾ ವರ್ಣಪರಂಪರೆಯಾಗಿರಬಹುದು. ವರ್ಣಪರಂಪರೆಯನ್ನು ವರ್ಣಘಟಕಗಳ ಕ್ರಮಕ್ಕನುಸಾರವಾಗಿ ವಿಶ್ಲೇಷಿಸಬಹುದು. ಆದ್ದರಿಂದ ಅದಕ್ಕೊಂದು ನಿಯತವಾದ 'ಗಾತ್ರ'ವಿರುತ್ತದೆ ಅಥವಾ ಘಟಕಗಳ ಸಂಖ್ಯೆಯ ಮೇಲಿಂದ ನಿಯತವಾದ ಕಾಲಿಕ ಆಯಾಮವಿರುತ್ತದೆ. ಸ್ಫೋಟದ ಕುರಿತಾದ ಈ ಕಲ್ಪನೆಗೂ ಮುಂದಿನ ವೈಯಾಕರಣರ ಕಲ್ಪನೆಗೂ ವ್ಯತ್ಯಾಸವಿದೆ. ಯಾಕೆಂದರೆ ಮುಂದಿನವರು ಸ್ಫೋಟವನ್ನು ಅಖಂಡವಸ್ತುವೆಂದೂ ಆ ಕಾರಣದಿಂದಲೇ ವಿಶ್ಲೇಷಿಸಲು ಬಾರದ್ದೆಂದೂ ಹೇಳುತ್ತಾರೆ.

ಪಾಣಿನಿಯ ೧.೧.೭೦ನೇ ಸೂತ್ರಕ್ಕೆ ಭಾಷ್ಯದಲ್ಲಿ ಪತಂಜಲಿಯು ಧ್ವನಿ ಮತ್ತು ಸ್ಫೋಟಗಳ ಭೇದವನ್ನು ತಿಳಿಸಲು ಉದಾಹರಣೆಯೊಂದನ್ನು ಕೊಟ್ಟಿದ್ದಾನೆ. ಭೇರಿಯನ್ನು ಬಾರಿಸಿದಾಗ ಒಂದು ಹೊಡೆತ ಇಪ್ಪತ್ತು ಗಜದಷ್ಟು ದೂರ ಕೇಳೀತು; ಮತ್ತೊಂದು ಮೂವತ್ತು; ಇನ್ನೊಂದು ನಲವತ್ತು. ಆದರೆ ಸ್ಫೋಟವು ನಿಶ್ಚಿತವಾದ 'ಗಾತ್ರ' (ತೀವ್ರತೆ) ವನ್ನು ಹೊಂದಿರುತ್ತದೆ. ಅದರ ದೈರ್ಘ್ಯ ಅಥವಾ ತೀವ್ರತೆಯ ವೃದ್ಧಿಯು ಧ್ವನಿಕೃತವಾದುದಾಗಿರುತ್ತದೆ. ಅವನು ಹೇಳುವುದೆಂದರೆ ವರ್ಣಗಳು (ಅಥವಾ ಒಂದು ವರ್ಣ) ನಿರ್ದಿಷ್ಟ ಸ್ವರೂಪದವು (ಅವಸ್ಥಿತ). ಆದರೆ ಅವುಗಳನ್ನು ಉಚ್ಚರಿಸುವ ಶೈಲಿಯು ವಕ್ತೃವಿನ ವಾಗಿಂದ್ರಿಯ (ವೃತ್ತಿ) ಗಳನ್ನು ಅವಲಂಬಿಸಿದೆ. ಬಹುಶಃ ಈ ಭೇದವನ್ನು ಪಾಣಿನಿಯ ಸಮಕಾಲೀನನೆಂದು ಭಾವಿಸಲಾದ ವ್ಯಾಡಿಯು ಭಾಷೆಯ 'ಎರಡು ಮುಖ'ಗಳನ್ನು ಕುರಿತು ಹೇಳುವಾಗ ಹೇಳಿದ್ದಿರಬಹುದು. ನಾನು ಈಗಾಗಲೇ ಹೇಳಿದಂತೆ ಅವನ 'ಸಂಗ್ರಹ'ವೆಂಬ ಕೃತಿ ಉಳಿದುಕೊಂಡಿಲ್ಲ. ವಾಕ್ಯಪದೀಯದಲ್ಲಿ ಭರ್ತೃಹರಿಯಿಂದ ಉದ್ಧೃತವಾದ ಶ್ಲೋಕವು (೧.೭೭) ವ್ಯಾಡಿಯದೆಂದು ವ್ಯಾಖ್ಯಾನಕಾರರು ಹೇಳುತ್ತಾರೆ. ಇದನ್ನು ಅಧಿಕೃತವೆಂದು ಒಪ್ಪಿದರೆ 'ಪ್ರಾಕೃತ ಧ್ವನಿ' (ಮೂಲ ಧ್ವನಿ) ಮತ್ತು 'ವೈಕೃತ ಧ್ವನಿ' (ಬದಲಾಯಿಸಿದ ಧ್ವನಿ) ಎಂಬ ವಿಂಗಡಣೆಯು ವ್ಯಾಡಿಯದೇ ಎಂದು ಹೇಳಬಹುದು. 'ಪ್ರಾಕೃತ ಧ್ವನಿ'ಯು ವರ್ಣಪ್ರತ್ಯಕ್ಷ ಅಥವಾ ವರ್ಣಗ್ರಹಣಕ್ಕೆ ಕಾರಣವಾಗಿದ್ದರೆ, 'ವೈಕೃತ ಧ್ವನಿ'ಯು ಉಚ್ಚಾರಣಾಶೈಲಿಯ ವ್ಯತ್ಯಾಸ, ಮಾತು, ಗಾತ್ರ ಮುಂತಾದವುಗಳನ್ನು ವಿವರಿಸುತ್ತದೆ. ವ್ಯಾಡಿಯು ಹೇಳಿದ ಪ್ರಾಕೃತ/ ವೈಕೃತ ಎಂಬ ಮಾತಿನ ಭೇದವೇ ಪತಂಜಲಿಯಲ್ಲಿ ಸ್ಫೋಟ-ಧ್ವನಿ ಭೇದವೆಂದು ನಿರೂಪಿತವಾಗಿರಬಹುದು. ಅದೇನೇ ಇದ್ದರೂ ನಂತರದ ವೈಯಾಕರಣರು (ಉದಾಃ ಭರ್ತೃಹರಿ) ಪ್ರತಿಪಾದಿಸುವ ಸ್ಫೋಟ ಸಿದ್ಧಾಂತವು ಬೇರೆಯದೇ ಆಗಿದೆ.

ಮೀಮಾಂಸಕರ ಪ್ರಕಾರ ವರ್ಣ (ಶಬ್ದ) ಅಥವಾ ಧ್ವನಿಘಟಕಗಳು ನಿತ್ಯ. ಈ ನಿತ್ಯವಾದ ವರ್ಣಗಳೇ ಬೇರೆ; ಉಚ್ಚರಿಸಿದಾಗ ಹೊರಡುವ ಧ್ವನಿಯೇ ಬೇರೆ. ಉಚ್ಚಾರಣೆಯನ್ನು ಮಾಡಿದಾಗ ದ್ರುತ, ವಿಲಂಬಿತ ಅಥವಾ ಮಧ್ಯಮಗಳನ್ನು ಗುರುತಿಸಬಹುದು. ಆದರೆ ಅವು ನಿತ್ಯವಾದ ವರ್ಣ ಅಥವಾ ಧ್ವನಿಘಟಕಗಳಿಗೆ ಸೇರಿದವುಗಳಲ್ಲ. ನಾವು ಉಂಟುಮಾಡಿದ ಹಾಗೂ ಕೇಳುಗರು ಕೇಳುವ ಧ್ವನಿಗಳು ನಿತ್ಯವಾದ ವರ್ಣಗಳ ಅಭಿವ್ಯಕ್ತಿಗಳು ಮಾತ್ರ. ಮೀಮಾಂಸಕರ ಈ ಮತವೂ ಪತಂಜಲಿಯ ಮೇಲೆ ಪ್ರಭಾವ ಬೀರಿರಬಹುದು. ಆಧುನಿಕರು ಹೇಳುವ ಧ್ವನಿಮಾ ಮತ್ತು ಶ್ರುತಧ್ವನಿಗಳೆಂಬ ಭೇದಗಳು ಪತಂಜಲಿಯ ಸ್ಫೋಟ-ಧ್ವನಿ ಸಿದ್ಧಾಂತದೊಂದಿಗೆ ಹೋಲುತ್ತದೆ. ಆದರೆ ನೈಯಾಯಿಕರ ಅಭಿಪ್ರಾಯವೇ ಬೇರೆ. ಅವರು ವರ್ಣಗಳು ನಿತ್ಯವಾದವುಗಳೆಂಬ ಮೀಮಾಂಸಕರ ಸಿದ್ಧಾಂತವನ್ನು ಒಪ್ಪುವುದಿಲ್ಲ. ವರ್ಣಗಳು ನಮ್ಮ ಪ್ರಯತ್ನದಿಂದ ಹುಟ್ಟುತ್ತವೆಯಾದ್ದರಿಂದ ಅನಿತ್ಯವೆಂದು ತಿಳಿಯಬೇಕು. ಪ್ರತಿಯೊಂದು ವರ್ಣವೂ ಆಯಾ ವರ್ಣಸಾಮಾನ್ಯದ ವಿಶೇಷ ಉದಾಹರಣೆಯಾಗಿದೆ. ವಕ್ತೃವು 'ಕ' ವನ್ನು ಉಚ್ಚರಿಸಿದರೆ ಅದು 'ಕ' ವರ್ಣಸಾಮಾನ್ಯದ (=ಕತ್ವ ಜಾತಿಯ) ವಿಶಿಷ್ಟ ಉದಾಹರಣೆಯಾಗಿರುತ್ತದೆ. ಇದು ಬಹುಮಟ್ಟಿಗೆ ಮಾದರಿ - ಉದಾಹರಣೆ (type-token)ಗಳ ಭೇದದಂತೆ. ನೈಯಾಯಿಕರು ಜಾತಿ-ವ್ಯಕ್ತಿಗಳೆಂಬ ವಿಶಾಲವಾದ ವರ್ಗವನ್ನು ಹೇಳುತ್ತಾರೆ. ಆ ಮೂಲಕವಾಗಿ ಎರಡು ಅಥವಾ ಹೆಚ್ಚು 'ಕ' ಗಳಲ್ಲಿರುವ ಏಕತೆಯನ್ನು ವಿವರಿಸಬಹುದು. ಮತ್ತೆ ಮತ್ತೆ ಉಚ್ಚರಿಸಿದಾಗ ಹುಟ್ಟುವ 'ಕ' ನಿಜವಾಗಿ ಬೇರೆಯೇ. ಆದರೂ ಕೇಳುವವನಿಗೆ ಅದು ಒಂದೇ ಎಂಬ ಭಾವನೆ ಬರುತ್ತದೆ. ಇದಕ್ಕೆ ಅವುಗಳಲ್ಲಿರುವ ಅತೀವ ಸಾದೃಶ್ಯವೇ ಕಾರಣವಾಗಿದೆ. ಈ ಸಾದೃಶ್ಯಕ್ಕೆ ಮೂಲ ವಾದುದು ಎಲ್ಲ 'ಕ'ಗಳಲ್ಲಿರುವ 'ಕತ್ವ' ವೆಂಬ ಜಾತಿ. ಹಾಗಾಗಿ ನಾವು ಎಲ್ಲ 'ಕ' ಗಳೂ ಒಂದೇ ಎಂದು ತಿಳಿಯುತ್ತೇವೆ. ನೈಯಾಯಿಕರ ಈ ಜಾತಿ-ವ್ಯಕ್ತಿ ವಾದವು ಮೂಲತತ್ತ್ವಶಾಸ್ತ್ರೀಯ ಸ್ವರೂಪದ್ದಾಗಿರುವುದರಿಂದ ಮಾದರಿ-ಉದಾಹರಣೆಗಳ ಪರಿಷ್ಕೃತರೂಪವನ್ನು ಅದಕ್ಕೆ ಬದಲಿಯಾಗಿ ಹೇಳುವಂತಿಲ್ಲ. ಅದೇನೇ ಇದ್ದರೂ ವೈಯಾಕರಣರ ಸ್ಫೋಟ-ಧ್ವನಿ ಸಿದ್ಧಾಂತವು ಪ್ರತಿಸಿದ್ಧಾಂತದಂತೆ ನಿರೂಪಿತವಾಗಿದೆ. ಹಾಗಾಗಿ ಅದನ್ನು ಇಂದು ನಮಗೆ ಪರಿಚಿತವಾಗಿರುವ ಮಾದರಿ-ಉದಾಹರಣೆಗಳ ಸಿದ್ಧಾಂತದೊಂದಿಗೆ ಸಮೀಕರಿಸುವುದು ಸಮಂಜಸವಾಗಲಿಕ್ಕಿಲ್ಲ. ಈಗ ನ್ಯಾಯ ಸಿದ್ಧಾಂತದತ್ತ ಮರಳೋಣ. ಈ ಸಿದ್ಧಾಂತದ ಪ್ರಕಾರ ಪದವೆಂದರೆ ಅನುಕ್ರಮವಾಗಿ ಉಚ್ಚರಿಸಲ್ಪಟ್ಟ ವರ್ಣಗಳ ಸಮೂಹ. ವರ್ಣವು ಉಚ್ಚರಿಸಿದೊಡನೆಯೇ ನಾಶವಾಗುವುದಾದರೂ ಸಂಸ್ಕಾರರೂಪದಲ್ಲಿ ಮನಸ್ಸಿನಲ್ಲಿರುತ್ತದೆ. ಅಂತ್ಯವರ್ಣವನ್ನು



ಉಚ್ಚರಿಸಿದೊಡನೆ ಈ ಸಂಸ್ಕಾರಗಳ ಸಹಾಯವನ್ನು ಪಡೆದುಕೊಂಡು ಕೇಳುಗನಿಗೆ ಅರ್ಥಬೋಧೆಯಾಗುತ್ತದೆ. ವರ್ಣಗಳು ಪ್ರತ್ಯೇಕವಾಗಿದ್ದಾಗ ಅರ್ಥವನ್ನು ಬೋಧಿಸಲಾರವು. ಅವು ಸೇರಿಕೊಳ್ಳಬೇಕಾದುದು ಅವಶ್ಯ. ಈ ಉದ್ದೇಶಕ್ಕಾಗಿ ಅವು ಪ್ರತ್ಯಕ್ಷವಾಗಬೇಕು ಅಥವಾ ಅವುಗಳನ್ನು ಇಡಿಯಾದ ವಸ್ತುವನ್ನಾಗಿ ಗ್ರಹಿಸಬೇಕು. ಪಾರಿಭಾಷಿಕವಾಗಿ ಅವು 'ಸಾಮಾನಾಧಿಕರಣ್ಯ' (ಒಟ್ಟಾಗಿರುವಿಕೆ)ವನ್ನು ಹೊಂದಿರ ಬೇಕೆಂದು ಹೇಳಲಾಗಿದೆ. ಅನುಕ್ರಮವಾಗಿ ಉಚ್ಚರಿತವಾದ ಪೂರ್ವವರ್ಣಗಳನ್ನು ಕೇಳಿದ ಸಂಸ್ಕಾರದ ನೆರವನ್ನು ಪಡೆದ ಅಂತ್ಯವರ್ಣವನ್ನು ಕೇಳಿದಾಗ (=ಅಂತ್ಯವರ್ಣ ಪ್ರತ್ಯಕ್ಷದಿಂದ) ಇದು ಸಾಧ್ಯವಾಗುತ್ತದೆ. ಆದ್ದರಿಂದ ಈ ವಿಶೇಷಣದಿಂದೊಡಗೂಡಿದ ಪ್ರತ್ಯಕ್ಷವು (ಹಿಂದೆ ಹೇಳಿದ ಸ್ಮೃತಿ ಸಂಸ್ಕಾರದ ಭಾರವನ್ನು ಹೊತ್ತು) ಪದದ ಅರ್ಥವನ್ನು ಬೋಧಿಸುತ್ತದೆ.

ನ್ಯಾಯದರ್ಶನದ ಭಾಷಾಸಿದ್ಧಾಂತವು ಅತೃಪ್ತಿಕರವೆಂಬುದು ಸ್ಪಷ್ಟ. ಅದು ಪದ ಅಥವಾ ವಾಕ್ಯದಿಂದ ಯಾಕೆ ಅಥವಾ ಹೇಗೆ ಅರ್ಥಬೋಧೆಯಾಗುವುದೆಂಬುದನ್ನು ವಿವರಿಸುವುದಿಲ್ಲ. ಯಾಕೆಂದರೆ ಈ ಅರ್ಥಯುಕ್ತ ಘಟಕಗಳು ಕೇವಲ ಅನುಕ್ರಮವಾಗಿ ಉಚ್ಚರಿತವಾದ ಶಬ್ದಾಣುಗಳ ಸಮೂಹವಷ್ಟೇ ಆಗಿದ್ದರೆ ಅವುಗಳಲ್ಲಿ ಏಕತೆ ಯಿರುವುದಿಲ್ಲ ಮತ್ತು ಅದೇ ಕಾರಣದಿಂದ ಏಕಾರ್ಥಬೋಧನೆಯೂ ಸಾಧ್ಯವಾಗದು. ಅಲ್ಲದೆ ಈ ಘಟಕಗಳನ್ನು ಒಮ್ಮೆಗೇ ಗ್ರಹಿಸುವುದು ಹೇಗೆಂಬುದನ್ನೂ ವಿವರಿಸುವುದಿಲ್ಲ. ವರ್ಣಗಳು ಉಚ್ಚರಿಸಿದೊಡನೆಯೇ ನಾಶವಾದರೂ ಮನಸ್ಸಿನಲ್ಲಿ ಸಂಸ್ಕಾರರೂಪದಲ್ಲಿ ಉಳಿದುಕೊಂಡಿದ್ದು ಅಂತ್ಯವರ್ಣದ ಉಚ್ಚಾರಣೆಯಾದೊಡನೆ ಅರ್ಥಬೋಧೆ ಯಾಗುವುದೆಂಬುದು ಈ ಸಿದ್ಧಾಂತದ ವಿವರಣಾಶಕ್ತಿಯ ದಾರಿದ್ರ್ಯವನ್ನು ಪ್ರಕಟಿಸು ತ್ತದೆಯಷ್ಟೇ. ನೈಯಾಯಿಕರಿಗೆ 'ಅವಯವ - ಅವಯವಿ' ಸಿದ್ಧಾಂತದ ಮೇಲೆ ನಂಬುಗೆ. ಆ ಸಿದ್ಧಾಂತದ ಪ್ರಕಾರ 'ಅವಯವಿ'ಯು ಅವಯವಗಳಿಂದ ಬೇರೆಯಾದ ನೂತನ ಸೃಷ್ಟಿ. ಹಾಗಾಗಿ ಅವರ ಸಿದ್ಧಾಂತದಂತೆ ಪ್ರತ್ಯೇಕವಾದ ಧ್ವನಿಗಳಿಂದ ಪದವೆಂಬ ನೂತನ ಘಟಕವು ಹುಟ್ಟಿಕೊಳ್ಳುತ್ತದೆ; ಮತ್ತು ಅಂತ್ಯವರ್ಣವು ಕಿವಿಗೆ ಬಿದ್ದೊಡನೆ ಇಡಿಯ ಪದದ ಸ್ಮೃತಿಯು ಜಾಗೃತವಾಗುತ್ತದೆ. ವೈಯಾಕರಣ ಅಥವಾ ಭಾಷಾಶಾಸ್ತ್ರಜ್ಞರ ವಿವರಣೆ ಬೇರೆ. ನಾವು ಪದ ಅಥವಾ ವಾಕ್ಯವನ್ನು ಒಂದು ಅರ್ಥಯುಕ್ತವಾದ ಘಟಕವನ್ನಾಗಿ ತಿಳಿಯಬೇಕು. ಅವೆರಡೂ ಪ್ರತ್ಯೇಕವಾದವುಗಳು. ಈ ಪ್ರಯೋಜನ ಕ್ಕಾಗಿ ಸ್ಫೋಟ ಸಿದ್ಧಾಂತದ ನೆರವನ್ನು ಪಡೆಯಲಾಗುತ್ತದೆ. ಈ ಸಿದ್ಧಾಂತದ ನೇರ ಪರಿಣಾಮವೆಂದರೆ ಪ್ರತ್ಯೇಕವಾದ ಭಾಷಿಕ ವಾಸ್ತವಗಳ ಗುಂಪನ್ನು ಅರ್ಥಬೋಧಕ ಘಟಕಗಳನ್ನಾಗಿ ಪ್ರಸ್ತುತಪಡಿಸುವುದು.

ನ್ಯಾಯ ಮತ್ತು ಮೀಮಾಂಸೆಗಳೆರಡೂ ಸ್ಫೋಟ ಸಿದ್ಧಾಂತವನ್ನು ವಿರೋಧಿಸುತ್ತವೆ. ಪದವೆಂದರೆ ವರ್ಣ ಅಥವಾ ಧ್ವನಿಗಳ ಸಮೂಹವೆಂಬುದು ಅವರ ವ್ಯಾಖ್ಯೆ. ಅರ್ಥಬೋಧೆಯನ್ನು ವಿವರಿಸುವಲ್ಲಿಯೂ ಅವರದು ಸಮಾನ ಸಿದ್ಧಾಂತಗಳೇ. ಹಿಂದಿನ ವರ್ಣ ಅಥವಾ ಧ್ವನಿಗಳ ಉಚ್ಚಾರಣೆಯಿಂದುಂಟಾದ ಸಂಸ್ಕಾರಗಳ ನೆರವನ್ನು ಪಡೆದ ಅಂತ್ಯವರ್ಣದ ಉಚ್ಚಾರವಾದೊಡನೆ ಅರ್ಥಬೋಧೆಯಾಗುತ್ತದೆ. ಮೂಲ-ತತ್ತ್ವಶಾಸ್ತ್ರದ ದೃಷ್ಟಿಯಿಂದ ಮೀಮಾಂಸಕರು ಮಂಡಿಸುವ ಶಬ್ದಸಿದ್ಧಾಂತವು ಸ್ವಲ್ಪ ಬೇರೆ; ಆ ಶಬ್ದವು ಭಾಷಿಕ ಶಬ್ದಗಳನ್ನೂ ಒಳಗೊಂಡಿದೆ. ನೈಯಾಯಿಕರಂತೆ ಅವರು ಶಬ್ದಗಳ ಕ್ಷಣಿಕತೆಯನ್ನು ಅಂದರೆ ಹುಟ್ಟಿದೊಡನೆ ನಾಶವಾಗುತ್ತವೆಯೆಂಬುದನ್ನು ಒಪ್ಪುವುದಿಲ್ಲ. ಮೀಮಾಂಸಕರ ಪ್ರಕಾರ ವರ್ಣಅಥವಾ ಶಬ್ದಕ್ಕೆ ಉತ್ಪತ್ತಿ-ವಿನಾಶಗಳಿಲ್ಲದ ನಿತ್ಯವಾದ ಅಸ್ತಿತ್ವವಿದೆ. ಧ್ವನ್ಯಂಗಗಳು ಒಂದನ್ನೊಂದು ತಾಗಿದಾಗ ಅಥವಾ ಕ್ರಿಯಾಶೀಲವಾದಾಗ ಅವ್ಯಕ್ತವಾದ ನಿತ್ಯವಾದ ಶಬ್ದಗಳು ವ್ಯಕ್ತಗೊಳ್ಳುತ್ತವೆ ಅಥವಾ ಪ್ರಕಟವಾಗುತ್ತವೆ. ಇಲ್ಲಿರುವುದು ಜಾತಿ - ವ್ಯಕ್ತಿ ಸಂಬಂಧವಲ್ಲ; ಅದಕ್ಕಿಂತ ಬೇರೆಯಾದ ನಿಮಿತ್ತಗಳು. ಅವು ಒಟ್ಟಾಗಿ ದುಡಿದಾಗ ಭೌತಿಕ ಪದಾರ್ಥಗಳಲ್ಲಿ ಅವ್ಯಕ್ತವಾಗಿದ್ದುಕೊಂಡಿರುವ ನಿತ್ಯವಸ್ತುವೊಂದನ್ನು ತಾತ್ಕಾಲಿಕವಾಗಿ ವ್ಯಕ್ತಪಡಿಸುತ್ತವೆ. ಅವು ತಮ್ಮ ಕೆಲಸವನ್ನು ನಿಲ್ಲಿಸಿದೊಡನೆ ಆ ವಸ್ತುವು ಪುನಃ ಅವ್ಯಕ್ತವಾಗುತ್ತದೆ. ಅದು ವ್ಯಕ್ತಗೊಂಡಾಗ 'ಶಬ್ದವು ಹುಟ್ಟಿತು' ಎನ್ನುತ್ತೇವೆ. ಇದನ್ನು 'ಶಬ್ದವು ಪ್ರಕಟವಾಯಿತು' ಎಂದು ಬದಲಿಸಿ ಕೊಳ್ಳಬೇಕು. ವಕ್ತೃವಿನ ಕ್ರಮವಾದ ಉಚ್ಚಾರಣೆಯಿಂದ ಶ್ರೋತೃವಿನ ಮನಸ್ಸಿನಲ್ಲಿ ಮೂಡಿದ ಸ್ಮೃತಿ ಸಂಸ್ಕಾರಗಳಿಗೆ ಪದ ಅಥವಾ ವಾಕ್ಯದ ಅರ್ಥವನ್ನು ಬೋಧಿಸುವ ವಿಶೇಷವಾದ ಶಕ್ತಿಯಿದೆಯೆಂದೂ ಮೀಮಾಂಸಕರು ಹೇಳುತ್ತಾರೆ. ವಾಸ್ತವವಾಗಿ ಈ ಸಂಸ್ಕಾರಗಳೆಂದರೆ ಶಬ್ದಗಳ ಉಚ್ಚಾರಣೆಯನ್ನು ಕೇಳಿದ ಅನುಭವವು ನಮ್ಮ ಮನಸ್ಸಿನಲ್ಲಿ ಮೂಡಿಸಿದ ಗುರುತುಗಳೇ ಆಗಿವೆ. ಈ ಸಂಸ್ಕಾರಗಳನ್ನು ನಾವು ಅನುಮಾನ ಪ್ರಮಾಣದಿಂದ ಕಂಡುಕೊಳ್ಳಬೇಕಾಗುತ್ತದೆ. ಈ ಅನುಮಾನ ಅಥವಾ ಊಹೆಗೆ ಆಧಾರವೆಂದರೆ ಹಿಂದಿನ ಅನುಭವಗಳ ಸ್ಮರಣೆ. ಈ ಸಂಸ್ಕಾರಗಳು ಮನಸ್ಸಿನಲ್ಲಿ ಭಾವನಾರೂಪದವುಗಳಾಗಿದ್ದು ಸ್ಮೃತಿಯನ್ನುಂಟುಮಾಡುವ ಸಾಮರ್ಥ್ಯವನ್ನು ಹೊಂದಿವೆ. ಆದರೆ ಮೀಮಾಂಸಕರು ಈ ಸಂಸ್ಕಾರಗಳಿಗೆ ಪದದ ಅರ್ಥವನ್ನು ಬೋಧಿಸುವ ವಿಶೇಷ ಶಕ್ತಿಯನ್ನು ಹೇಳುತ್ತಾರೆ. ಇದು ಅನಗತ್ಯ ಮತ್ತು ಅಸಂಗತವೆಂದು ವಿಮರ್ಶಕರು ಟೀಕಿಸುತ್ತಾರೆ.

ನ್ಯಾಯ ಮತ್ತು ಮೀಮಾಂಸೆಗಳಲ್ಲಿ ಇನ್ನೊಂದು ಸ್ವಾರಸ್ಯಕರವಾದ ವ್ಯತ್ಯಾಸವೂ ಇದೆ. ನ್ಯಾಯದ ಪ್ರಕಾರ ಶಬ್ದ ಮತ್ತು ಅರ್ಥಗಳ ಸಂಬಂಧವು ಸಿದ್ಧವಾಗುವುದು



'ಸಮಯ'ದಿಂದ. ಇಲ್ಲಿ 'ಸಮಯ'ವೆಂದರೆ ಭಾಷೆಯನ್ನು ಬಳಸುವ ಸಮುದಾಯ ಅಥವಾ ಭಾಷೆಯ ಮೂಲಪುರುಷನಾದ ಪರಮಾತ್ಮನು ಸೃಷ್ಟಿಯ ಆದಿಯಲ್ಲಿ ಏರ್ಪಡಿಸಿದ ಸಂಪ್ರದಾಯ. ಆದರೆ ಮೀಮಾಂಸೆಯ ಪ್ರಕಾರ ಶಬ್ದಾರ್ಥಗಳ ಸಂಬಂಧವು ನಮಗೆ 'ಕೊಡಲ್ಪಟ್ಟಿದ್ದು'. ಅದು ಔತ್ಪತ್ತಿಕ – ಸಹಜ ಮತ್ತು ಅನುತ್ಪಾದಿತ; ಅದು ಅಪೌರುಷೇಯ – ಅಂದರೆ ಯಾವ ವ್ಯಕ್ತಿಯಿಂದಲೂ ಉಂಟಾದುದಲ್ಲ. ಇದು ದೇವರನ್ನೂ ಒಳಗೊಳ್ಳುತ್ತದೆ. ಮೀಮಾಂಸೆಯ ಪ್ರಕಾರ ಸೃಷ್ಟಿಕರ್ತನಾದ ಪರಮಾತ್ಮನ ಅಸ್ತಿತ್ವವಿಲ್ಲ. ರೂಢಿ ಅಥವಾ ಸಂಪ್ರದಾಯವು ಭಾಷೆಯನ್ನು ಕಂಡುಕೊಂಡಿದೆಯೇ ಹೊರತು ಸೃಷ್ಟಿಸಲಿಲ್ಲ. ಈ ವಿಷಯದಲ್ಲಿ ಮೀಮಾಂಸಕರು ವೈಯಾಕರಣರಿಗೆ ತುಂಬ ಹತ್ತಿರದವರು. ಪಾಣಿನಿಯ ವ್ಯಾಕರಣ ಸೂತ್ರಗಳಿಗೆ ವಾರ್ತಿಕಗಳನ್ನು ಬರೆದ, ಬಹುಶಃ ಕ್ರಿ.ಶ. ೩ನೆಯ ಶತಮಾನದವನಾದ ಕಾತ್ಯಾಯನನು ಶಬ್ದ, ಅರ್ಥ ಮತ್ತು ಅವುಗಳ ಸಂಬಂಧ ಈ ಮೂರೂ 'ಸಿದ್ಧ' – 'ಸಹಜ ಅಥವಾ ಸೃಷ್ಟಿರಹಿತ' ವೆನ್ನುತ್ತಾನೆ. ಆದರೆ ಮೀಮಾಂಸಕರು ಮುಂದಿನ ವೈಯಾಕರಣರಂತೆ ಪದ ಅಥವಾ ವಾಕ್ಯವು ಅಖಂಡವಾದ, ಕಾಲಕ್ರಮಗಳಿಲ್ಲದ ಒಂದು ಘಟಕವೆಂಬುದನ್ನು ಒಪ್ಪುವುದಿಲ್ಲ; ಸ್ಫೋಟ ಸಿದ್ಧಾಂತವನ್ನು ವಿರೋಧಿಸುತ್ತಾರೆ. ಅವರ ಪ್ರಕಾರ ಪದವು ಅನೇಕ ವರ್ಣ ಅಥವಾ ಧ್ವನಿಗಳ ಸೇರ್ಪಡೆಯಿಂದ ಸಿದ್ಧಗೊಂಡ ಸಂಯುಕ್ತವಸ್ತುವೇ ಹೊರತು ಅಖಂಡವಸ್ತುವಲ್ಲ. ಅರ್ಥಬೋಧೆಯ ವಿಷಯದಲ್ಲಿ ನೈಯಾಯಿಕರನ್ನು ಅನುಮೋದಿಸಿ ಪೂರ್ವವರ್ಣಗಳ ಉಚ್ಚಾರಣೆಯ ಸಂಸ್ಕಾರಗಳಿಂದ ಸಹಕೃತವಾದ ಅಂತ್ಯವರ್ಣದ ಉಚ್ಚಾರಣೆಯು ಅರ್ಥವನ್ನು ಬೋಧಿಸುವುದೆನ್ನುತ್ತಾರೆ.

ವೈಯಾಕರಣರಿಗೆ ನ್ಯಾಯ ಮತ್ತು ಮೀಮಾಂಸೆಗಳು ಪ್ರತಿಪಾದಿಸಿದ ಭಾಷಾ ಸಿದ್ಧಾಂತವು ಸಮ್ಮತವಾಗಲಿಲ್ಲ. ಅವರು ಉಚ್ಚರಿಸಿದ ಶಬ್ದವೇ ಬೇರೆ, ಕ್ರಮವಾಗಿ ಉಚ್ಚರಿತವಾದ ವರ್ಣ ಅಥವಾ ಧ್ವನಿಗಳೇ ಬೇರೆ ಎಂದು ಭಾವಿಸುತ್ತಾರೆ. ಈ ವ್ಯತ್ಯಾಸವನ್ನು ಸ್ಫೋಟ - ಧ್ವನಿ ಭೇದವು ಗ್ರಹಿಸುತ್ತದೆ. ಆದರೆ ಈ ಭೇದವನ್ನು ವಿವರಿಸುವ ಹಾಗೂ ಸ್ಫೋಟದ ಸ್ವರೂಪವನ್ನು ವಿಶದಪಡಿಸುವ ಹಲವಾರು ಸಿದ್ಧಾಂತಗಳು ಪ್ರಚಲಿತವಾಗಿದ್ದವು. ಭರ್ತೃಹರಿಯು ಇಂಥ ಹಲವಾರು ಪ್ರಾಚೀನ ಸಿದ್ಧಾಂತಗಳನ್ನು ಪರಾಮರ್ಶಿಸಿ ತನ್ನ ಸಿದ್ಧಾಂತವನ್ನು ಸ್ಥಾಪಿಸಿದ್ದಾನೆ. ಅದು ಉತ್ತರಕಾಲೀನ ವೈಯಾಕರಣರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದೆ.

**ಮಾತುಕತೆ ೭೮**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೨೬೫೬೪೬

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಸವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಐವತ್ತು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು, ಮುದ್ರಣ: ಅಚ್ಚುಮೆಚ್ಚು, ಹೆಗ್ಗೋಡು

---

**ಮೇ ೨೦೦೬ ವರ್ಷ ಇಪ್ಪತ್ತು ಸಂಚಿಕೆ ಎರಡು**

---


| | | |
|---|---|---|
| ೧. | **ಹೆಣ್ಣು ಮತ್ತು ಹಿಂಸೆ** | |
| | ಎಂ. ಎಸ್. ಆಶಾದೇವಿ | ಪುಟ ೦೨ |
| ೨. | **ಕಣ್ಮರೆಗೊಳಿಸಲ್ಪಟ್ಟ ಪ್ರತಿಭಾ** | |
| | ಪಟ್ಟಾಭಿರಾಮ ಸೋಮಯಾಜಿ | ಪುಟ ೦೮ |
| ೩. | **ಶಬ್ದ ಮತ್ತು ಜಗತ್ತು – ಶಾಬ್ದಜ್ಞಾನ, ಸ್ಫೋಟ ಸಿದ್ಧಾಂತ** | |
| | ಬಿ.ಕೆ. ಮತಿಲಾಲ್; ಕನ್ನಡಕ್ಕೆ: ಎಂ.ಎ. ಹೆಗಡೆ | ಪುಟ ೨೪ |


second cover

---

**MAATHUKATHE** MAY. 2006 (YEAR 20 ISSUE 2)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.50 (FIFTY ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**

Third cover

**ಅಕ್ಷರ ಪ್ರಕಾಶನ**

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

| | |
|---|---|
| **ತೇಜಸ್ವಿ ಕಥನ** (ವಿಮರ್ಶೆ: ಟಿ.ಪಿ. ಅಶೋಕ) | ರೂ. ೮೦ |
| **ಶಿವರಾಮ ಕಾರಂತ: ಎರಡು ಅಧ್ಯಯನಗಳು** | |
| (ವಿಮರ್ಶೆ, ಮರುಮುದ್ರಣ: ಟಿ.ಪಿ. ಅಶೋಕ) | ರೂ. ೮೫ |
| **ಕುವೆಂಪು ಕಾದಂಬರಿ: ಎರಡು ಅಧ್ಯಯನಗಳು** | |
| (ವಿಮರ್ಶೆ: ಟಿ.ಪಿ. ಅಶೋಕ) | ರೂ. ೫೫ |
| **ದಾವ್ ದ ಜಿಂಗ್** (ಅನುವಾದ: ಯು.ಆರ್. ಅನಂತಮೂರ್ತಿ) | ರೂ. ೭೦ |
| **ಕಲ್ಲ ಪಾರಿವಾಳಗಳ ಬೇಟ** (ಕವನಗಳು: ಎಸ್. ಮಂಜುನಾಥ್) | ರೂ. ೬೦ |
| **ಸಂಸ್ಕಾರ** (ಕಾದಂಬರಿ, ಮರುಮುದ್ರಣ: ಯು.ಅರ್, ಅನಂತಮೂರ್ತಿ) | ರೂ. ೭೦ |
| **ಭಾರತೀಪುರ** | |
| (ಕಾದಂಬರಿ, ಮರುಮುದ್ರಣ: ಯು.ಅರ್, ಅನಂತಮೂರ್ತಿ) | ರೂ. ೧೧೫ |
| **ವಿಜ್ಞಾನ-ಸಂಸ್ಕೃತಿ** (ರೊದ್ದಂ ನರಸಿಂಹ ಅವರ ಬರಹಗಳ ಅನುವಾದ | |
| ಅನು: ಅಕ್ಷರ ಕೆ.ವಿ.) | ರೂ. ೭೦ |
| **ನಾಣೇಭಟ್ಟನ ಸ್ವರ್ಗದ ಕನಸು ಮತ್ತು ಇನ್ನೆರಡು ಮಕ್ಕಳ ನಾಟಕಗಳು** | |
| (ಗಜಾನನ ಶರ್ಮ) | ರೂ. ೭೫ |
| **ಕ್ರೌಂಚ ಪಕ್ಷಿಗಳು** (ಕಥಾಸಂಲನ: ವೈದೇಹಿ) | ರೂ. ೬೦ |
| **ಕೆ.ವಿ. ಸುಬ್ಬಣ್ಣ ಅವರ ಆಯ್ದ ಲೇಖನಗಳು** | |
| (ಹದಿನೈದು ಲೇಖನಗಳ ಸಂಕಲನ) | ರೂ. ೧೦೦ |
| **ಗಲಿವರಾಯಣ** (ಅನುವಾದ: ಬಿ.ಎಸ್. ವಿದ್ಯಾರಣ್ಯ) | ರೂ. ೯೦ |
| **ವಿದಿಶೆಯ ವಿದೂಷಕ** (ನಾಟಕ: ಪಠ್ಯ ಆವೃತ್ತಿ: ಕೆ.ವಿ. ಸುಬ್ಬಣ್ಣ) | ರೂ. ೩೦ |
| **ನಾಪತ್ತೆಯಾದ ಗ್ರಾಮಾಫೋನು ಮತ್ತು ಇತರ ಪ್ರಬಂಧಗಳು** | |
| (ಎಸ್. ದಿವಾಕರ್) | ರೂ. ೧೫೦ |
| **ಹೈಬ್ರಿಡ್ ಕಥೆಗಳು** (ಆರ್ಯ) | ರೂ.೬೫ |
| **ಅಲೆಗಳಲ್ಲಿ ಅಂತರಂಗ** (ವೈದೇಹಿ ಕಥೆಗಳು ೧೯೭೯-೨೦೦೪) | ರೂ ೪೦೦ |
| **ವಿಮರ್ಶೆಯ ವಿನ್ಯಾಸ** (ವಿಮರ್ಶೆ - ಡಾ.ಸಿ.ವಿ. ಪ್ರಭುಸ್ವಾಮಿಮಠ) | ರೂ ೪೦ |
| **ಕೊನೆಯ ಬ್ರಾಹ್ಮಣ** (ತೆಲುಗು ಆತ್ಮಕಥನವೊಂದರ ಆಯ್ದ ಭಾಗಗಳ | |
| ಅನುವಾದ ಮತ್ತು ಪರಿಚಯ - ಡಾ. ಡಿ. ವೆಂಕಟ ರಾವ್) | ರೂ ೩೫ |
| **ಸ್ತ್ರೀಮತವನುತ್ತರಿಸಲಾಗದೆ ?** (ಸಾಹಿತ್ಯ-ಸಂಸ್ಕೃತಿ ಕುರಿತ ಲೇಖನಗಳು | |
| ಡಾ. ಎಂ.ಎಸ್. ಆಶಾದೇವಿ) | ರೂ ೯೦ |
| **ಅರಬಿ ಎಂಬ ಕಡಲು** (ಕವನಗಳು - ಹಾ.ಮ. ಕನಕ) | ರೂ ೫೦ |